"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ: 23.11.2000ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆಯೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕರ್ನಾಟಕ ಮಾರಾಟ ತೆರಿಗೆ (2ನೇ ತಿದ್ದುಪಡಿ) ವಿಧೇಯಕ, 2000.

2) ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 2000.

8. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ (ಮುಂದು)

(i) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ 2000.

+ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು 2000ದ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಸದನದಲ್ಲಿ ಮಂಡಿಸಿದ್ದು, ಇಂತಹ ವಿಧೇಯಕವನ್ನು ತಂದಿರುವುದಕ್ಕೆ ನಾನು ಮೊದಲನೆಯದಾಗಿ ಸರ್ಕಾರವನ್ನು ಅಭಿನಂದಿಸಲಿಚ್ಛಿಸುತ್ತೇನೆ. ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರಾಗಿರುವ ಪ್ರೊ. ಬಿ.ಕೆ. ಚಂದ್ರಶೇಖರ್ ರವರು ಹೇಳಿರುವಂತೆ, ಸದರಿ ವಿಧೇಯಕ ಕಾನೂನಾಗಿ ಐವತ್ತು ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದ ತಕ್ಷಣವೇ ಬಂದಿದ್ದರೆ, ಕಳೆದ ಐವತ್ತು ವರ್ಷಗಳಲ್ಲಿ ದೇಶದಲ್ಲಿ ಜರುಗಿದ ಅನೇಕ ಅನಾಹುತಗಳನ್ನು ನಾವು ಕಾಣುವುದಕ್ಕಾಗುತ್ತಿರಲಿಲ್ಲ. ಆದರೂ ಈ ಕುರಿತಾದ ವಿಧೇಯಕ ಇವೊತ್ತು ಬಂದಿದೆ. ಮೊದಲು ಈ ವಿಧೇಯಕ ತಮಿಳುನಾಡಿನಲ್ಲಿ 1997ನೇ ಮೇ ತಿಂಗಳಿನಲ್ಲಿ ಜಾರಿಗೆ ಬಂದಿತು. ಪ್ರಾಯಶಃ ಈ ದೇಶದಲ್ಲಿ ಮಾಹಿತಿ ಪಡೆಯುವ ಹಕ್ಕನ್ನು ಜಾರಿಗೆ ಕೊಟ್ಟಂಥ ಮೊದಲ ರಾಜ್ಯ ತಮಿಳುನಾಡು. ನಂತರ ಅದೇ ರೀತಿ ಗೋವಾ ರಾಜ್ಯದಲ್ಲಿ 1997ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಜಾರಿಗೆ ಕೊಟ್ಟರೆ, 1998ನೇ ಮೇ ತಿಂಗಳಿನಲ್ಲಿ ಮಧ್ಯಪ್ರದೇಶ ರಾಜ್ಯ ಜಾರಿಗೆ ಕೊಟ್ಟಿತ್ತು. ತೀರಾ ಇತ್ತೀಚೆಗೆ ಎಂದರೆ 2000ನೇ ಮೇ ತಿಂಗಳಿನಲ್ಲಿ ರಾಜಸ್ಥಾನ ಸರ್ಕಾರ ಕೂಡ ಮಾಹಿತಿ ಹಕ್ಕಿನ ಮಹತ್ವವನ್ನು ಮನಗಂಡು, ಈ ಹಕ್ಕನ್ನು ನಾಗರಿಕರಿಗೆ ಕೊಟ್ಟಿದೆ. ಸಂವಿಧಾನದ ರೀತ್ಯವೇ ಮಾಹಿತಿ ಹಕ್ಕನ್ನು ನಾಗರಿಕರಿಗೆ ಕೊಡಬೇಕಾಗಿತ್ತು. ತಡವಾಗಿಯಾದರೂ ಇವೊತ್ತು ನಮ್ಮ ರಾಜ್ಯದಲ್ಲಿ ಈ ಕುರಿತಾದ ಮಸೂದೆಯನ್ನು ತರುತ್ತಿರುವುದಕ್ಕೆ ನಾನು ಮತ್ತೊಮ್ಮೆ ಸ್ವಾಗತಿಸುತ್ತೇನೆ. ಈಗಾಗಲೇ ಮಸೂದೆ ಕುರಿತು ಭ್ರಷ್ಟಾಚಾರದ ಬಗ್ಗೆ ಕಾಮಗಾರಿ ವಿಳಂಬವಾಗಿರುವುದರ ಬಗ್ಗೆ ಮಾನ್ಯ ಸಚಿವರು ಹೇಳಿದರು. ಮಾನ್ಯ ಅಧ್ಯಕ್ಷರೆ, ಯಾವುದೇ ಸರ್ಕಾರ it should be SMART GOVEARNMENT

ಸ್ಮಾರ್ಟ್ ಗವರ್ನಮೆಂಟ್ ಎಂದರೆ Yes, our Chief Minister is a smart personality. ಆ ರೀತಿಯಲ್ಲಿ ಹೇಳುತ್ತೇವೆ. ಸ್ಮಾರ್ಟ್ ಗವರ್ನಮೆಂಟ್ ಎಂದರೆ, 'ಎಸ್' ಎಂದರೆ It should be simple Government ಜನರಿಗೆ ಅರ್ಥವಾಗುವ ರೀತಿಯಲ್ಲಿ ಸರಳತೆ ಇರಬೇಕು. 'ಎಂ' ಎಂದರೆ it should be a moral Government. ನೈತಿಕತೆ ಕೂಡ ಇಟ್ಟುಕೊಂಡಿರಬೇಕು. A means it should be accountable to the people; R-means it sholuld be a responsive Government and T-means it should be a transparent Government. ಇವತ್ತು ಏನು ಮಾಹಿತಿ

5.00 ಪಿ.ಎಂ.

ಹಕ್ಕನ್ನು ಕೊಡುತ್ತಿದ್ದೀರಿ, ಇದರ ಪ್ರಕಾರ ಆರ್ಟ್ ಅಂತ ಇದೆ. ಅಕೌಂಟಬಲ್, ರೆಸ್ಪಾನ್ಸಿಬಲ್, ಮತ್ತು ಟ್ರಾನ್ಸ್‌ಪರೆಂಟ್, ಈ ಮೂರನ್ನು ಇವತ್ತು ಜನತೆ ಸರ್ಕಾರದಿಂದ ಎದುರು ನೋಡುವಂತರ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇವತ್ತು ನಾವು ಆಡಳಿತದಲ್ಲಿ ಕಾಣುತ್ತಿರುವ ಅನೇಕ ವಿಚಾರಗಳಲ್ಲಿ ಬಹಳ ಮುಖ್ಯ ಕಾರಣ ಅಂತ ಹೇಳಿದರೆ, ಅಧಿಕಾರಶಾಹಿ ಹತ್ತಿರ ಇರುವ ಒಂದು ದೊಡ್ಡ ಶಕ್ತಿ, ಅದು ರಹಸ್ಯ. ಮಾನ್ಯ ಸಚಿವರಾದ ಬಿ.ಕೆ. ಚಂದ್ರಶೇಖರ್‌ರವರ ಅನುಭವದಲ್ಲಿ, ನಾವು ಹೋದರೆ ಮಾಹಿತಿ ಕೊಡುವುದಿಲ್ಲ; ಇಲ್ಲ ಅಂತ ಹೇಳುತ್ತಾರೆ. ನಿಮಗೇಕೆ? ನಿಮಗೆ ಲೆಟರ್ ಬರೆಯುತ್ತೇನೆಂದು ಹೇಳುತ್ತಾರೆ. ಈ ರೀತಿ ಆ 'ರಹಸ್ಯ' ಏನು ಕಾಪಾಡುತ್ತಿದ್ದಾರೆ ಅದು ಆ ಅಧಿಕಾರಶಾಹಿಯ ದೊಡ್ಡ ಶಕ್ತಿ. ನಾನು ಮೊನ್ನೆ ಓದುತ್ತಿದ್ದೆ; ಈ ಮಾಹಿತಿ ಹಕ್ಕು ಇದ್ದರೆ ಎಷ್ಟು ಅನುಕೂಲ ಎನ್ನುವುದಕ್ಕೆ ಒಂದು ಸಾಕ್ಷಿ. ಆಂಧ್ರಪ್ರದೇಶದಲ್ಲಿ ಸುಮಾರು 15 ವರ್ಷಗಳ ಹಿಂದೆ ಒಂದು ಬ್ರಿಡ್ಜ್ ಕಟ್ಟಿದ್ದರು. ಆ ಬ್ರಿಡ್ಜ್ ಒಂದೆರಡು ತಿಂಗಳುಗಳ ಹಿಂದೆ ಬಹಳ ದೊಡ್ಡ ಮಳೆ ಬಂದು ಕೊಚ್ಚಿಕೊಂಡು ಹೋಯಿತು. ಆ ಬ್ರಿಡ್ಜ್ ಕೊಚ್ಚಿಕೊಂಡು ಹೋದಾಗ ಅಲ್ಲಿನ ಜನತೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ತಮ್ಮ ಆಕ್ರೋಶವನ್ನು ವ್ಯಕ್ತಮಾಡಿದರು. ತಕ್ಷಣ ಅಲ್ಲಿನ ಮುಖ್ಯಮಂತ್ರಿಗಳು ಕೂಡ ಆಕ್ರೋಶಗೊಂಡು ಮತ್ತೆ ಬ್ರಿಡ್ಜ್ ಕಟ್ಟಿಕೊಳ್ಳಿ ಅಂತ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರು. ಮತ್ತೆ 20 ಲಕ್ಷಕ್ಕೆ ಬ್ರಿಡ್ಜ್ ಕಟ್ಟಿದರು. ಕರೆಕ್ಟ್ ಆಗಿ 25 ದಿವಸಕ್ಕೆ ಮಳೆ ಬಂದು ಆ ಬ್ರಿಡ್ಜ್ ಸಹ ಕೊಚ್ಚಿಕೊಂಡು ಹೋಯಿತು. ಅಂದರೆ ಇವತ್ತು ಕಾಮಗಾರಿಗಳಲ್ಲೂ ಕೂಡ ಬಹಳ ಸೀಕ್ರೆಸಿ ಅಡಗಿದೆ. ಯಾವ ಕಾಮಗಾರಿ ಏನು? ಅದರ ಎಸ್ಟಿಮೇಟ್ ಏನು? ಅದರ ಕ್ವಾಲಿಟಿ ಏನು? ಇದು ಆ ಒಂದು ಕಾಮಗಾರಿಯಿಂದ ಉಪಯೋಗ ಪಡೆಯುವಂತಹ ವ್ಯಕ್ತಿಗೆ ಗೊತ್ತಾಗುತ್ತಿಲ್ಲ. ನಮ್ಮ ರಸ್ತೆಯಲ್ಲಿ ಟಾರ್ ಹಾಕುತ್ತಾರೆ. ಆ ಟಾರ್ ಹಾಕುವ ಥಿಕ್‌ನೆಸ್ ಏನು? ಅದರ ಕ್ವಾಲಿಟಿ ಏನು? ಅಂತ ನನಗೆ ಗೊತ್ತಾಗಬೇಕು. ನನ್ನ ಊರಿನಲ್ಲಿ ಒಂದು ಬ್ರಿಡ್ಜ್ ಆಗುತ್ತಿದೆ, ಆ ಬ್ರಿಡ್ಜ್‌ನ ಎಸ್ಟಿಮೇಟ್ ಏನು? ಯಾವ ರೀತಿ ಕಟ್ಟುತ್ತಾರೆ ಎನ್ನುವುದು ನನಗೆ

ಗೊತ್ತಾಗಬೇಕು. ಅದು ಕೇವಲ ಊರಿನ ಕಂಟ್ರಾಕ್ಟರ್ ಮತ್ತು ಇಂಜಿನಿಯರಿಗೆ ಗೊತ್ತಾದರೆ ಹಾಳಾಗುವುದು ನಾನು, ಅವರಿಬ್ಬರೂ ಉದ್ಧಾರವಾಗುತ್ತಾರೆ. ಆ ದಿಕ್ಕಿನಲ್ಲಿ ಇವತ್ತು ಬಹಳ ಒಳ್ಳೆಯ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಒಳ್ಳೆಯ ಕಾರ್ಯಕ್ರಮವನ್ನು ಸ್ವಾಗತಿಸೋಣ. ಇನ್ನೂ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಏನು ಈ ಒಂದು ವಿಧೇಯಕವನ್ನು ಮಂಡಿಸಿದ್ದಾರೆ ಇದು It is incomplete step in the right direction. Right direction is correct but not a complete step. ಈ ವಿಧೇಯಕವನ್ನು ಮಾನ್ಯ ಸಚಿವರಾದ ಪ್ರೊಫೆಸರ್ ಬಿ.ಕೆ. ಚಂದ್ರಶೇಖರ್ ಅವರು ಮಂಡಿಸಿದ್ದಾರೆ. ಅವರ ಮನಸ್ಸಿಗೂ ಸಹ ಗೊತ್ತಿದೆ. ಈ ವಿಧೇಯಕದಲ್ಲಿರುವ ಲೋಪ, ಇದರಲ್ಲಿರುವ ಕೊರತೆ, ಇದು ಅವರ ಮನಸ್ಸಿಗೂ ಗೊತ್ತಿದೆ. ಪ್ರಾಯಶ: ಆ ಕೊರತೆಗೆ ಕಾರಣ ಏನು ಅಂಥ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದ ಅಧಿಕಾರಶಾಹಿಯೇ ಇರಬಹುದು. ನೀವು ಆ ಹಕ್ಕು, ಈ ಹಕ್ಕು ಕೊಟ್ಟುಬಿಟ್ಟರೆ ಬಹಳ ಕಷ್ಟವಾಗುತ್ತದೆಂದು, ಸಚಿವ ಸಂಪುಟದ ಮೇಲೆ ಅಥವಾ ಸಚಿವರ ಮೇಲೆ ಬಹಳ ಒತ್ತಡ ತಂದು ಈ ರೈಟ್-ಟು-ಇನ್‌ಫರ್‌ಮೇಷನ್ ಅಂತ ಏನು ಇಟ್ಟಿದ್ದೀರಾ ಆ ರೈಟ್ ಕೂಡ ಮೊಟಕುಗೊಳಿಸುವುದರಲ್ಲಿ ಈ ರಾಜ್ಯದ ಅಧಿಕಾರಶಾಹಿ ಯಶಸ್ವಿಯಾಗಿದೆ ಅಂತ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ ತಮಿಳುನಾಡು, ರಾಜಸ್ಥಾನ, ಮಧ್ಯಪ್ರದೇಶ, ಗೋವಾ, ಮತ್ತು ಕೇರಳ ಈಗ ದೆಹಲಿ ಮತ್ತು ಕೇಂದ್ರ ಸರ್ಕಾರ ಅವರು ಕೂಡ ಈಗ ತಯಾರಾಗುತ್ತಿದ್ದಾರೆ. ಈ ರೈಟ್-ಟು-ಇನ್ ಫರ್‌ಮೇಷನ್ ಕೊಡುವುದಕ್ಕೆ ನಾನು ರಾಜಸ್ಥಾನದ್ದು ಒಂದು ಉದಾಹರಣೆ ಕೊಡುತ್ತೇನೆ. ರಾಜಸ್ಥಾನದಲ್ಲಿ ತಾವು ಹೇಳಿದ ಹಾಗೆ ರಿಯಲ್ ಗ್ರೌಂಡ್ ಮೂವ್‌ಮೆಂಟ್ ಆಯಿತು. ದೊಡ್ಡ ನ್ಯಾಷನಲ್ ಮೂವ್‌ಮೆಂಟ್ ಆಯಿತು. ಶ್ರೀಮತಿ ಅರುಣ್ ರೈ ಅವರ ಹೆಸರು ತಮಗೆ ಗೊತ್ತಿದೆ. ಇವತ್ತು ಅವರು ಆ ಮಾಹಿತಿಯನ್ನು ಪಡೆದಿರುವುದಕೋಸ್ಕರ ಆ ವಿಲೇಜ್ ಪಟವಾರಿ ಯಾರು ಇದ್ದಾನೆ, ಅವನು ಕೂಡ ತುದಿಗಾಲಲ್ಲಿ ನಿಂತಿದ್ದಾನೆ, ನಾಳೆ ನನಗೆ ಏನಾಗುತ್ತದೆಯೋ ಅಂತ, ಈ ಮಾಹಿತಿ ಗ್ರಾಮಸ್ಥರಿಗೆ ತಿಳಿಯುತ್ತದೆ, ಈ ಮಾಹಿತಿ ಊರಿನವರಿಗೆ ತಿಳಿಯುತ್ತದೆ, ನಾನು ಸ್ವಲ್ಪ ಹುಷಾರಾಗಿ ಇರಬೇಕು ಅಂತ. ನಾನು ಈ ಸದನದಲ್ಲಿ ಒಂದು ಸಾರಿ ಹೇಳಿದ್ದೆ. ಸರ್ಕಾರ ಮತ್ತು ಸರ್ಕಾರದಲ್ಲಿರುವವರು ಸರಿಯಾಗಿ ನಡೆಯಲಿಕ್ಕೆ ಎರಡು ಅಂಶ ಇರಬೇಕು. ಒಂದು ಭಯ; ಏನೋ ಶಿಕ್ಷೆ ಕಾದಿದೆ ನಾನು ಸರಿಯಾಗಿ ಕೆಲಸ ಮಾಡದಿದ್ದರೆ ಅಂತ, ಭಯ ಸಾಕಷ್ಟು ಸಲ ಆಗುವುದಿಲ್ಲ, ನಾನು ಮ್ಯಾನೇಜ್ ಮಾಡುತ್ತೇನೆ ಎನ್ನುವಂತಹ ಒಂದು ಧೈರ್ಯ ಬರುತ್ತದೆ. ಆ ಭಯ ಇಲ್ಲದಿದ್ದರೆ ಕೊನೇಪಕ್ಷ ನಾಚಿಕೆಯಾದರೂ ಇರಬೇಕು. ನಾನು ಮಾಡುವಂತಹ ಕೆಲಸವನ್ನು ಯಾರೋ ನೋಡುತ್ತಾರೆ, ಯಾರೋ ನೋಡುವಾಗ ನಾನು ಈ ಕೆಲಸವನ್ನು ಮಾಡುವುದಕ್ಕೆ ಹೋಗಬಾರದು, ಭಯ ಮತ್ತು ನಾಚಿಕೆ ಈ ಎರಡು ಅಂಶಗಳು ಇಲ್ಲದೇ ಇರುವಾಗ

ಪ್ರಾಯಶಃ ಜನಸಾಮಾನ್ಯರ ಬಾಳು ಅವನ ಬದುಕು ಬಹಳ ದುಸ್ಥರವಾಗುತ್ತದೆ. ಆ ಅಧಿಕಾರಿ ಶಾಹಿಯ ಅಟ್ಟಹಾಸ ಬಹಳ ಜೋರಾಗುತ್ತದೆ. ಪ್ರಾಯಶಃ ಈ ಒಂದು ವಿಧೇಯಕದಿಂದ ಕೊನೆಯ ಪಕ್ಷ ನಾಚಿಕೆ ಎನ್ನುವಂತಹ ಒಂದು ಎಲಿಮೆಂಟನ್ನಾದರೂ ಕೂಡ ನಾವು ಈ ಅಧಿಕಾರಿಶಾಹಿಗಳ ಮೇಲೆ ಇಂಜೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಂತ ನನ್ನ ಅನ್ನಿಸಿಕೆ. ಈಗ ನಾನು ಈ ವಿಧೇಯಕದಲ್ಲಿರುವ ಕೊರತೆಗಳನ್ನು ಮತ್ತು ಲೋಪಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸೆಕ್ಷನ್ 2(ಬಿ)ನಲ್ಲಿ ಒಂದು ಡೆಫನಿಷನ್ ಇದೆ. ಅದೇನೆಂದರೆ 2(b)``Information" means information relating to any matter in respect of the affairs of the administration or decision of a public authority; ಇದು ಬಹಳ ಒಳ್ಳೆಯದು. ಮಾಹಿತಿಗೆ ಒಂದು ಡೆಫನಿಷನ್ ಕೊಟ್ಟಿದ್ದಾರೆ. ಅದೇ 2(ಡಿ)ನಲ್ಲಿ ``Right to Information" means right of access to information from any public authority:- (i) by obtaining certified copies of any records: (ii) by obtaining diskettes. floppies etc., ಇದೆಲ್ಲಾ ಡೀಟೇಲ್ ಆಗಿದೆ. ಈಗ ನಾನು ಯಾವುದೋ ಒಂದು ಕಛೇರಿಗೆ ಹೋಗಿ, ಯಾವುದೋ ಒಂದು ಫ್ಲಾಪಿ, ಯಾವುದೋ ಒಂದು ಡಿಸ್ಕೆಟ್‌ನಲ್ಲಿ ಅಂದರೆ ಯಾವುದೋ ಒಂದು ರಿಜಿಸ್ಟರ್‌ನಲ್ಲಿ ನನಗೆ ಬೇಕಾದ ಮಾಹಿತಿ ಯಾವ ಪೇಜ್‌ನಲ್ಲಿದೆ ಅಂತ ನನಗೆ ಗೊತ್ತಾಗಬೇಕು, ಅದು ಹೇಗೆ ಗೊತ್ತಾಗಬೇಕು? ತಾವು ಹೇಳಿದ್ದೀರಿ, ಬಹಳ ಸುಲಭವಾದ ಒಂದು ಬೆಲೆಯನ್ನು ಇಟ್ಟಿದ್ದೇವೆಂದು. ನಾನು ಇಡೀ ರಿಜಿಸ್ಟರ್‌ನ ಸರ್ಟಿಫೈಡ್ ಕಾಪಿ ಕೊಡಿ ಅಂತ ಕೇಳುವುದಕ್ಕೆ ಆಗುತ್ತದೆಯೇ? ಹಾಗೆ ಕೇಳುವುದಕ್ಕೆ ಆಗುವುದಿಲ್ಲ. ಆದಕ್ಕೆ ನಾನು ಸರ್ಕಾರವನ್ನು ಕೇಳಿಕೊಳ್ಳುವುದು Right to Information means, right of access to information and INSPECTION. I should have that right to inspect.After inspecting only, ನನಗೆ ಗೊತ್ತಾಗಬೇಕು, ನನಗೆ ಯಾವ ಪೇಜು ಬೇಕಾಗಿದೆ? ನನಗೆ ಯಾವ ಮೈಕ್ರೋಫಿಲಂ ಬೇಕಾಗಿದೆ? ನನಗೆ ಯಾವ ಖಾತಾ ಬೇಕಾಗಿದೆ? ಎಷ್ಟನೇ ಪೇಜ್‌ನಿಂದ ಎಷ್ಟನೇ ಪೇಜ್‌ವರೆಗೂ ನನಗೆ ಬೇಕಾಗಿದೆ ಎನ್ನುವುದು ನನಗೆ ಬಹಳ ಮುಖ್ಯ. If you don't provide the right of inspection, the whole idea behind this right to access for information is defeated. ಆದ್ದರಿಂದ ದಯವಿಟ್ಟು ನಾನು ಸರ್ಕಾರವನ್ನು ಕೇಳಿಕೊಳ್ಳುವುದು ಏನೆಂದರೆ ತಾವೇನು ಒಂದು ಮಹತ್ತರವಾದ ಹೆಜ್ಜೆಯನ್ನು ಇಡುತ್ತಿದ್ದೀರಿ ಆ ಹೆಜ್ಜೆಯನ್ನು ಇಡುವಾಗ, Right to inspection should become part and parcel of this right of access for information. ಇದನ್ನು ಸರ್ಕಾರ ಮನಗಾಣಬೇಕು. ಇದರ ಔಚಿತ್ಯ, ಇದರ ಅಗತ್ಯತೆಯನ್ನು ಸರ್ಕಾರ ಮನಗಂಡು ನೀವು ಡೆಫನೇಶನ್‌ನಲ್ಲಿ ಬೇಕಾದರೆ

ಸೇರಿಸಿಬಿಡಿ; Right to information means right of access to information and inspection from any public authority. ಆ ಒಂದು ಪದವನ್ನು ಸೇರಿಸಿದರೆ ಪ್ರಾಯಶಃ ಮಿಕ್ಕಿದೆಲ್ಲಾ ಕೂಡ ಅದಕ್ಕೆ ಪೂರಕವಾಗಿ ಸೇರಿಕೊಳ್ಳುತ್ತದೆ. ಇದನ್ನು ಸರ್ಕಾರ ಮನಗಾಣಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ನೀವು ತಾಲ್ಲೂಕು ಆಫೀಸ್‌ಗೆ ಹೋಗಿ ತಮಗೆ ಬೇಕಾದ ದಾಖಲೆಯನ್ನು ಕೇಳುತ್ತೀರಿ. ಈ ವಿಧೇಯಕದ ಪ್ರಕಾರ ದಾಖಲೆ ಕೊಡಬೇಕು. ಆ ದಾಖಲೆಯಲ್ಲಿ ಮ್ಯುಟೇಶನ್ ಎನ್ನುವ ಒಂದು ಕಾಲಂ ಇದೆ. ಯಾರ ಹೆಸರು, ಯಾವ ಸರ್ವೆ ನಂಬರು ಅಂತ ಇರುತ್ತದೆ. ಅದನ್ನೆಲ್ಲಾ ನೋಡಿ ಆಮೇಲೆ ತಹಶೀಲ್ದಾರ್ ಸಹಿ ಮಾಡುತ್ತಾರೆ. ತಾವು ಸಹ ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತೀರಿ. ಆಮೇಲೆ ಗುಮಾಸ್ತನನ್ನು ಆ ಕಡೆ ಕರೆದುಕೊಂಡು ಹೋಗಿ ಮೊದಲನೆ ಕಾಲಂನಲ್ಲಿ ಏನು ಹೆಸರು ಇರುತ್ತದೆ, ಆ ಹೆಸರನ್ನು ಎರೈಜ್ ಮಾಡಿ ಇದನ್ನು ಇಟ್ಟುಕೊಂಡು ಅವನಿಂದ ಸರ್ಟಿಫೈಡ್ ಕಾಪಿ ತೆಗೆದುಕೊಂಡು ಕೋರ್ಟಿಗೆ ಹೋಗಿ ಇಂಜಕ್ಷನ್ ಆರ್ಡರ್ ತೆಗೆದುಕೊಂಡರೆ ಏನು ಮಾಡುವುದು?

ಶ್ರೀ ಎಸ್. ಸುರೇಶ್ ಕುಮಾರ್ :— ಆ ಗುಮಾಸ್ತ ಯಾರು ಇದ್ದಾನೆ if he becomes ``purchasable" ಏನು ಬೇಕಾದರೂ ಆಗುತ್ತದೆ. ಕೈಯಲ್ಲಿ ಕೊಡಬೇಡಿ, ಅವನಿಗೆ ತೋರಿಸಿ.

ಶ್ರೀ ಕಾಗೋಡು ತಿಮ್ಮಪ್ಪ :— ಇಂತಹ ಗ್ರಾಮದ, ಇಂತಹ ಸರ್ವೆ ನಂಬರು ಯಾರಿಗೆ ಮಂಜೂರಾಗಿದೆ ಅಂತ ಕೇಳಿದರೆ ಅವರು ಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :— ಅವರು ಅದೇ ಕೊಡುತ್ತಾರೆಂದು ನನಗೇನು ಗೊತ್ತು?

ಶ್ರೀ ಕಾಗೋಡು ತಿಮ್ಮಪ್ಪ :— ತಾವು ಕೇಳಿರುತ್ತೀರಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ :— ತಾವು ಈ ರೀತಿ ಮಾಡುವಾಗ ನೀವು ಬರೀ ಡಾರ್ಕರ್‌ಫೇಸಸ್ ನೋಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. When you are giving a riht to a citizen, give him that full right. ಈ ಹಾಫ್-ಹಾರ್ಟೆಡ್-ಅಥವಾ ಹಾಫ್-ಬಾಯಿಲ್ಡ್ ಏಕೆ? ಇದು ನಾನು ಇಲ್ಲಿ ಹೇಳುವ ಅಂಶ. ನೀವು ಹೇಳುವುದನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಈ ದೇಶದಲ್ಲಿ ಏನು ಬೇಕಾದರೂ ಆಗುತ್ತದೆ ಅಥವಾ ಈ ದೇಶದಲ್ಲಿ ಏನು ಬೇಕಾದರೂ ಆಗುವುದಿಲ್ಲ. ಹಾಗಿದ್ದರೂ ಕೂಡ ಈ ರೈಟ್-ಟು-ಇನ್ ಫರ್ಮೇಷನ್‌ನಿಂದ ಒಂದು ಆ ಥಿಂಕಿಂಗ್‌ನಲ್ಲಿ

ಇವತ್ತು ಬಂದಿದೆ. ಅದನ್ನು ನಾವು ಮಾಡುತ್ತಿದ್ದೇವೆ. ಅದರ ಬಗ್ಗೆ ನಾವು ಮುಂದಕ್ಕೆ ಚರ್ಚೆ ಮಾಡೋಣ. ತಮ್ಮ ಗಮನಕ್ಕೆ ತರುವ ಇನ್ನೊಂದು ವಿಚಾರವೇನೆಂದರೆ, ಮಧ್ಯಪ್ರದೇಶದಲ್ಲಿ ಒಬ್ಬ ಡಿವಿಷನಲ್ ಕಮೀಷನರ್ ಅಲ್ಲಿ ಇನ್ನೂ ರೈಟ್ ಆಫ್ ಇನ್‌ಫರ್ಮೇಷನ್ ಬರುವುದಕ್ಕಿಂತ ಮುಂಚೆ, ತನ್ನ ವ್ಯಾಪ್ತಿಯ ರೇಷನ್ ಅಂಗಡಿಗಳೇನಿದೆ, ಆ ಅಂಗಡಿಗಳ ರಿಜಿಸ್ಟರ್ ಸಾರ್ವಜನಿಕರ ಇನ್ಸ್‌ಪೆಕ್ಷನ್‌ಗೆ ಲಭ್ಯವಿದೆ ಎನ್ನತಕ್ಕಂಥ ಒಂದೇ ಒಂದು ಸ್ಟೇಟ್‌ಮೆಂಟ್ ಕೊಟ್ಟ ತಕ್ಷಣ, ಅಲ್ಲಿ ಯಾವ ಮಟ್ಟದಲ್ಲಿ ಪರಿಣಾಮವಾಯಿತು ಎಂಬುದನ್ನು ನಾನು ಕೇಳಬಲ್ಲೆ. ನಾನು ಆಗಲೇ ಹೇಳಿದಂತೆ, 'ನಾಚಿಕೆ' ಮತ್ತು 'ಭಯ'ಕ್ಕಾಗಿ ಈ ಇನ್ಸ್‌ಪೆಕ್ಷನ್ ಬಹಳ ಅಗತ್ಯವಿದೆ. ಸೆಕ್ಷನ್ (4)ರ ಹೆಡ್ಡಿಂಗ್ 'ರೈಟ್ ಟು ಇನ್‌ಫರ್ಮೇಷನ್' ಎಂದು ಇದೆ. this is a misnomer; ಆ ಸೆಕ್ಷನ್ ಅನ್ನು ಪೂರ್ತಿಯಾಗಿ ಓದುತ್ತಾ ಹೋದರೆ ನನಗನ್ನಿಸುತ್ತದೆ it is actually the right of the Government not to give information. ಯಾವ ಇನ್‌ಫರ್ಮೇಷನ್ ಕೊಡುವುದಿಲ್ಲ, ಯಾವ ಇನ್ ಫರ್ಮೇಷನ್ ಲಭ್ಯವಿಲ್ಲ ಎನ್ನುವುದನ್ನೇ ಆ ಸೆಕ್ಷನ್ ಅಡಿಯಲ್ಲಿ ಹೇಳುತ್ತಾ ಹೋಗಿದ್ದೀರೇ ಹೊರತು ಯಾವುದನ್ನು ಕೊಡುತ್ತೇವೆ ಎಂದು ಸರ್ಕಾರ ಹೇಳಿಲ್ಲ. It is totally a misnomer. ಹೆಡ್ಡಿಂಗ್‌ನಲ್ಲಿ Right to information ಎಂದು ಇದೆ. ಆದರೆ ಅಲ್ಲಿ ಏನಿದೆ ಎಂದರೆ, No person shall be given the information information the disclosure of which would prejudicially affect the sovereignty and integrity of India. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಎರಡನೆಯದಾಗಿ, information relating Cabinet papers including the records of the deliberations of the Council of Ministers. ಅದನ್ನೂ ನಾನು ಒಪ್ಪಿಕೊಳ್ಳುತ್ತೇನೆ, ಮುಂದುವರೆದು ಅದರಲ್ಲಿ information the disclosure of which would harm, frankness and candour... ಹೀಗೆ ಹೇಳುತ್ತಾ ಹೋಗುತ್ತಾರೆ. ಆದರೆ ಸೆಕ್ಷನ್ ಹೆಡ್ಡಿಂಗ್‌ನಲ್ಲಿ Right to information ಎಂದು ಇದೆ. ಆದರೆ ಅದರ ಕೆಳಗಡೆ it is stated not to give information ಎಂದು ಇದೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಇದು ಬಹಳ ಮುಖ್ಯವಾದುದು. Subject to the provision of this Act every citizen shall have the right to information. ಅದು Omnibus provision, ಅದನ್ನು ಯಾರೂ ಇಂಟರ್‌ಫಿಯರ್ ಮಾಡುವುದಕ್ಕಾಗುವುದಿಲ್ಲ. ಆದರೆ ಎಕ್ಸೆಪ್ಷನ್ಸ್‌ನಲ್ಲಿ ಅದರಲ್ಲಿ ಬರುತ್ತವೆ. ಅದರಲ್ಲಿ ಅಂತಹದ್ದೇನೂ Misnomer ನನಗೆ ಕಾಣುತ್ತಿಲ್ಲ.

SRI S. SURESH KUMAR :— Exception has become a rule here. ಅದು ಬಹಳ ದೊಡ್ಡದಾಗಿ ಬಂದಿದೆ. ಈ ಮಸೂದೆಯ ಸೆಕ್ಷನ್ 4(ಬಿ)ಯಲ್ಲಿ information relating to Cabinet papers including records of the deliberations of the Council of Ministers, Secretaries and other Officers.

ಇತ್ಯಾದಿ ನಮೂದಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇದೆ. ನಾನೊಬ್ಬ ಶಾಸಕ. ಶಾಸಕರಿಗೆ ಅಂದರೆ ಚುನಾಯಿತ ಪ್ರತಿನಿಧಿಗಳಿಗೆ ಏನೇನು ಮಾಹಿತಿ ಲಭ್ಯವಾಗುತ್ತದೋ ಆ ಮಾಹಿತಿಯೆಲ್ಲಾ ಒಬ್ಬ ಸಿಟಿಜನ್‌ಗೆ ಲಭ್ಯವಾಗಬಾರದೇ? should it not be available to an ordinary citizen? ಆ ಮಾಹಿತಿ ನನಗೆ ಲಭ್ಯವಾದ ಮೇಲೆ it should be available to an ordinary citizen also. ಅದಕ್ಕೋಸ್ಕರ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಸೆಕ್ಷನ್ 4(ಸಿ) ಮತ್ತು 4(ಡಿ) ಏನಿದೆ, ಇದರ ಬಗ್ಗೆ ಸರ್ಕಾರ ಮತ್ತೊಂದು ಸಲ ಯೋಚನೆ ಮಾಡಬೇಕಾಗಿದೆ. omnibus ಅಂತ ಏನು ಹೇಳಿದಿರಿ, omnibus ರೀತಿ ಇದ್ಯಾವುದೂ ಕೂಡ ಕೊಡುವುದಿಲ್ಲ ಎಂದು ತಳ್ಳಿಹಾಕಿ ಬಿಡುವುದು, ಈ ರೈಟ್ ಟು ಇನ್‌ಫರ್ಮೇಷನ್ ಏನಿದೆ ಅದಕ್ಕೆ ಬಹಳ ಒಂದು ತೊಡಕಾದ ಕ್ರಮವನ್ನು ನೀವೇ ಸೃಷ್ಟಿಸಿಕೊಂಡು ಬಿಟ್ಟಿದ್ದೀರಿ. ಆ ಸೆಕ್ಷನ್ 4(ಡಿ)ನಲ್ಲಿ ಸರ್ಕಾರ ``information, the disclosure of which would harm, frankness and candour of internal discussions. "Who will decide about the frankness and candour of internal discussions being harmed? who is that authority to decide about it? ನೋಡಪ್ಪ ಇದು ಬಹಳ frankness ಗೆ ತೊಂದರೆಯಾಗುತ್ತದೆ, ಇದು ಬಹಳ candour ಗೆ ತೊಂದರೆಯಾಗುತ್ತದೆ, ಅದಕ್ಕೋಸ್ಕರ ನಾನು ಕೊಡುವುದಿಲ್ಲ ಎಂದು who is that person who will decide? Are we not allowing an element of discreation her again? ಅದಕ್ಕೋಸ್ಕರ ಸರ್ಕಾರ ಇದನ್ನು ಯೋಚನೆ ಮಾಡಬೇಕು. ಮಸೂದೆಯಲ್ಲಿ ಮುಂದುವರೆದು ಏನು ಹೇಳಲಾಗಿದೆ ಎಂದರೆ including inter departmental or intra departmental notes ಆ `including' ಎನ್ನುವ ಪದ ಬಹಳ ವೈಡ ಸ್ಕೋಪ್ ಕೊಡುತ್ತದೆ. Anybody and everyboday can take shelter ಅದಕ್ಕೋಸ್ಕರ ಆ `including' ಎಂಬ ಪದವನ್ನು ಬಿಟ್ಟು `specifically' ಎನ್ನುವ ಒಂದು ಪದವನ್ನು ಸೇರಿಸಿ. That is more appropriate and apt. ``information the disclosure of which would harm, frankness and candour of internal discussions specifically inter departmental or intra departmental notes, correspondence and papers.." I think that is an excellent thing. ಅದನ್ನು ಸರ್ಕಾರ ಯೋಚಿಸಬೇಕು. ಸರ್ಕಾರ ಯೋಚಿಸಿ ಅದನ್ನು ಈ ವಿಧೇಯಕದಲ್ಲಿ ಇಂಪ್ಲಿಮೆಂಟ್ ಮಾಡಿದರೆ ಆಗ ಜನತೆಗೆ ನಾವು ನಿಜವಾದ ರೈಟ್ ಆಫ್ ಇನ್‌ಫರ್ಮೇಷನ್ ಅನ್ನು ಕೊಟ್ಟಂತಾಗುತ್ತದೆ. ಗೋವಾ ಲೆಜಿಸ್ಲೇಷನ್ ಬಗ್ಗೆ ಮಾನ್ಯ ಸಚಿವರು ಮಾತನಾಡುತ್ತಾ, ಗೋವಾ ಬಹಳ ಚಿಕ್ಕ ರಾಜ್ಯ, ನಮ್ಮ 3-4 ಜಿಲ್ಲೆಗಳು ಸೇರಿದರೆ ಅದೊಂದು ರಾಜ್ಯವಾಗಬಹುದು ಎಂದು ಹೇಳಿದರು. ಸ್ವೀಡನ್ ಕೂಡ ಒಂದು ಚಿಕ್ಕ ದೇಶವೇ ಆಗಿದೆ. That is a country. ನಾವು ಯಾವುದೋ ವಾಸ್ತನೆಸ್,

ಯಾವುದೋ ಪಾಪುಲೇಷನ್ ನೋಡಿ ಮಾಡುವುದಕ್ಕಾಗುವುದಿಲ್ಲ. ಅಲ್ಲೊಂದು ಪ್ರೋಗ್ರೆಸಿವ್ ಲೆಜಿಸ್ಲೇಷನ್ ತಂದಿರುವಾಗ, ಅಲ್ಲೊಂದು ಪ್ರೊ-ಸಿಟಿಜನ್ ಎಂದು ಒಂದು ಲೆಜಿಸ್ಲೇಷನ್ ತಂದಿರುವಾಗ we should try to adopt it here. ಅದರಲ್ಲಿ ಏನು ಹೇಳಲಾಗಿದೆ ಎಂದರೆ, Restrictions on right to information. ``The competent authority may <u>for reasons recorded in writing</u> withhold. information the disclosure or contents of which will prejudicially affect the sovereignty and intyegrity of India. ಅದರ ಬಗ್ಗೆ ನೋ ಪ್ರಾಬ್ಲಂ. ಅದನ್ನು ಯಾರೂ ಪ್ರಶ್ನಿಸುವುದಿಲ್ಲ. ಎರಡನೆಯದಾಗಿ ಏನಿದೆ ಎಂದರೆ information relating to an individual or other information the disclosure of which has no relationship to any activities of the Government," It is excellent. ಮೂರನೆಯದಾಗಿ ಏನಿದೆ ಎಂದರೆ, Papers containing advisc, information, recommendations/ minutes submitted to the Governor. It is O.K. Next, trade ad commerce secrets or any other information protected by law. ಅದನ್ನು ಕೇಳುವುದಕ್ಕಾಗುವುದಿಲ್ಲ. Information whose release would constitute breach of parliament or Legislative Assembly privilege. ಈ ರೀತಿ ಬಹಳ ಸ್ಪೆಸಿಫಿಕ್ಕಾಗಿ ನಾವು ಯಾವುದನ್ನು ಕೊಡುವುದಿಲ್ಲ, ಯಾವುದರ ಮೇಲೆ ರಿಸ್ಟ್ರಿಕ್ಷನ್ ಇದೆ ಎಂದು ಗೋವಾದ ವಿಧೇಯಕದಲ್ಲಿ ಹೇಳಲಾಗಿದೆ.' Omnibuus restriction ಇಲ್ಲಿ ಇಲ್ಲ. ಇದನ್ನು ಕೊಡುವುದಿಲ್ಲ ಎನ್ನುವಂತಹ ವೈಡ್ ಸ್ಕೋಪ್ ರಿಸ್ಟ್ರಿಕ್ಷನ್ ಅವರಿಗೆ ಇಲ್ಲ. ಆ `including' ಎನ್ನುವಂತಹ ಒಂದು ಪದ it gives an opporttunity to our bureaucrats ಅದು ಯಾವುದೇ ಲೆವೆಲ್‌ನಲ್ಲಿರಬಹುದು, to play their own game ಅವರು ಆ ಮಾಹಿತಿಯಯನ್ನು ನಿರಾಕರಿಸುವುದಕ್ಕೆ ಬಹಳ ಒಂದು ಉತ್ತಮವಾದ ಅವಕಾಶವನ್ನು ಈ ವಿಧೇಯಕದ ಸೆಕ್ಷನ್ 4(ಡಿ) ಮೂಲಕ ನೀಡಲಾಗುತ್ತಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೆಕ್ಷನ್ (5)ನಲ್ಲಿ Procedure for supply of information ಎಂದು ಇದೆ. `30 ದಿವಸ' ಇದ್ದುದನ್ನು '15 ದಿವಸ' ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. fifteen working days from the date of receipt of the application. It is excellent. ಇದಕ್ಕೆ ಮತ್ತೊಂದನ್ನು ಸೇರಿಸಬೇಕು ಎಂಬುದು ನನ್ನ ಅನಿಸಿಕೆಯಾಗಿದೆ. ಈ within fifteen working days ಎಂಬುದಾದ ಮೇಲೆ within forty eigt hours- provided further that in the matter of life and personal liberty ಎಂದು ಹಾಕಬೇಕು. ಉದಾಹರಣೆಗೆ ನನ್ನ ಮನೆಯಲ್ಲಿ ಯಾರನ್ನೋ ಅರೆಸ್ಟ್ ಮಾಡಿಕೊಂಡು ಹೋಗಿ ಎಲ್ಲೋ ಹಾಕಿ ಬಿಟ್ಟಿದ್ದಾರೆ ಎಂದು ಇಟ್ಟುಕೊಳ್ಳಿ; His life and personal liberty is involved. ಅಂತಹ ಒಂದು

ಪ್ರಸಂಗದಲ್ಲಿ the information be provided within forty eight hours. ಎಂದು ತಿದ್ದುಪಡಿ ಮಾಡಬೇಕು. ಹೇಬಿಯಸ್ ಕಾರ್ಪಸ್‌ನಲ್ಲಿ 24 ಗಂಟೆಯೊಳಗಾಗಿ ತಂದು ಒಪ್ಪಿಸಿ ಎಂದು ನಾವು ಹೇಳುತ್ತೇವೆ. why not the information in such cases be provided within 48 hours. ಅದೊಂದು ಅಮೆಂಡ್‌ಮೆಂಟ್ ಬಹಳ ಅಗತ್ಯವಾಗಿದೆ. '15 ದಿವಸಗಳಿಗೆ' ಎಂದು ನೀವು ರೆಡ್ಯೂಸ್ ಮಾಡಿದ್ದೀರಿ, ಅದನ್ನು ಉಳಿಸಿಕೊಂಡು ಈ ಪ್ರಸಂಗದಲ್ಲಿ '48 hours' ಅನ್ನುವುದೊಂದು in the matter of life and personal liberty, the information be provided to the applicant within forty eight hours. ಈ ಒಂದು ಅಮೆಂಡ್‌ಮೆಂಟ್ ಬಹಳ ಅತ್ಯಗತ್ಯ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೆಕ್ಷನ್ 7(1)ನಲ್ಲಿ ಅಪೀಲ್ಸ್‌ಗೆ ಸಂಬಂಧಪಟ್ಟಹಾಗೆ ಪ್ರಾವಿಷನ್ ಇದೆ. ಮಾನ್ಯ ಸಚಿವರು ಆಗಲೇ ಇಲ್ಲಿ, ಎರಡು ಹಂತದಲ್ಲಿ ಅಪೀಲ್ ಮಾಡುವುದಕ್ಕೆ ಅವಕಾಶ ಇದೆ, ಒಂದು ಸೂಪೀರಿಯರ್ ಆಫೀಸರ್, ಇನ್ನೊಂದು ಕರ್ನಾಟಕ ಅಪಲೆಟ್ ಟ್ರಿಬ್ಯೂನಲ್ ಎಂದು ಹೇಳಿದರು.

Subject to such rules as may be prescribed, any person-

(i) aggrieved by an order or the competent authority amy within thirty days from the date of receipt of sucu order; or

(ii) who has not received any communication within a period of fifteen working days from the date of making application under Section 5, may within thirty days next after such period appeal to such authority as may be prescribed.

ಎನ್ನುವುದು ನಾನು ರೂಲ್ಸ್‌ನಲ್ಲಿ ಸೇರಿಸುತ್ತೇನೆ ಎಂದು ಮಾನ್ಯ ಸಚಿವರು ಹೇಳಬಹುದು. ``such authority as may be prescribed ಎಂಬುದನ್ನು it should be mentioned as Superiority Authority in the Act itself. ಆಗ ಇನ್ನೇನೋ ಆಟವಾಡುವುದಕ್ಕೆ ನಾವು ಅಧಿಕಾರಿಗಳಿಗೆ ಅವಕಾಶ ಕೊಟ್ಟಂತಾಗುವುದಿಲ್ಲ. So, there is a need to bring an amendment as "Appeal to Superior Officer as may be prescribed.`` Under Section 7(2). "the appellate authority may, after giving the person affected a reasonable opportunity of being heard, pass such order as it deems fit." ಎಂದಿದೆ. ಇದರಿಂದಾಗಿ This gives scope for playing mischief. Suppose. I prefer an Appeal to the Superior Authority and he hears me and passes an order. In the routine he

sends an order copy to given such and such an information. Instead of that, that officer should call for the records, because I am prefering an appeal against rejection of some information. That Superior Officer should call for the records and make copies available to the applicant if it is in accordance with the previsions of this Act. Let himself give the information. The Appellate Authority instead of passing some order and again sending that order to the lower official, if it is suitable, if it is appropriate, let him give the copy. That will save another fifteen days to twenty days. This provision should be added in the Appeal provision.

Under Section (3) you have provided an appeal to te Karnataka Appellate Tribunal. Please re-examine this provision. We know how the Karnataka Appellate Tribunal is functioning. Therefore please examine it and if the Karnataka Lokayukta if it becomes the second Appellate Authority, it will be in the interest of the citizens.

Then, Section 9(1) you have imposed penalty of Rs.2000/- Hon'ble Minister is also aware, that this Rs.2000/- is like "peanuts". Deny the information, make him to suffer and pay Rs.2000/-. We do not which are he vital documents. To the bureacrats, paying Rs. 2000/- may not be difficult. Therefore I suggest the following provision. ``the authority immediate superior to the competent authority may impose a penalty equivalent to half a day's salary of the concerned official for every day of the delay after the day prescribed for giving the information. Everyday, half a day's salary should be deducted till the officer given the information. That will send the right signal. Fixing Rs. two thousand, he will say OK and goes on delaying, there will be no time limit. If you add this provision which I have suggested, this bill be get the requisite teeth. ಆ ಒಂದು ಶಕ್ತಿಯನ್ನು ನಾವು ಕೊಟ್ಟ ಹಾಗಾಗುತ್ತದೆ. ಇವತ್ತು ತಂದಿರುವಂತಹ ಬಿಲ್ಲನ್ನು ನಾವು ಯಾವುದೇ ರೀತಿಯಲ್ಲಿ ವಿರೋಧಿಸುತ್ತಿಲ್ಲ. ಆದರೆ ಇದು ಇನ್ನಷ್ಟು ಶಕ್ತಿಯುತವಾಗಬೇಕು; ಜನಪರವಾಗಬೇಕು.

Let it become a role-model to other States. ಕರ್ನಾಟಕ ಬಿಲ್ ಹೀಗಿದೆ ಎಂದು ಹೇಳಬೇಕು. ಜನತೆಗೆ ವಿಶ್ವಾಸ ಬರಬೇಕು. ಎಲ್ಲಾ ರೀತಿಯಲ್ಲೂ ನಾನು ಮಾನ್ಯ ಸಚಿವರಿಗೆ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. Right to information, penalty clause, superior authority. ನಾನು ಕೊಟ್ಟಿರುವ ಉದಾಹರಣೆಗಳನ್ನು ದಯವಿಟ್ಟು ಗಮನದಲ್ಲಿಟ್ಟುಕೊಂಡು, adversarial politics ಎಂದು ತಿಳಿದುಕೊಳ್ಳದೆ -let this House in one voice pass the Bill. ಮಾಹಿತಿ ದೊರಕುತ್ತದೆ ಎಂದು ಜನರಲ್ಲಿ ವಿಶ್ವಾಸ ಬರಬೇಕು. ನನ್ನ ಖಾತೆ ಡಿಲೇ ಆಗುವುದಕ್ಕೆ ಕಾರಣವೇನೆಂದು ನನಗೆ ಗೊತ್ತಾಗುತ್ತಿದೆ; ನನ್ನ ಊರಿನ ಸಮಸ್ಯೆ ನನಗೆ ಗೊತ್ತಾಗುತ್ತಿದೆ, ಫ್ಲೈ-ಓವರ್ ಏಕೆ ಇನ್ನು ಮುಗಿದಿಲ್ಲವೆಂದು ನನಗೆ ಗೊತ್ತಾಗುತ್ತದೆ, ಈ ಸಂಗತಿಗಳು ಜನರಿಗೆ ಗೊತ್ತಾಗಿ ಜನರಿಗೆ ನಾವು ಏನು ನಿಜವಾದ ಶಕ್ತಿ ಕೊಡಬೇಕೆಂದು ಇದ್ದೇವೆ, ಆ ಶಕ್ತಿ ಇವತ್ತು ಒದಗುತ್ತದೆ. ಕೆಲವರಿಗೆ ಒಂದು ಭಾವನೆ ಇದೆ, ರೈಟ್-ಟು-ಇನ್ ಫರ್ಮೇಷನ್ ಯಾವುದೋ ಶ್ರೀಮಂತ ಜನರಿಗೆ ಇರುವುದು, ಯಾವುದೋ ಎಲೈಟ್ ಜನರಿಗೆ, ಬಗಲಲ್ಲಿ ಚೀಲ ಹಾಕಿಕೊಂಡು ಹೋಗುವ ಇಂಟಲೆಕ್ಚುಯಲ್‌ಗೆ ಇರುವುದು ಎಂದು ತಿಳಿದಿದ್ದಾರೆ. ರಾಜಸ್ಥಾನದಲ್ಲಿ ಮತ್ತು ಮಧ್ಯಪ್ರದೇಶದಲ್ಲಿರುವುದು ನನಗೆ ಗೊತ್ತಿದೆ. ಈ ದೇಶಗಳಲ್ಲಿ ಸಾಮಾನ್ಯ ಜನರಿಗೆ ಒದಗುತ್ತಿರುವ ಶಕ್ತಿಯನ್ನು ಮನಗಂಡು ಈ ಅಮೆಂಡ್‌ಮೆಂಟ್ ಬಗ್ಗೆ ನಾನು ಏನು ಹೇಳಿದ್ದೇನೆ, ಅದನ್ನು ತಳ್ಳಿ ಹಾಕದೆ ಇದರಲ್ಲಾದರೂ ನಮ್ಮ ಹಕ್ಕನ್ನು ರಕ್ಷಿಸಿ ರೈಟ್-ಟು-ಇನ್ ಫರ್ಮೇಷನ್ ನಿಜವಾದ ರೈಟ್ ಆಗುವುದಕ್ಕೆ ನಾನು ತಯಾರಿದ್ದೇನೆ. ನೀವು ಅದಕ್ಕೆ ಗೌರವ ಕೊಟ್ಟು ಈ ಅಮೆಂಡ್‌ಮೆಂಟ್ ತರಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಅಧ್ಯಕ್ಷರೆ, ಹೋದ ವರ್ಷದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ರಾಜ್ಯಪಾಲರ ಭಾಷಣದಲ್ಲಿ ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯತಕ್ಕಂತಹ ಹಕ್ಕು ಕೊಡುತ್ತೇವೆ, ರೈಟ್ ಟು ಇನ್‌ಫರ್ಮೇಷನ್ ಬಿಲ್ ತರುತ್ತೇವೆಂದು ಹೇಳಿದ್ದರಿ, ಏಕೆ ಅದು ಬಂದಿಲ್ಲ ಎಂದು ಕೇಳಿದ್ದಕ್ಕೆ ಈ ಬಿಲ್ ಅನ್ನು ತಯಾರಾಗುತ್ತಿದೆ, ಇಷ್ಟರಲ್ಲೇ ಅದನ್ನು ತರುತ್ತೇವೆಂದು ಹೇಳಿದ್ದರು. ಈಗ ನಾನು ನಿಜವಾಗಿ ಬಹಳ ಸಂತೋಷ ಪಡುತ್ತೇನೆ; ಮಾನ್ಯ ಮುಖ್ಯಮಂತ್ರಿಗಳು ಮತ್ತು ಈ ಸರ್ಕಾರ ಅದರಲ್ಲೂ ವಿಶೇಷವಾಗಿ ಪ್ರೊಫೆಸರ್ ಚಂದ್ರಶೇಖರ್‌ರವರು ಆಸಕ್ತಿ ವಹಿಸಿ ಈ ಮಸೂದೆಯನ್ನು ತಂದಿರತಕ್ಕಂಥದ್ದು ಸ್ವಾಗತಾರ್ಹ. ಇದು ಪ್ರೋಗ್ರೆಸ್ಸಿವ್ ಲೆಜಿಸ್ಲೇಷನ್, ಪ್ರಗತಿ ಪರವಾದ, ಜನ ಪರವಾದ ಒಂದು ಮಸೂದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಮಾಹಿತಿ ಪಡೆಯತಕ್ಕಂತಹ ಹಕ್ಕು ನಾವು ಏನು ಸ್ವಾತಂತ್ರ್ಯ ಬಂದ ತಕ್ಷಣ ನಮ್ಮ ಸಾರ್ವಜನಿಕರು ಹೇಗೆ ಮತದಾನದ ಹಕ್ಕನ್ನು ಪಡೆದುಕೊಂಡರು, ಅವತ್ತೇ ಆ ಸರ್ಕಾರ ಹೇಗೆ ನಡೆಯುತ್ತಿದೆ, ಅವರ ಸರ್ಕಾರ ಯಾವ ರೀತಿ ನಡೆದುಕೊಂಡು ಹೋಗುತ್ತಿದೆ, ಏನೇನು ಮಾಹಿತಿ ಬೇಕು ಎಂದು

ಮಾಹಿತಿ ಪಡೆಯುವುದಕ್ಕಾಗಿ ಈ ಕಾನೂನು ಅವಶ್ಯ ಬರಬೇಕಾಗಿತ್ತು. ಆದರೆ ದುರ್ದೈವ ನಮ್ಮ ಆಡಳಿತಶಾಹಿ ವರ್ಗ 70 ವರ್ಷಗಳ ಹಿಂದೆ ಅಫಿಷಿಯಲಿ ಸೀಕ್ರೆಟ್ ಆಕ್ಟ್ ಎಂದು ಏನಿತ್ತು ಅದು ಬ್ರಿಟೀಷರು ಅವರ ಕಾಲದಲ್ಲಿ ಮಾಡಿದ್ದು; ಅವರ ಕಾಲದಲ್ಲಿ ಏನೇನು ಮಾಡುತ್ತಿದ್ದರು, ಏನೇನು ದೋಚಿಕೊಂಡು ಹೋಗುತ್ತಿದ್ದರು ಎಂದು ನಮ್ಮ ಜನಗಳಿಗೆ ಗೊತ್ತಾಗಬಾರದು ಎಂದು ಆ ಗುಟ್ಟನ್ನು ಕಾಪಾಡುವುದಕ್ಕಾಗಿ ಈ ಕಾನೂನು ಇತ್ತು. ನಾವು ಬಹಳ ಮೊದಲೇ ಈ ಕಾನೂನು ತರಬೇಕಾಗಿತ್ತು, ಆದರೆ ಕೊನೆಗೆ ಈಗ ತರುತ್ತಿದ್ದೇವೆ. ಇದು ಬಹಳ ಸಂತೋಷದ ವಿಚಾರ. ನಮ್ಮ ಪಕ್ಷದ ವತಿಯಿಂದ ನಾವು ವೈಯಕ್ತಿಕವಾಗಿ ಅದನ್ನು ಸ್ವಾಗತ ಮಾಡುತ್ತೇವೆ. ಗೋವಾ ಆಕ್ಟ್ ನಾನು ನೋಡಿದ್ದೇನೆ. ರಾಜಸ್ಥಾನದ ಆಕ್ಟ್ ನೋಡಿದ್ದೇನೆ, ಇದರಲ್ಲಿ ನಮ್ಮ ಮಾನ್ಯ ಸುರೇಶ್ ಕುಮಾರ್‌ರವರು ಬಹಳ ವಿವರವಾಗಿ ಹೇಳಿದ್ದಾರೆ. ಈ ಬಿಲ್ ತಂದು This bill is being tabled not to give information. ಎನ್ನುವ ತರಹ ರಿಸ್ಟ್ರಿಕ್ಷನ್ ಹಾಕಿದ್ದಾರೆಂದು ಕಾಣಿಸುತ್ತದೆ. ಪ್ರೊಫೆಸರ್ ಚಂದ್ರಶೇಖರ್‌ರವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ, ಅದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದರು. ನಾನು ಮತ್ತು ಅವರು ಕೊಡುವ ಸಲಹೆಗಳನ್ನು ಒಪ್ಪಿಕೊಂಡರೆ ಸರ್ವಾನುಮತಿಯಿಂದ ನಾವೆಲ್ಲರೂ ಇಡೀ ವಿಧಾನಸಭೆ ಒಪ್ಪಿಗೆ ಕೊಡುವ ಸನ್ನಿವೇಶ ಬರಬಹುದು. ನಮ್ಮ

5.30 ಪಿ.ಎಂ.

ಸಂವಿಧಾನದಲ್ಲಿ ಹೊಸದಾಗಿ right to freedom, freedom of speech, I tink this is an off-shoot of that provision. Freedom of expression, freedom of speech. ಇವುಗಳ ಬಗ್ಗೆ ಆರ್ಟಿಕಲ್ 19(1ಎ)ನಲ್ಲಿ ಏನು ಅವಕಾಶ ಸಿಕ್ಕಿದೆಯೋ ಅದರ ಸಬ್‌ಸ್ಟಿಟ್ಯೂಟ್ ಇದು. ಒಬ್ಬ ವ್ಯಕ್ತಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೇಗೆ ಪಡೆದುಕೊಳ್ಳುತ್ತಾನೋ ಹಾಗೆಯೇ ಮಾಹಿತಿ ಪಡೆಯುವ ಹಕ್ಕನ್ನು ಪಡೆಯಬೇಕಾಗುತ್ತದೆ. ಇದಕ್ಕಾಗಿಯೇ ಪ್ರತ್ಯೇಕವಾಗಿ ಇಂದು ಒಂದು ವಿಧೇಯಕವನ್ನು ತಂದಿದ್ದಾರೆ. ಇದರಲ್ಲಿ in Goa, information whose disclosure would endanger the life ಎಂದು ಹೇಳಿ ಯಾವ್ಯಾವುದನ್ನು ಕೊಡಬಾರದು ಎಂಬ ಬಗ್ಗೆ ಹೇಳಿದ್ದಾರೆ. ಆದರೆ ಕೊನೆಯಲ್ಲಿ provided the information which cannot be denied to the State Legislature shall not be denied to any person. ಎನ್ನುವ ಕ್ಲಾಸ್ ಒಂದನ್ನು ಹಾಕಿದರೆ ಒಳ್ಳೆಯದು. ಅಂದರೆ ಮಾಹಿತಿಯನ್ನು ಪಡೆಯುವ ಹಕ್ಕು ಶಾಸಕರಿಗೆ ಇರುವ ಹಾಗೆ ಸಾರ್ವಜನಿಕರಿಗೂ ಇರಬೇಕಾಗುತ್ತದೆ. ಇದು ನಿಜವಾದಂಥ ಪ್ರಜಾಪ್ರಭುತ್ವದ ತತ್ವ ಕೂಡ ಆಗಿದೆ. ಆದುದರಿಂದ ಅದರ ಬಗ್ಗೆ ತಿದ್ದುಪಡಿಯಲ್ಲಿ ಸೇರಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ನಮ್ಮನ್ನು ಆರಿಸಿ ಕಳುಹಿಸಿಕೊಡುವ ಜನರಿಗೆ ಕರೆಸಿಕೊಳ್ಳುವ ಹಕ್ಕನ್ನು ಪಡೆದುಕೊಳ್ಳಬೇಕು.

ಶ್ರೀ ಬಿ. ಸೋಮಶೇಖರ್ :— ಇದು ಕೂಡ ಸಂತೋಷವಾದುದೇ ಆಗಿದೆ. ಈ ವಿಚಾರದ ಬಗ್ಗೆ ಚುನಾವಣೆಗಳ ಸುಧಾರಣೆ ವಿಷಯ ಬಂದಾಗ ಮಾತನಾಡೋಣ. ಇನ್ನು ಕೇಂದ್ರ ಸರ್ಕಾರದ ಕೆಲವು ಕಛೇರಿಗಳಿವೆ. ಸುಪ್ರೀಂ ಕೋರ್ಟ್‌ನವರು ಹೇಳಿರತಕ್ಕಂಥ Right to speech and expression guaranteed to the citizens in the Constitution ಏನು ಇದೆ ಇದನ್ನು ಕಾನ್ಸ್‌ಟಿಟ್ಯೂಷನ್‌ನಲ್ಲಿ ಪ್ರಾವಿಷನ್ ತರುತ್ತಿದ್ದೀರಲ್ಲ, the Central Government is not above the Constitution; courts are also not above the Constitution. ಉದಾಹರಣೆಗೆ ಕೇಂದ್ರ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಕಛೇರಿ ಇರಬಹುದು, ಆಹಾರ ನಿಗಮದ ಕಛೇರಿ ಇರಬಹುದು, ಇದರಲ್ಲಿ ದಿನನಿತ್ಯ ಪ್ರೊಕ್ಯೂರ್‌ಮೆಂಟ್ ಆಫ್ ಫುಡ್ ಬಗ್ಗೆ, ಡಿಸ್ಟ್ರಿಬ್ಯೂಷನ್ ಬಗ್ಗೆ, ಕ್ವಾಲಿಟಿ ಬಗ್ಗೆ ರಾಜ್ಯ ಸರ್ಕಾರ ವ್ಯವಹಾರಗಳನ್ನು ಮಾಡುತ್ತಲೇ ಇರುತ್ತದೆ. ಆದುದರಿಂದ ಕೇಂದ್ರ ಸರ್ಕಾರದಿಂದಲೂ ಮಾಹಿತಿ ಪಡೆಯುವ ಸಲುವಾಗಿ ಅದನ್ನೂ ಕೂಡ ಸೇರಿಸಬಹುದು ಎಂದು ನನ್ನ ಅನಿಸಿಕೆ. ಏಕೆಂದರೆ It is enshrined in the Constitution. It is the fundamental right of a citizen which is guaranteed in the Constitution can also be provided under this Act. ಆದುದರಿಂದ ಇದರ ಬಗ್ಗೆ ಯೋಚನೆ ಮಾಡಬೇಕು ಇನ್ನು High Court of Karnataka and other Courts which have the status of courts and whose proceedings are deemed to be judicial proceedings. Take for example, Karnataka Appellate Tribunal- it is the creature of our Legislature. Assistant Commissioner's Court. Deputy Commissioner's Court, Assistant Registar of Co-operativbe Societies, Deputy Registrar of Co-operative Scoeities, they deal with quasi-judicial functions. They all come under this category.

SRI. B.N. BACHE GOWDA :— Sir, Under different provisions, we are entitled for copies. We can apply and take any public document, and even Court Proceedings also. There is no bar. This procedure is governed by different rules in each Department. In this bill of Right to information. ಈಗೇನು ಮಾಡುತ್ತಿದ್ದೇವೆಂದರೆ ಇವುಗಳನ್ನು ಕಡ್ಡಾಯವಾಗಿ ಕೊಡಲೇಬೇಕು ಎಂದು ಮಾಡುತ್ತಿದ್ದೇವೆ. We are already entitled for copies.

ಶ್ರೀ ಬಿ. ಸೋಮಶೇಖರ್ :— ಇನ್ನು ತಾವು ಅಪೀಲ್/ಅಪೀಲೇಟ್ ಟ್ರಿಬ್ಯೂನಲ್‌ಗೆ ಇಟ್ಟಿದ್ದೀರಿ. ಈ ಕೆ.ಎ.ಟಿ. ಕೂಡ it should also come under the purview of this Act. Since the Karnataka Appellate Tribunal is a creation of the

Legislature, the fucntions of the Tribunal should be covered under this Act. Lokayukta is also a creation of the Legislature. The official of Lokayukta are all deputed from the Karnataka State Government. ಲೋಕಾಯುಕ್ತದ ಫಂಕ್ಷನಿಂಗ್ ಬಗ್ಗೆ ಕೂಡ ಈ ವಿಧೇಯಕದ ವ್ಯಾಪ್ತಿಗೆ ತರಬೇಕಾಗುತ್ತದೆ. ಇದಲ್ಲದೇ ವಿಶ್ವವಿದ್ಯಾನಿಲಯ, ರಾಜ್ಯ ಪಾಲರ ಕಛೇರಿಯನ್ನು ಕೂಡ ಸೇರಿಸಿಕೊಳ್ಳಬೇಕು. ಇನ್ನು ಕಾಲಾವಧಿ ಬಗ್ಗೆ 30 ದಿನ ಇದ್ದದ್ದು 15 ದಿನ ಮಾಡಿರುವುದು, 15 ದಿನ ಇದ್ದದ್ದು 8 ದಿನ ಮಾಡಿವುದು ಸರಿ.

> "Information relating cabinet papers including records of the deliberations of the Council of Ministers, Secretaries and oter Officers..." How can this be deleted from the purview? Secretaries to Government are oficers of the Government. They put up note to the cabinet. If the decision is taken due o faulty notings of the officers, and if it is not make known to the public, they will continue to play mischief. Under some other provision you have made a provision for providing diskettes, floppies. In the same way notings also should be provided.

ಯಾವ ಯಾವ ಅಧಿಕಾರಿ ಒಂದು ವಿಚಾರದಲ್ಲಿ ಯಾವ ಯಾವ ಅಭಿಪ್ರಾಯವನ್ನು ಕೊಡುತ್ತಾನೆ ಎಂಬ ಬಗ್ಗೆ ತಾವು ನೋಡಬೇಕು.ಈಗಲೂ ಕ್ಯಾಬಿನೆಟ್ ಡಿಸಿಷನ್ ಆದಮೇಲೆ ಸರ್ಕಾರಿ ಆದೇಶ ಎಲ್ಲರಿಗೂ ಸಿಗುತ್ತಿದೆ. ಆದರೆ ಆ ರೀತಿಯ ಆರ್ಡರ್ ತೆಗೆದುಕೊಳ್ಳಬೇಕಾದರೆ ಯಾವ ಯಾವ ಅಧಿಕಾರಿ ಏನೇನು ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ ಎಂಬುದು ಗೊತ್ತಾಗಬೇಕಾದರೆ ನೋಟಿಂಗ್ಸ್ ಮಾಡಬೇಕಾಗುತ್ತದೆ. ಇನ್ನು ಗೋವಾದಲ್ಲಿ ಮಾಹಿತಿ ಹಕ್ಕಿನ ಸಂಬಂಧ ತಂದಿರುವ ವಿಧೇಯಕದಲ್ಲಿ ಏನು ಹೇಳಿದ್ದಾರೆಂದರೆ,

> "Right to information means right of access to information and includes inspection of works, documents, records, taking notes, exracts and obtaining certified copies of documents or records or taking samples of materials."

As already stated by Mr., Suresh Kumar, Right to Information means it includes Inspection of works, documents, records, taking notes. The persons can take the notes which are in the files.

ಉದಾಹರಣೆಗೆ ಯಾವ ಸ್ಪೆಸಿಫಿಕೇಶನ್ ಪ್ರಕಾರ ವರ್ಕ್ ಮಾಡಿದ್ದಾರೆ, ಅದು ಸರಿ ಇದೆಯೋ ಅಥವಾ ಇಲ್ಲವೋ, ಎಷ್ಟು ಟಾರ್ ಹಾಕಿದ್ದಾರೆ? ಎಷ್ಟು ಸಿಮೆಂಟ್ ಹಾಕಿದ್ದಾರೆ? ಎಂಬುದು ಗೊತ್ತಾದಾಗ ಅದರ ಬಗ್ಗೆ ಇನ್ಸ್‌ಪೆಕ್ಷನ್ ಕೂಡ ಮಾಡಬೇಕಾಗುತ್ತದೆ. ಆ ಆರ್ಡರ್ಸ್ ತೆಗೆದುಕೊಂಡು ಹೋಗಿ ಇನ್ಸ್‌ಪೆಕ್ಷನ್ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಇನ್ನೊಂದು ಜನರಲ್ ಕ್ಲಾಸ್ ಹಾಕಿಬಿಟ್ಟಿದ್ದೀರಿ. Grounds for refusal to supply information in certain cases, you have stated:

> ``Without prejudice to the provisions of Section 4. the competent authority may also reject a request for supply of Information where such request.- (a) is too general in nature and the information sought is of such nature that, it is not required to be ordinarily collected by the public authority."

Who has to say hat it is not required? Suppose, Officer, may say if it is inconvenient to him to supply the information, he may say, it is too general. I cannot supply that information. ಅಂತ ಹೇಳಿದರೆ, ಏನು ಮಾಡುವುದಕ್ಕಾಗುತ್ತದೆ. Who has to consider tis issue? ``Which is available or otherwise outside the Government. I suggest that this provision should be removed. ಇದನ್ನು ತಾವು ತೆಗೆಯಬೇಕಾಗುತ್ತದೆ. ಮತ್ತೆ ನಾನು ಮೊದಲೇ ಹೇಳಿದಹಾಗೆ ಅಪಲೇಟ್ ಟ್ರಿಬ್ಯೂನಲ್ ಕೂಡ ನಮ್ಮ ಸ್ಟೇಟ್ ಗವರ್ನ್‌ಮೆಂಟ್‌ಗಿಂತ ಕೂಡ ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ನಿಂತಿದೆ. ಅದನ್ನು ನೀವು ಕೊಡುತ್ತೀರೋ ಅಥವಾ ಲೋಕಾಯುಕ್ತಕ್ಕೆ ಕೊಡುತ್ತೀರೋ? ಅದು ಲೋಕಾಯುಕ್ತಕ್ಕೆ ಕೊಟ್ಟರೆ ಒಳ್ಳೆಯದು. ಸೆಕೆಂಡ್ ಅಪೀಲ್, ಅದನ್ನು ತಾವು ಮಾಡತಕ್ಕಂಥಾದ್ದು ಒಳ್ಳೆಯದು. Further in the Rajasthan Act, there is a provision that public body shall include offices of all local bodies and other authorities constituted and any enactment of Rajasthan State Legislature for the time being in force. ಅಂದರೆ ಯಾವುದೇ ಆಫೀಸ್ ಆಗಲಿ ನಮ್ಮ ಈ ಕರ್ನಾಟಕ ಸ್ಟೇಟ್ ಲೆಜಿಸ್ಲೇಚರ್‌ನಿಂದ ಅದಂತಹ ಇನ್‌ಫರ್ಮೇಷನ್ ಅನ್ನು ಯಾವುದೂ ಡಿನೈ ಮಾಡುವ ಹಾಗೆ ಇಲ್ಲ. ಅಂದರೆ ನಮ್ಮ ಯೂನಿವರ್ಸಿಟಿಗೆ ಬರುತ್ತದೆ, ಲೋಕಾಯುಕ್ತಕ್ಕೆ ಬರುತ್ತದೆ ಮತ್ತು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್‌ಗೆ ಬರುತ್ತದೆ. ಗೌವರ್ನರ್ ಆಫೀಸ್‌ಗೂ ಬರುತ್ತದೆ, ಅದು ಚಾನ್ಸಲರ್ copy ಬರುತ್ತದೆ. ನಾನು ಉದಾಹರಣೆಗೆ ಹೇಳುತ್ತಿರುವುದು, ಮಾನ್ಯ ಮುಖ್ಯಮಂತ್ರಿಗಳು ಯಾವ ಮಂತ್ರಿಗಳನ್ನು

ಸೇರ್ಪಡೆ ಮಾಡುತ್ತೇವೆಂದು ಹೇಳುತ್ತಾರೆ, ಕೊಡುತ್ತಾರೆ ಅದನ್ನು ನಾವು ಕೊಡಿ ಎಂದು ಕೇಳುವುದಕ್ಕಾಗುವುದಿಲ್ಲ. That has to be kept in secret. ಆದರೆ ಯೂನಿವರ್ಸಿಟಿ ಚಾನ್ಸಲರ್ ಆಗಿರುವುದರಿಂದ ಅಲ್ಲಿಯ ಇನ್‌ಫರ್ಮೇಷನ್ ಅನ್ನೂ ನಾವು ಗವರ್ನರ್ officeಗೆ ಕೊಡಬೇಕಾಗುತ್ತದೆ. ಅದನ್ನು ತಾವು ಒಪ್ಪಿಕೊಂಡರೆ ಬಹಳ ಸಂತೋಷ. ಆದರೆ ಗೋವಾದಲ್ಲಿ ಇನ್ನೊಂದು ಪ್ರಾವಿಸನ್ ಇದೆ. State Council for Right to information. ಈಗ ಇಷ್ಟೆಲ್ಲಾ ಮಾಡಿ ಇದನ್ನು ರಿವ್ಯೂ ಮಾಡುವುದಕ್ಕೆ ಯಾವುದಾದರೂ ಒಂದು ಕೌನ್ಸಿಲ್ ಬಾಡಿ ಇರಬೇಕಾಗುತ್ತದೆ. ಅದನ್ನು ಗೋವಾದಲ್ಲಿ ಮಾಡಿದ್ದಾರೆ. "State Council for Right to information: The Government shall by notification in the official gazette establish with effect from such a day as specified in the notification a Council to be known as State council for Right to information." ಎಂದರೆ ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಥವಾ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಕೌನ್ಸಿಲ್ ಮಾಡಿ ಅದರಲ್ಲಿ ಅಪೋಜಿಷನ್ ಲೀಡರ್, ರಿಟೈರ್ಡ್ ಜರ್ನಲಿಸ್ಟ್, ಎನ್‌ಜಿಓನ ರೆಪ್ರೆಸೆಂಟೇಟೀವ್ಸ್ ಹಾಗೂ ಕೆಲವು ಎಂ.ಎಲ್‌ಎಗಳನ್ನು ಇದರಲ್ಲಿ ಕೊನೆಯಪಕ್ಷ ಆರು ತಿಂಗಳಿಗೆ ಅಥವಾ ಒಂದು ವರ್ಷಕ್ಕೆ ಒಂದು ಸಾರಿ ಕುಳಿತು ರಿವ್ಯೂ ಮಾಡುವುದು; ಅದು ಯಾವ ರೀತಿ ಜಾರಿಗೆ ಬಂದಿದೆ? ಹೇಗೆ ನಡೆಯುತ್ತಿದೆ? ಇದಕ್ಕೆ ಏನಾದರೂ ತಿದ್ದುಪಡಿ ತರುವಂತಹ ಆವಶ್ಯಕತೆ ಇದೆಯೇ? ಇನ್ನು ಅದಕ್ಕೆ ಸುಧಾರಣೆಗಳನ್ನು ಯಾವ ರೀತಿ ಮಾಡಬಹುದು? ಇದನ್ನು ಇನ್ನೂ ಎಫೆಕ್ಟೀವ್ ಆಗಿ ಮಾಡುವ ರೀತಿಯಿಂದ ತಾವು ಇದರಲ್ಲಿ ಪ್ರೊವೈಡ್ ಮಾಡಿಲ್ಲ. ಆ ರೀತಿಯ ಒಂದು ಕೌನ್ಸಿಲ್ ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ ಮತ್ತು ಇಷ್ಟೆಲ್ಲವನ್ನು ತಾವು ಒಪ್ಪಿಕೊಂಡರೆ ನಾವೆಲ್ಲರೂ ಕೂಡ ಬಹಳ ಸಂತೋಷದಿಂದ ಈ ಒಂದು ಮಸೂದೆಯನ್ನು ಅಂಗೀಕರಿಸಲು ನಾವು ಒಪ್ಪಿಗೆ ಕೊಡುತ್ತೇವೆ. ಇದಕ್ಕೆ ನಮ್ಮ ಪಕ್ಷದ ಸಹಕಾರ ಇದೆಯೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+Sri Gundanna Vakil (Aurad) :— this bill is in the interest of the nation and in the interest of the common public. ನಮ್ಮ ಕಡೆ ಹೇಳುತ್ತಾರೆ, ಆಳುವವರಿಗೆ ಕೇಳುವವರು ಬೇಕಾಗುತ್ತದೆ ಎಂದು. ಇದು ಆಳುವವರಿಗೆ ಕೇಳತಕ್ಕಂಥ ಬಿಲ್. ಈ ಬಿಲ್ ಅಪ್ಲೈ ಆಗುವುದು ಯಾವುದಕ್ಕೆಂದರೆ ಆಡಳಿತ ವರ್ಗಕ್ಕೆ ಮತ್ತು ಅಧಿಕಾರಿಗಳಿಗೆ. ನಮ್ಮ ದೇಶದಲ್ಲಿ ಈ ಆಡಳಿತ ವರ್ಗ ಮತ್ತು ಅಧಿಕಾರಿಗಳು ಸರಿಯಾಗಿ ನಡೆದುಕೊಂಡರೆ ನಮಗೆ ಒಳ್ಳೆಯದಾಗುತ್ತದೆ ಎನ್ನುವ ಮಾತಿನ ಹಿನ್ನಲೆಯಲ್ಲಿ ಈ ಬಿಲ್ಲನ್ನು ತೆಗೆದುಕೊಂಡು ಬಂದಿದ್ದಾರೆ. ನಾವು ಯಾವುದೇ ಹೊಸ ಬಿಲ್ ತಂದಾಗ ಅದರ ಲೋಪದೋಷಗಳು ನಮಗೆ ತಕ್ಷಣಕ್ಕೆ ಗೊತ್ತಾಗುವುದಿಲ್ಲ. ಅದು ಚಾಲನೆಗೆ ಬಂದಾಗ

ಮಾತ್ರ ಅದರ ಡಿಫಿಕಲ್ಟೀಸ್ ಏನೆಂದು ಗೊತ್ತಾಗುತ್ತದೆ. ಟೋಟಲ್ ಆಗಿ ಈ ಬಿಲ್ ನೋಡಿದರೆ ಇದು ಜನಹಿತವಾದ ಬಿಲ್ ಇದನ್ನು ಪಾಸ್ ಮಾಡಿದರೆ ಏನೂ ಅಡ್ಡಿ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಆದರೂ ಕೂಡ ಸೆಕ್ಷನ್ 4 ನಲ್ಲಿ ಒಂದು ಕ್ಲಾಸ್ ಇದೆ. information regarding trade or commercial secrets protected by law or information. ನನಗೆ ಅನ್ನಿಸುತ್ತದೆ ಇನ್‌ಫರ್‌ಮೇಷನ್ ರಿಗಾರ್ಡಿಂಗ್ ಟ್ರೇಡ್ ಅಂಡ್ ಕಾಮರ್ಸ್ ಸೆಕ್ಷನ್ 4 Sub-clause 'ಜೆ'ನಲ್ಲಿ ಏನು ಮೆನ್‌ಷನ್ ಮಾಡಿದ್ದಾರೆ ಅದರಂತೆ ಕೆಲವೊಂದು ಇನ್‌ಫರ್‌ಮೇಷನ್ ಕೊಡಬಾರದೆಂದು 'ಜೆ'ನಲ್ಲಿ ಮೆನ್‌ಶನ್ ಮಾಡಿರುವ ಪ್ರಕಾರ ಕಮರ್ಷಿಯಲ್ ಇಂಡಸ್ಟ್ರೀಸ್ ಇನ್‌ಫರ್ಮೇಷನ್ ಕೊಡಬಾರದು ಎಂದು ಮಾಡಿದ್ದಾರೆ. ಇದರಲ್ಲಿ ಏನು ಸೀಕ್ರೇಟ್ ಇರುತ್ತದೆ? ಕಮರ್ಷಿಯಲ್ ಮ್ಯಾಟರ್‌ಗಳಲ್ಲಿ ಇರುವುದು ಟೆಂಡರ್, ಅಗ್ರಿಮೆಂಟ್ ಮತ್ತು ಕ್ವಾಲಿಟೀಸ್, ಇದೆಲ್ಲಾ ಅದರಲ್ಲಿ ಇರುತ್ತದೆ. ಇವರಲ್ಲಿ ಏನು ಸೀಕ್ರೆಸಿ ಇರುತ್ತದೆ ಎಂದು ನನಗಂತೂ ಅರ್ಥವಾಗುವುದಿಲ್ಲ. ಆದುದರಿಂದ ಈ ಕಮರ್ಷಿಯಲ್ ಬಗ್ಗೆ ಸರ್ಕಾರಕ್ಕೆ ರಿಸರ್ವೇಷನ್ ಬೇಡ. ಯಾವುದೇ ಇನ್‌ಫರ್ಮೇಷನ್ ಇದ್ದರೂ ಅದು ಪಬ್ಲಿಕ್ಗೆ ಸಿಗತಕ್ಕಂಥ ವ್ಯವಸ್ಥೆ ಮಾಡಬೇಕು. ಈ ಬಿಲ್‌ನಲ್ಲಿ ಅದರ ಬಗ್ಗೆ ತಡೆಹಿಡಿಯಲಾಗಿದೆ. ಅದರ ಸಲುವಾಗಿ ಇವತ್ತು ನಮ್ಮ ದೇಶದಲ್ಲೆಲ್ಲಾ ಸುಮಾರು 120 ಸ್ಕ್ಯಾಂಡಲ್ಸ್ ಆಗಿವೆ. ಕೋಟಿಗಟ್ಟಲೆ ಹಣಕ್ಕೆ ಸಂಬಂಧಪಟ್ಟಿರತಕ್ಕಂಥ ವಿಚಾರದಲ್ಲಿ ಗೋಟಾಳ, ತೋಪು ಗೋಟಾಳ, ಹರ್ಷದ್ ಮೆಹ್ತಾ ಗೋಟಾಳ, ಬ್ಯಾಂಕ್ ಗೋಟಾಳ, ಮಹೇಂದ್ರ ಗೋಟಾಳ ಇದೆಲ್ಲಾ 108 ಗೋಟಾಳಗಳು ಇವೆ. ಅದೆಲ್ಲಾ ಕಮರ್ಷಿಯಲ್‌ನಲ್ಲಿ ಬರುತ್ತದೆ. ಪರ್‌ಚೇಸಿಂಗ್ ಎಲ್ಲಾ ಇದರಲ್ಲಿ ಬರುವುದರಿಂದ ನನಗೆ ಈ 'ಜೆ ಕ್ಲಾಜ್' ಇದು ಒಳ್ಳೆಯದಲ್ಲ ಎಂದು ನನಗನ್ನಿಸುತ್ತದೆ. ಇದನ್ನು ತಡೆಯಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆಯ ಅದೇರೀತಿ ಸೆಕ್ಷನ್ 4ರಲ್ಲಿ 'ಹೆಚ್' ಕ್ಲಾಜ್ ಇದೆ. ಯಾವುದೇ ಒಂದು ಕೇಸ್ ಇನ್‌ವೆಸ್ಟಿಗೇಷನ್ ಇದ್ದರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಕೊಡಬಾರದು ಎಂದು ಹೇಳುತ್ತಿದ್ದೀರಿ. ಆದರೆ ಇಲ್ಲಿ ನಾನು ಒಂದು ಉದಾಹರಣೆ ಹೇಳುತ್ತೇನೆ. ಪೊಲೀಸರು 307 ಕೇಸ್ ಹಾಕುತ್ತಾರೆ. ಆದರೆ ಅದು 307 ಕೇಸ್ ಇರುವುದಿಲ್ಲ. 307 ಕೇಸ್‌ನಲ್ಲಿ ಅಟೆಂಪ್ಟೆಡ್ ಮರ್ಡರ್ ಕೇಸ್ ಜಡ್ಜ್ ಮಾಡುವುದರಲ್ಲಿ ಸೀರಿಯಸ್‌ನೆಸ್ ಆಫ್ ಅಸಾಲ್ಟ್, ಅವನ ಮೇಲೆ ಗಾಯಗಳು ಹೇಗಿವೆ ಎಂಬುದನ್ನು ನೋಡಿ ಮಾಡುವುದಿದೆ. ಯಾವುದೇ ಎಫ್‌ಐಆರ್ ಇಶ್ಯೂ ಮಾಡಿದ ಮೇಲೆ, ಕಂಪ್ಲೈಂಟ್ ಕೊಟ್ಟಮೇಲೆ ಈ ಅಸಾಲ್ಟ್ ಕೇಸ್ ಮೇಲೆ ಕಂಪ್ಲೈಂಟ್ ಒಟ್ಟಿಗೆ ಆಸ್ಪತ್ರೆಗೆ ಹೋಗುತ್ತಾರೆ. ಅಲ್ಲಿ ಆ ಗಾಯಗಳ ಬಗ್ಗೆ ಚೆಕಪ್ ಆಗಬೇಕಾಗುತ್ತದೆ. ಗಾಯಗಳು ಯಾವರೀತಿ ಇವೆ ಎಂದು ಆಸ್ಪತ್ರೆಗೆ ಹೋಗುತ್ತಾರೆ. ಅಲ್ಲಿ ಆ ಗಾಯಗಳ ಬಗ್ಗೆ ಚೆಕಪ್ ಆಗಬೇಕಾಗುತ್ತದೆ. ಗಾಯಗಳು ಯಾವ ರೀತಿ ಇವೆ ಎಂದು ಆಸ್ಪತ್ರೆ ರಿಜಿಸ್ಟರ್‌ನಲ್ಲಿ ಬರೆದಿರುತ್ತಾರೆ. ಆದರೆ ಪೋಲೀಸರು ಹೆರಾಸ್‌ಮೆಂಟ್ ಮಾಡುವುದಕ್ಕೋಸ್ಕರ 307 ಕೇಸ್ ಹಾಕುತ್ತಾರೆ. ಸೆಷನ್ಸ್ ಕೋರ್ಟ್‌ನಲ್ಲಿ

ಬೇಲ್ ಬೇಕು. ಕನಿಷ್ಠಪಕ್ಷ ಬೇಲ್ ಆಗುವುದಕ್ಕೆ 15 ದಿವಸಗಳು ಬೇಕು. ಮೆಡಿಕಲ್ ದಾಖಲಾತಿಗಳನ್ನು ಆಸ್ಪತ್ರೆ ರಿಜಿಸ್ಟರ್‌ನಲ್ಲಿ ಇರತಕ್ಕಂಥ ಗಾಯಗಳ ದಾಖಲಾತಿಗಳನ್ನು ಕೋರ್ಟ್ ಮುಂದೆ ಕೊಟ್ಟರೆ ತಕ್ಷಣ ಬೇಲ್ ಆಗುತ್ತದೆ. ಆದುದರಿಂದ ಇದರಲ್ಲಿ 'ಹೆಚ್' ಕ್ಲಾಸ್ ಏನಿದೆ ಇನ್ವೆಸ್ಟಿಗೇಷನ್ ಇರತಕ್ಕಂಥ ಕೇಸುಗಳ ಬಗ್ಗೆ ಮಾಹಿತಿ ಕೊಡಬಾರದು ಎಂದರೆ ಮಾಮೂಲಿ ಈ ಒಂದು ಅಸಾಲ್ಟ್ ಕೇಸ್‌ನಲ್ಲಿ 15 ದಿವಸಗಳ ಕಾಲ ಜೈಲ್‌ನಲ್ಲಿ ಕಳೆಯಬೇಕಾಗಿರುತ್ತದೆ. ಇದು ಬಹಳ ಡೇಂಜರಸ್ ಕ್ಲಾಸ್ ಇದರಲ್ಲಿ ಇದೆ. ಅದಕ್ಕೆ ನಾನು ಸನ್ಮಾನ್ಯ ಮಂತ್ರಿಗಳಿಗೆ ಹೇಳುವುದು ಏನೆಂದರೆ, ಈ ಕ್ಲಾಸ್‌ಗೆ ತಾವು ಅಮೆಂಡ್‌ಮೆಂಟ್ ತರಬೇಕು. ಅಥವಾ ಅದನ್ನು ಬಿಡಬೇಕು.

ಪ್ರೊ: ಬಿ.ಕೆ. ಚಂದ್ರಶೇಖರ್:— ತಾವು ಹೇಳುತ್ತಿರುವುದು 2ನೇ ಸೆಕ್ಷನ್ 'ಎಫ್' ಕ್ಲಾಸ್ ಇದೆಯಲ್ಲ ಅದು.

ಶ್ರೀ ಗುಂಡಪ್ಪ ವಕೀಲ್:— ಸೆಕ್ಷನ್ 4ನಲ್ಲಿ 'ಹೆಚ್' ಕ್ಲಾಜ್, ಟ್ರೇಡ್ ಸಿಕ್ರೇಟ್‌ಗೆ ಸಂಬಂಧಪಟ್ಟಿರುವುದು. ಈ ಇನ್‌ವೆಸ್ಟಿಗೇಷನ್ 307 ಕೇಸನ್ನು ಉದಾಹರಣೆಯಾಗಿ ಕೊಟ್ಟು ಸಬ್‌ಮಿಟ್ ಮಾಡುತ್ತಿದ್ದೇನೆ, ಇನ್ವೆಸ್ಟಿಗೇಷನ್ ಪೆಂಡಿಂಗ್‌ನಲ್ಲಿದೆ, ಇದಕ್ಕೆ ಸಬಂಧಪಟ್ಟಂಥ ದಾಖಲಾತಿಗಳನ್ನು ಇಷ್ಯೂ ಮಾಡಲಿಲ್ಲವೆಂದರೆ ಅದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ನಾನು ಇದನ್ನು ಉದಾಹರಣೆಯಾಗಿ 307 ಕೇಸ್‌ನಲ್ಲಿ ಹೇಗೆ ಆಗುತ್ತದೆಂಬುದನ್ನು ಹೇಳುತ್ತಿದ್ದೇನೆ.

ಪ್ರೊ: ಬಿ.ಕೆ. ಚಂದ್ರಶೇಖರ್:— ಮಾನ್ಯ ಗುಂಡಪ್ಪ ವಕೀಲ್‌ರವರೇ, ಅದು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಬಹಳ ಡೀಟೈಲ್ ಆಗಿ ಪ್ರಾವಿಜನ್ ಇದೆ. ನಾವು ಇದರ ಮೂಲಕ ಅದನ್ನು ಟಚ್ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಗುಂಡಪ್ಪ ವಕೀಲ್:— ರೈಟ್ ಆಫ್ ಇನ್‌ಫರ್‌ಮೇಷನ್ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿಲ್ಲ.

ಪ್ರೊ: ಬಿ.ಕೆ ಚಂದ್ರಶೇಖರ್:— ಅದು ಇದರಲ್ಲಿ ಬರುವುದಿಲ್ಲ; ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ, ಅಂತಹ ಸನ್ನಿವೇಶದಲ್ಲಿ ಏನು ಮಾಡಬೇಕು, ಏನು ಮಾಡಬಾರದೆಂದು ಸ್ಪಷ್ಟವಾಗಿದೆ.

ಶ್ರೀ ಗುಂಡಪ್ಪ ವಕೀಲ್:— ಮಾನ್ಯ ಮಂತ್ರಿಯವರೇ, ಬೇಲ್ ಹಾಕಬಹುದೆಂದು ಅಷ್ಟೆ ಇರುವಂಥಾದ್ದು, ಬೇರೆ ಏನೂ ಇಲ್ಲ. ಈ ಇನ್‌ಫರ್‌ಮೇಷನ್ ರೈಟ್ ಕೊಡಬೇಕೆಂದು ನಾನು ಹೇಳುತ್ತೇನೆ, ಮತ್ತೆ ಸೆಕ್ಷನ್ 4 (ಸಿ)ಯಲ್ಲಿ, "Information relating to Cabinet papers including records of the deliverations of the Council of Ministers, Secretaries and other officers." ಎಂದರೆ ಈ ಕ್ಯಾಬಿನೆಟ್

ಡೀಟೈಲ್ಸ್ ಬಗ್ಗೆ, ಪೇಪರ್ಸ್ ಬಗ್ಗೆ ಮತ್ತೆ ಅವರು ತೆಗೆದುಕೊಂಡ ನಡವಳಿಕೆಯ ಬಗ್ಗೆ ಯಾವುದೇ ಇನ್‌ಫರ್‌ಮೇಷನ್ ಸಪ್ಲೈ ಮಾಡಬಾರದೆಂದು ಇದರಲ್ಲಿದೆ. ಆದರೆ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಕೋಟಿಗಟ್ಟಲೆ ಹಣ ಅವ್ಯವಹಾರವಾಗಿದೆ ಎಂದು ಅದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ತನಿಖೆ ಮಾಡಲೆಂದು ವಹಿಸಿಕೊಡಲಾಯಿತು. ಈ ಸಮಿತಿಗೆ ಮಾನ್ಯ ವೈಜನಾಥ್ ಪಾಟೀಲ್‌ರವರು ಚೇರ್ಮನ್ ಆಗಿದ್ದರು, 18 ಜನ ಎಂ.ಎಲ್.ಎಗಳು, ಕುಳಿತು ಪರಿಶೀಲನೆ ಮಾಡಿ, ನಂತರ ಇದರ ಸಮಗ್ರವಾದ ವರದಿಯನ್ನು ಸದನದ ಮುಂದಿಟ್ಟರು. ಈ ವಿಚಾರವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕೆಂದು ಆ ಸಮಿತಿ ರೆಕಮೆಂಡೇಷನ್ ಮಾಡಿತು, ನಂತರ ಇದು ಕ್ಯಾಬಿನೆಟ್ ಮುಂದೆ ಹೋಯಿತು. ಇಲ್ಲಿ ಸಮಿತಿ ಇನ್‌ವೆಸ್ಟಿಗೇಷನ್ ಮಾಡಿ ರೆಕಮೆಂಡ್ ಮಾಡಿದ್ದಂಥಾದ್ದು ಗಣನೆಗೆ ಬರಲಿಲ್ಲ, ಯಾರಯಾರನ್ನೋ ಇಳಿಸಬೇಕೆಂದು ಹೇಳಿ ಇದನ್ನು ಆಫೀಸರ್ಸ್ ಎನ್‌ಕ್ವಯರಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡರು. ಇಂತಹ ಮುಖ್ಯವಾದಂತಹ ಇನ್‌ಫರ್‌ಮೇಷನ್ ಇದೆ. ಈ ರೀತಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡರೂ ಪಬ್ಲಿಕ್ ಮ್ಯಾಟರ್ಸ್‌ಗೆ ಟಚ್ ಆಗತಕ್ಕಂಥ ಮತ್ತು ಸಾರ್ವಜನಿಕರಿಗೆ ಆಸಕ್ತಿ ಇರುವಂತಹ ಮ್ಯಾಟರ್ಸ್ ಇದ್ದರೆ, ಮತ್ತೆ ಕ್ಯಾಬಿನೆಟ್ ನಡವಳಿಕೆಗಳು ಇದ್ದರೂ ಸಹಿತ ಅದನ್ನು ಸಪ್ಲೈ ಮಾಡುವಂತಹ ವ್ಯವಸ್ಥೆ ಈ ಬಿಲ್‌ನಲ್ಲಿ ಬರಬೇಕು. ಅದರ ಸಲುವಾಗಿ ಸೆಕ್ಷನ್ (4) ಸಬ್-ಕ್ಲಾಸ್ 'ಸಿ' ಡೇಂಜರಸ್ ಇದೆ, ಇದನ್ನು ದಯಮಾಡಿ ಕೈಬಿಡಬೇಕೆಂದು ವಿನಂತಿ ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಮಾನ್ಯ ಶ್ರೀನಿವಾಸಗೌಡರೇ, ತಾವು ಮಾತನಾಡಿ, ತಮ್ಮ ಭಾಷಣವನ್ನು ಬೇಗ ಬೇಗ ಮುಗಿಸಿ, ಇನ್ನು ಎರಡು ಬಿಲ್‌ಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ನಾವು ಶಾಸಕರು, ಶಾಸನಗಳನ್ನು ರಚನೆ ಮಾಡುವಂಥಾದ್ದು ನಮ್ಮ ಕರ್ತವ್ಯವಾಗಿದೆ, ಇದಕ್ಕೆ ತಾವು ಸಮಯವನ್ನು ನಿಗದಿ ಮಾಡಿದರೆ ಹೇಗೆ?

ಅಧ್ಯಕ್ಷರು :— ನಾವು ಇನ್ನೂ ಎರಡು ಬಿಲ್‌ಗಳನ್ನು ತೆಗೆದುಕೊಳ್ಳಬೇಕು, ಆದುದರಿಂದ ಬೇಗ ಮುಗಿಸಿ ಎಂದು ಹೇಳಿದೆ.

ಶ್ರೀ ಎಸ್. ಸುರೇಶ್‌ಕುಮಾರ್ :— ಆದರೂ ಶಾಸನ ಮಾಡುವುದರ ಬಗ್ಗೆ ಸಮಯ ನಿಗದಿ ಮಾಡಬೇಡಿ.

ಅಧ್ಯಕ್ಷರು :— ಈ ರೀತಿಯಾಗಿ ಒಬ್ಬೊಬ್ಬರೂ ಅರ್ಧ ಗಂಟೆ ಭಾಷಣ ಮಾಡಿದರೆ ಹೇಗೆ? ಈ ಬಿಲ್‌ಗೆ ನಿನ್ನೆ ಬಿ.ಎ.ಸಿ. ಮೀಟಿಂಗ್‌ನಲ್ಲಿ ಒಂದೂವರೆ ಗಂಟೆಯ

ಕಾಲ ನಿಗದಿ ಮಾಡಿದೆ. ತಾವು ಎಲ್ಲರೂ 7.30 ಗಂಟೆಗೆ ಹೋಗಬೇಕೆಂದು ಹೇಳುತ್ತಿದ್ದೀರಿ, ತಾವುಗಳು 9 ಗಂಟೆಯವರೆಗೂ ಇರಬಹುದಲ್ಲಾ, ಪಾರ್ಲಿಮೆಂಟ್‌ನಲ್ಲಿ 10 ಗಂಟೆಯವರೆಗೂ ಇರುತ್ತಾರೆ. ನೀವು ಆ ರೀತಿ ಕುಳಿತುಕೊಳ್ಳಿ, ನಾನು ತಯಾರಿದ್ದೇನೆ.

ಒಬ್ಬ ಮಾನ್ಯ ಸದಸ್ಯರು :— ನಾವು ತಯಾರಿದ್ದೇವೆ, ಆದರೆ ಇವತ್ತು ಬೇಡ.

ಅಧ್ಯಕ್ಷರು :— ಮಾನ್ಯ ಶ್ರೀನಿವಾಸ ಗೌಡರೆ, ತಾವು ಮಾತನಾಡಿ.

+ಶ್ರೀ ಕೆ. ಶ್ರೀನಿವಾಸ ಗೌಡ ಕುದವನಹಳ್ಳಿ (ಕೋಲಾರ) :— ಮಾನ್ಯ ಅಧ್ಯಕ್ಷರೆ, ಮಾಹಿತಿಗಳನ್ನು ಪಡೆಯಲು ಹಕ್ಕು ಏಕೆ ಬಹಳ ಅಗತ್ಯವೆನ್ನುವುದಕ್ಕಿಂತಲೂ ಈಗ ಎಲ್ಲಾ ಇನ್‌ಫರ್‌ಮೇಷನ್‌ಗಳು ಸಿಗುತ್ತಿವೆ, ಯಾವುದು ಸಿಗುತ್ತಿಲ್ಲವೆನ್ನುವುದನ್ನು ನೀವು ಯಾವುದೇ ಕ್ಲಾಜ್‌ನಲ್ಲೂ ತೋರಿಸಿಲ್ಲ. ಈಗ ಯಾವುದೇ ತಾಲ್ಲೂಕುಗಳಲ್ಲಿ ಕೇಳಿದರೂ ಕೊಡುತ್ತಾರೆ, ಆದರೆ ಆ ಮಾಹಿತಿಗಳನ್ನು ಕೊಡುವುದಕ್ಕೆ ಒಂದೆರಡು ದಿವಸ ಲೇಟ್ ಆಗಬಹುದು. ಇವತ್ತು ಬೇರೆಯವರ ಪಹಣಿ ಬಗ್ಗೆ ಇನ್‌ಫರ್‌ಮೇಷನ್ ಪಡೆಯುವಂತಹ ಹಕ್ಕು ಏನು ತಂದಿದ್ದೀರಿ, ಸೆಕ್ಷನ್ 5ರಲ್ಲಿ it reads.- Provided that the fee payable shall not exceed the actual cost of supplying information. ಎಂದರೆ ಈ ಹಣವನ್ನು ಯಾರು ನಿಗದಿ ಮಾಡುವುದು? ಉದಾಹರಣೆಗೆ ಪಹಣಿಗೆ ವಿಲೇಜ್ ಅಕೌಂಟೆಂಟ್ ನಿಗದಿ ಮಾಡುತ್ತಾನೆ, ಇವತ್ತು ಆ ಪರಿಸ್ಥಿತಿ ಇದೆ, ಇದರಲ್ಲಿ ಎರಡು ಮಾತಿಲ್ಲ. ತಾವು ರೇಟ್ ಮಾಡುವಾಗ ಯಾವ್ಯಾವ ಇನ್‌ಫರ್‌ಮೆಷನ್‌ಗೆ ಎಷ್ಟೆಷ್ಟು ರೇಟ್ ಎಂದು ನಿಗದಿ ಹೇಗೆ ಮಾಡುತ್ತೀರಿ? ಇದಕ್ಕೆ ಒಂದು ನಮೂನೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಇದನ್ನು ಯಾವ ರೀತಿಯಲ್ಲಿ ಬೇಕಾದರೂ ತೆಗೆದುಕೊಳ್ಳಬಹುದು. ಇವತ್ತು 10 ರೂಪಾಯಿಗಳಿಗೆ ಒಂದು ಪಹಣಿ ಕಾಪಿ ಕೊಡುವುದಕ್ಕೆ ನಾಳೆ 25 ರೂಪಾಯಿಗಳೆಂದು ಮಾಡಿದರೂ ಮಾಡಬಹುದು. ತಾವು ಇದನ್ನು ಯಾವ ರೀತಿಯಲ್ಲಿ ನಮೂದು ಮಾಡುತ್ತೀರೆಂಬುದು ಬಹಳ ಮುಖ್ಯವೆಂದು ಹೇಳುತ್ತೇನೆ. ಇದು ಸರಳೀಕರಣವಾಗಬೇಕು, ಏಕೆಂದರೆ ಇನ್‌ಫರ್‌ಮೆಷನ್ ತೆಗೆದುಕೊಳ್ಳುವುದಕ್ಕೆ ಹೋಗಿ "ಸಮಾಜ ಮಾಡುವುದಕ್ಕೆ ಹೋಗಿ, ಮಸೀದಿ ಮೇಲೆ ಬಿದ್ದಹಾಗೆ" ಆಗಬಾರದು. ರೈಟ್ ಆಫ್ ಇನ್‌ಫರ್‌ಮೇಷನ್ ಕೊಟ್ಟು ಅದು ನಮ್ಮ ತಲೆಯ ಮೇಲೆ ಬೀಳುವಹಾಗೆ ಆಗಬಾರದು. ಇದನ್ನು ಸರಳೀಕರಣಗೊಳಿಸುವಂತಹ ಯೋಜನೆ, ಚಿಂತನೆ ಇದರಲ್ಲಿ ಇಲ್ಲ. ನೀವು ಇದರಲ್ಲಿ Fee payable shall not exceed the actual cost of supplying the information ಆಕ್ಚುಯಲ್ ಕಾಸ್ಟ್ ಯಾರು ನಿಗದಿ ಮಾಡುವುದು? ಇದು ಬಹಳ ಪ್ರಾಮಾಣಿಕವಾದಂತಹ ವಿಷಯವಾಗಿದೆ. ನಮ್ಮ ದೇಶದ ವಿಜಿಲೆನ್ಸ್ ಕಮಿಷನರ್ ಶ್ರೀ ವಿಠಲ್ ಎನ್ನುವರರು ಏನು ಹೇಳಿದ್ದಾರೆಂದರೆ, 'ನನ್ನ ಆಸ್ತಿಯ ವಿವರಗಳನ್ನು ಕಂಪ್ಯೂಟರಿಗೆ ಫೀಡ್ ಮಾಡಿದ್ದೇನೆ, ಅದನ್ನು ಯಾರು ಬೇಕಾದರೂ

ನೋಡಬಹುದು' ಎಂದು ಹೇಳಿದ್ದಾರೆ. ಇವತ್ತು ಮಾಹಿತಿಗಳನ್ನು ಪಡೆಯುವ ಹಕ್ಕು ಬೇಕಾಗಿರುವಂಥಾದ್ದು ಬಹಳ ಮುಖ್ಯ. ಅದರಲ್ಲೂ ಇನ್‌ಕಂ-ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ಇವುಗಳ ಬಗ್ಗೆ ಮಾಹಿತಿ ಬಹಳ ಮುಖ್ಯವಾಗಿ ಜನರಿಗೆ ಬೇಕಾಗುತ್ತದೆ, ಏಕೆಂದರೆ ಯಾವುದೇ ಪಕ್ಷದ ಸರ್ಕಾರ ಆಡಳಿತ ನಡೆಸಿದರೂ ಕೂಡ ಇನ್‌ಕಂ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ಎಕ್ಸೈಜ್ ಟ್ಯಾಕ್ಸ್ ಇವುಗಳಲ್ಲಿ ಸೋರಿಹೋಗುವಂತಹ ಹಣದ ಮಾಹಿತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? ಎನ್ನುವಂಥಾದ್ದನ್ನು ಕೂಡ ಚಿಂತನೆ ಮಾಡಬೇಕಾಗುತ್ತದೆ. ಈ ರೀತಿಯಾಗುವುದಕ್ಕೆ ಬೇರೆ ಬೇರೆ ಕಾರಣಗಳು ಇವೆ, ಅದು ಎಲ್ಲರಿಗೂ ಗೊತ್ತಿದೆ. ನಾನು ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ತಾವು ಯಾವ ರೀತಿಯಲ್ಲಿ ದರವನ್ನು ನಿಗದಿ ಮಾಡುತ್ತೀರಿ ಅದನ್ನು ಯಾವ ರೀತಿ ಸರಳೀಕರಣ ಮಾಡುತ್ತೀರೆಂದು ಇದರಲ್ಲಿ ತೋರಿಸಿಲ್ಲ. ನಮ್ಮ ದೇಶದ ಪ್ರಜಾಪ್ರಭುತ್ವದ ಬಗ್ಗೆ ಶ್ರೀ ಬಟರಾನ್ ರಜಲ್‌ರವರು ಏನು ಹೇಳಿದ್ದಾರೆಂದರೆ, ಫ್ರೀ-ಡಾಟ್ ಅಫಿಷಿಯಲ್ ಪ್ರಾಪಗಾಂಡ ಬಹಳ ಫ್ರೀಯಾಗಿದೆ ಎಂದು ಹೇಳಿದ್ದಾರೆ. ನೀವು ಇವತ್ತು ಏನು ಮಾಹಿತಿ ಹಕ್ಕು ಪಡೆಯುವ ಬಗ್ಗೆ ಬಿಲ್ ತಂದಿದ್ದೀರಿ, ಅದು ಸರಳೀಕರಣವಾಗಬೇಕು. ಇವತ್ತು ಮೊರಾಲಿಕ್ ಇನ್ಸಪೆಕ್ಷನ್ ಎಂದು ಹೇಳಿ ನಾವು ಚೀಫ್ ಸೆಕ್ರೆಟರಿಯವರ ಹತ್ತಿರ ಅಥವಾ ಫೈನಾನ್ಸ್ ಕಮೀಶನರ್ ಹತ್ತಿರ ಹೋಗಿ ಎಲ್ಲಾ ದಾಖಲೆಗಳನ್ನು ತೆಗೆಯಿರಿ, ಅದಕ್ಕೆ ಹಣ ಎಷ್ಟು ಇಟ್ಟಿದ್ದೀರಿ? ಇದಕ್ಕೆ ಎಷ್ಟು ಇಟ್ಟಿದ್ದೀರಿ? ಎಂದು ನಾವು ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಹೋದರೆ ಅಲ್ಲಿ ಆ ಫೈನಾನ್ಸ್ ಸೆಕ್ರೆಟರಿ ಕೆಲಸ ಮಾಡುವುದಕ್ಕಾಗುವುದಿಲ್ಲ. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಮೊರ್‍ಯಾಲಿಟಿ ಬರಬೇಕು, ಮಾರಲ್ ಥಿಂಕಿಂಗ್ ಬರಬೇಕು, ಕಮಿಟ್‌ಮೆಂಟ್ ಇರಬೇಕು. ಆಗ ಇನ್ಸ್‌ಪೆಕ್ಷನ್‌ಗೆ ಏನಾದರೂ ಶಕ್ತಿ ಬರುತ್ತದೆ. ಅದಕ್ಕೆ ನೂರಕ್ಕೆ ನೂರರಷ್ಟು ಎಜುಕೇಷನ್ ಕೊಡಬೇಕು, ಇನ್ಸ್‌ಪೆಕ್ಷನ್‌ಗೆ ಬರಬೇಕು, ಮೊರ್‍ಯಾಲಿಟಿ ಆಗಲೇಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಸರಿಯಾಗಿ ಹೇಳಿದರು; ಪಹಣಿ ಮ್ಯುಟೇಷನ್ ಮಾಡಿ ಬರೆಯುವಾಗ ಯಾರು ಏನು ಬೇಕಾದರೂ ಅದರಲ್ಲಿ ಬರೆಯಬಹುದು, ಅದು ಏನೂ ದೊಡ್ಡ ಕೆಲಸವಲ್ಲ. ಮೊನ್ನೆ ದಿವಸ ಐದು ನೂರು ರೂಪಾಯಿಯ ನೋಟುಗಳು ಕಂಪ್ಯೂಟರ್‌ನಲ್ಲಿ ಬಂದವು. ನಮ್ಮ ರಾಜ್ಯದಲ್ಲಿ ಇದನ್ನು ಹಿಡಿದರು. ನಾವು ಈ ಪರಿಸ್ಥಿತಿಯನ್ನು ನೋಡಬೇಕೆಂದು ಹೇಳುತ್ತೇನೆ. ಇವತ್ತು ಫೀ ಸರಳೀಕರಣವನ್ನು ಮಾಡಬೇಕೆಂದು ಹೇಳಿ ಬಿಲ್ ತರುವಂಥಾದ್ದರ ಬಗ್ಗೆ ಸರ್ಕಾರ ಪಾರದರ್ಶಕತೆ ಎಂದು ತೋರಿಸುವುದಕ್ಕೆ ಮಾಡಿದ್ದೀರಾ ಎಂದು ನನ್ನ ಮನಸ್ಸಿನಲ್ಲಿದೆ. ಒಂದು ದಿಕ್ಕಿನಲ್ಲಿ ಯಾವ್ಯಾವ ಆಕ್ಟ್ ಅಮೆಂಡ್‌ಮೆಂಟ್ ಮಾಡಬೇಕೆಂದು ಇದ್ದೀರಿ ಇದನ್ನು ಸರಳೀಕರಣ ಗೊಳಿಸಬೇಕು, ರೂಲ್ಸ್‌ನಲ್ಲಿ ಕೂಡ ಸರಳೀಕರಣಗೊಳಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು, ಅದರಲ್ಲೂ ಮಾನ್ಯ ಚಂದ್ರಶೇಖರ್‌ರವರನ್ನು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ ಮಾಹಿತಿ ಪಡೆಯಲು ಹಕ್ಕು ಇದರ ಬಗ್ಗೆ ಏನು ಬಿಲ್ ತಂದಿದ್ದಾರೆ ಅದನ್ನು ನಾನು ಬಹಳ ಹೃತ್ಪೂರ್ವಕವಾಗಿ, ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ ಹಾಗೂ ಒಬ್ಬ ವಕೀಲನಾಗಿ, ಒಬ್ಬ ಸಾರ್ವಜನಿಕ ವ್ಯಕ್ತಿಯಾಗಿ ಇದರ ಅವಶ್ಯಕತೆ ಎಷ್ಟೆಂಬುದರ ಬಗ್ಗೆ ಒಂದೆರಡು ಮಾತುಗಳನ್ನು ಸೂಕ್ಷ್ಮವಾಗಿ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಸರ್ಕಾರ ಅದರಲ್ಲೂ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇದನ್ನು ತೀರ್ಮಾನ ಮಾಡಿ ಇಂಟ್ರಡ್ಯೂಸ್ ಮಾಡಿದಂಥಾದ್ದು, ಇದರ ಅವಶ್ಯಕತೆ ಬಹಳ ಇತ್ತು. ನನಗೆ ಇನ್ನೂ ಚೆನ್ನಾಗಿ

6.00 ಪಿ.ಎಂ.

ಜ್ಞಾಪಕವಿರುವಂತೆ ನಾವು ಬ್ರಿಟನ್‌ನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಪಬ್ಲಿಕ್ ಡಾಕ್ಯುಮೆಂಟ್ಸ್ ಆಕ್ಟ್ ಅನ್ನುವುದನ್ನು ಬ್ರಿಟಿಷ್ ಪಾರ್ಲಿಮೆಂಟ್ ಪಾಸ್ ಮಾಡಿದೆ. ಯಾವುದನ್ನು ಪಬ್ಲಿಕ್ ಡಾಕ್ಯುಮೆಂಟ್ಸ್ ಎಂದು ಕರೆಯುತ್ತಾರೆ ಅದನ್ನು ಯಾರೇ ನಾಗರೀಕರು ಕೇಳಿದರೂ ಅದನ್ನು ಕೊಡಲೇಬೇಕೆನ್ನುವುದಿದೆ. ಅದೇ ರೀತಿಯಲ್ಲಿ ಮಾಹಿತಿ ಪಡೆಯಲು ಹಕ್ಕು ವಿಧೇಯಕ ಏನಿದೆ ಇದು ಇವತ್ತಿನ ಕಲುಷಿತ ವಾತಾವರಣದಲ್ಲಿ ಒಳ್ಳೆಯ ಭವಿಷ್ಯವಿರುವ ಒಂದು ಪೀಸ್ ಆಫ್ ಲೆಜಿಸ್ಲೇಷನ್ ಎಂದರೆ ತಪ್ಪಾಗಲಾರದು. ಈ ವಿಧೇಯಕ ಭ್ರಷ್ಟಾಚಾರವನ್ನು ಆದಷ್ಟು ಕಡಿಮೆ ಮಾಡುವುದಕ್ಕೆ, ಜನಗಳನ್ನು ಆದಷ್ಟು ಹತ್ತಿರ ತರುವುದಕ್ಕೆ ತಂದಿರುವ ಒಂದು ಪೀಸ್ ಆಫ್ ಲೆಜಿಸ್ಲೇಷನ್. ಆ ಪಕ್ಷ ಈ ಪಕ್ಷವೆನ್ನುವ ಪ್ರಶ್ನೆಯಲ್ಲಿ, ಸರ್ಕಾರವನ್ನು ಯಾರೇ ನಡೆಸಲಿ, this has to be there. Right of the people to go with the Government should not be curtailed. ಯಾವುದೇ ಮಾಹಿತಿಯನ್ನು ಕೊಡದೇ ನಮ್ಮ ಪಾಡಿಗೆ ನಾವು ಆಡಳಿತ ನಡೆಸುತ್ತೇವೆಂದರೆ ಅದೊಂದು ರೀತಿಯ ಆಟೋಕ್ರೆಟಿಕ್ ಸರ್ಕಾರವಾಗುತ್ತದೆಯೇ ಹೊರತು ಡೆಮಾಕ್ರೆಟಿಕ್ ಸರ್ಕಾರವಾಗುವುದಕ್ಕೆ ಸಾಧ್ಯವಿಲ್ಲ. It is nothing but autocratic government. No doubt, the goodwill or democratically elected Government, people's participation is most important. ಈ ವಿಧೇಯಕದ ಪ್ರಕಾರ ಇದರಲ್ಲಿ ಜನರು ಕೂಡ ಭಾಗವಹಿಸುತ್ತಾರೆ, ಇದೊಂದು ಒಳ್ಳೆಯ ಸೂಚನೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಅಧಿಕಾರ ವಿಕೇಂದ್ರೀಕರಣವೆಂದು ಹೇಳುತ್ತಿದ್ದರು ಹಾಗೆ ಇದನ್ನೂ ಕೂಡ ಒಂದು ರೀತಿಯಲ್ಲಿ ಅಧಿಕಾರ ವಿಕೇಂದ್ರೀಕರಣವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ಸರ್ಕಾರ ಕೂಡ ಇದುವರೆವಿಗೂ ಇದನ್ನು ಮಾಡಲಿಲ್ಲ, ಇವರೇತಕ್ಕೆ ಮಾಡಿದರೆಂದು ನಮಗೆ ನಾವೇ ಜನರು ಹಾಗೂ ಪತ್ರಿಕೆಯವರು ಕೇಳಿದರು. ಮೊದಲಿನಿಂದಲೂ ನಮ್ಮ ಸರ್ಕಾರ ಪಾರದರ್ಶಕವಾಗಿರುತ್ತೇವೆ. ನಾವೇನು ಮಾಡುತ್ತೇವೆ ಅದು ಸಾರ್ವಜನಿಕವಾಗಿ ಜನಕ್ಕೆ ಗೊತ್ತಾಗಬೇಕೆಂದು ಹಕ್ಕಿದೆ ಅದನ್ನು ಪ್ರತಿಪಾದನೆ ಮಾಡುತ್ತೇವೆ ಎನ್ನುವ ಮಾತನ್ನು

ಹೇಳುತ್ತಿತ್ತು. ಆ ಮಾತಿನಂತೆ ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಡೆದುಕೊಂಡು ಇಲ್ಲಿ ತಂದಿರುವ ಈ ಒಂದು ವಿಧೇಯಕವನ್ನು ನಾನಾದರೂ ಒಬ್ಬ ವಕೀಲನಾಗಿ, ಸಾರ್ವಜನಿಕ ವ್ಯಕ್ತಿಯಾಗಿ ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಈ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಕೂಡ ಒಂದು ರೂಲಿಂಗ್ ಕೊಟ್ಟಿದೆ, ಅದೇನೆಂದರೆ, ಸರ್ಕಾರದ ನಡವಳಿಕೆಗಳೇನಿವೆ, ಅದನ್ನು ತಿಳಿದುಕೊಳ್ಳುವ ಹಕ್ಕು ಸಂವಿಧಾನದತ್ತವಾಗಿ ಕೊಟ್ಟಿರುವುದೆಂದು ಹೇಳಿದ್ದಾರೆ. ಹಾಗೆ ಸುಪ್ರೀಂಕೋರ್ಟಿನವರಿಗೂ ಕೂಡ ಗೌರವವನ್ನು ಸಲ್ಲಿಸುತ್ತಾ, ಈ ವಿಧೇಯಕವನ್ನು ಇವತ್ತು ತಂದಿರುವುದು ಬಹಳ ಸೂಕ್ತವಾಗಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಿಗೆ ಒಂದು ಕಿವಿ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ; ಸೆಕ್ಷನ್ 4 ಅನ್ನು ಓದಿ ನೋಡಿ, ಯಾವ ಡಾಕ್ಯುಮೆಂಟ್ ಅನ್ನು ಕೊಡಬಾರದೆನ್ನುವ ಕೆಲವು ಕ್ಲಾಸ್ ಇವೆ, ಅದನ್ನು ಸೇಫ್‌ಗಾರ್ಡ್ ಮಾಡದಿದ್ದರೆ, ಜನರು ದುರುಪಯೋಗ ಮಾಡಿಕೊಳ್ಳುತ್ತಾರೆ. ಕೇಳಿದಂತೆ ಪ್ರತಿಗಳನ್ನು ಕೊಡುವುದಕ್ಕೆ ಬರುವುದಿಲ್ಲ, ಏನಾದರೂ ಒಂದು ಆಕ್ಷೇಪಣೆಯನ್ನು ಎತ್ತಿ ಈ ಮಾಹಿತಿಯನ್ನು ಕೊಡಲು ಬರುವುದಿಲ್ಲವೆಂದು ಹೇಳಲಾಗುತ್ತದೆ. ಇದನ್ನು ಸೇಫ್‌ಗಾರ್ಡ್ ಮಾಡುವುದಕ್ಕೆ ರೂಲ್ಸ್ ಫ್ರೇಂ ಮಾಡುವಾಗ ನಿಷ್ಪಕ್ಷಪಾತವಾಗಿ ಆಕ್ಟ್‌ನಲ್ಲಿ ಏನು ಸ್ಪಿರಿಟ್ ಇದೆ ಅದು ಅಲ್ಲಿ ಹರಿದು ಬರುವಂತೆ ನೋಡಿಕೊಳ್ಳುವುದು ಸರ್ಕಾರದ ಅವಶ್ಯಕತೆಯಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ವಿಧೇಯಕದಲ್ಲಿ ಯಾವುದೇ ಅಧಿಕಾರದ ದುರುಪಯೋಗದ ಬಗ್ಗೆ ಪನಿಷ್‌ಮೆಂಟ್ ಕ್ಲಾಸ್ ಏನಿವೆ ಅವು ಇನ್ನೂ ಉಗ್ರವಾಗಿದಿದ್ದರೆ ಚೆನ್ನಾಗಿರುತ್ತಿತ್ತು. ಜನರು ಇವತ್ತು ರೂಲ್ಸ್‌ಗೆ, ಕಾನೂನಿಗೆ, ಮಾನ ಮರ್ಯಾದೆಗೆ, ದೇವರಿಗೂ ಹೆದರುವಂತಿಲ್ಲ, ಇದು ಎಲ್ಲರ ಅನುಭವವಾಗಿದೆ. ಆದ್ದರಿಂದ punishment should be more vigorous ದಯವಿಟ್ಟು ಇದನ್ನು ರಕ್ಷಣೆ ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡುತ್ತಾ, ಇದನ್ನು ತರಲು ಕಾರಣ ಕರ್ತರಾದ ಮಾನ್ಯ ಮುಖ್ಯಮಂತ್ರಿಗಳನ್ನು ವಂದಿಸಿ ನನಗೆ ಮಾತನಾಡಲು ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಮಾನ್ಯ ಚಂದ್ರಶೇಖರ್‌ರವರೇ, ಸೆಂಟ್ರಲ್ ಆಕ್ಟ್‌ನಲ್ಲಿ ಏನಿದೆ ಎಂದರೆ, it applies to entire India, except Jammu & Kashmir. They have introduced this in July 2000. ಆ ಆಕ್ಟ್ ಬಂದಾಗ ಈ ಆಕ್ಟ್ ಪರಿಸ್ಥಿತಿ ಏನಾಗುತ್ತದೆ?

ಪ್ರೊ: ಬಿ.ಕೆ. ಚಂದ್ರಶೇಖರ್:— ಮಾನ್ಯ ಅಧ್ಯಕ್ಷರೆ, ಆರ್ಕಿಟೆಕ್ಚರ್ ಆಫ್ ಕಾನ್‌ಸ್ಟಿಟ್ಯೂಷನ್ ಹೇಗಿದೆ ಎಂದರೆ, ಕೇಂದ್ರ, ರಾಜ್ಯ ಹಾಗೂ ಸಮವರ್ತಿ ಈ ಮೂರು ಪಟ್ಟಿಗಳಲ್ಲಿ ರಾಜ್ಯ ಯಾವುದಾದರೂ ಒಂದು ಕಾನೂನನ್ನು ಮಾಡಿದರೆ, ಆ ಹೊತ್ತಿಗೆ ಕೇಂದ್ರದ ಕಾನೂನು ಚಾಲ್ತಿಯಲ್ಲಿಲ್ಲದೆ ಹೋದರೆ ರಾಜ್ಯದ ಕಾನೂನು ಊರ್ಜಿತವಾಗುತ್ತದೆ. ಈಗಾಗಲೇ ಬೇರೆ ರಾಜ್ಯಗಳು ಇದನ್ನು ಮಾಡಿರುವುದರಿಂದ ತೊಂದರೆ ಇಲ್ಲ. ಆದರೆ

ಯಾವುದಾದರೂ ರಾಜ್ಯದ ಕಾನೂನಿನ ವಿಧಿ ಕೇಂದ್ರದ ಕಾನೂನಿನ ವಿಧಿಗೆ ಸಂಪೂರ್ಣವಾಗಿ ವಿರೋಧವಾಗಿದ್ದರೆ, ಆಗ ಮಾತ್ರ ರಾಜ್ಯದ ಕಾನೂನನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಈಗ ತಂದಿರುವುದು ಸಂಪೂರ್ಣವಾಗಿ ಊರ್ಜಿತವಾಗುತ್ತದೆ, ಏನು ತೊಂದರೆಯಿಲ್ಲ.

+ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೆ, ಇವತ್ತು ಮಾಹಿತಿ ಹಕ್ಕಿನ ವಿಧೇಯಕವನ್ನು ಏನು ತಂದಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಸರ್ಕಾರದ ಎಲ್ಲಾ ಮಾಹಿತಿಗಳು ಸಿಗಬೇಕು ಎಂದು ಪಾರದರ್ಶಕತೆಯ ವಿಚಾರವನ್ನು ಹೇಳುತ್ತಿದ್ದರು. ಆದರೆ ಒಂದು ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಶಾಡೋ ಕ್ಯಾಬಿನೆಟ್ ರೀತಿಯಲ್ಲಿರುವ ವಿರೋಧಪಕ್ಷದ ನಾಯಕರಿಗೆ ಮುಖ್ಯಮಂತ್ರಿಗಳ ರಹಸ್ಯ ಮಾಹಿತಿಗಳನ್ನು ಬಿಟ್ಟು, ಬೇರೆ ಯಾವುದೇ ಮಾಹಿತಿಗಳನ್ನು ಪಡೆದುಕೊಳ್ಳುವ ಹಕ್ಕು ಇದೆ. ಈ ರಾಜ್ಯದ ಪರಿಸ್ಥಿತಿ ಹೇಗಾಗಿತ್ತು ಎನ್ನುವ ಹಿನ್ನಲೆಯಲ್ಲಿ ಈ ವಿಧೇಯಕಕ್ಕಾಗಿ ಹೆಚ್ಚಿನ ಮಹತ್ವವಿದೆ ಎಂದು ನಾನು ಹೇಳಬಯಸುತ್ತೇನೆ. ಕೇವಲ ಯಾವುದೋ ಒಂದು ರಹಸ್ಯ ದಾಖಲೆಯಲ್ಲ, ಸರ್ಕಾರದ ಕಾರ್ಯದರ್ಶಿ, ಡಿಪಿಎಆರ್, ಇವರಿಗೆ ಪತ್ರವನ್ನು ಬರೆದು ವಿರೋಧಪಕ್ಷದ ನಾಯಕರು ಕೇಳುತ್ತಾರೆ. ಇದರಲ್ಲಿ ಆಶ್ಚರ್ಯವೇನೆಂದರೆ, ಒಬ್ಬ ಸಾಮಾನ್ಯ ವ್ಯಕ್ತಿಗೂ ಸಿಗಬೇಕಾದಂತಹ ಈ ಸುತ್ತೋಲೆ ಬಗ್ಗೆ ವಿರೋಧಪಕ್ಷದ ನಾಯಕರಿಗೆ 6 ತಿಂಗಳು 11 ದಿವಸಗಳ ನಂತರ ಒಂದು ಉತ್ತರವನ್ನು ಅವರು ಬರೆದಿರುತ್ತಾರೆ, ಅದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅದರಲ್ಲಿ ಏನು ಹೇಳುತ್ತಾರೆ ಎಂದರೆ ಸರ್ಕಾರದ ವಿವಿಧ ಇಲಾಖೆಗಳಿಂದ ಹೊರಡಿಸಲಾಗಿರುವ ಮುಖ್ಯವಾದ ಎಲ್ಲಾ ಆದೇಶಗಳ, ಸುತ್ತೋಲೆ ಹಾಗೂ ಅಧಿಸೂಚನೆಗಳನ್ನು ಆಯಾ ವಾರದ ರಾಜ್ಯ ಪತ್ರದಲ್ಲಿ ಪ್ರಕಟವಾಗುತ್ತಿದ್ದು, ರಾಜ್ಯಪತ್ರವನ್ನು ಎಲ್ಲಾ ಸಚಿವರಿಗೂ, ಎಲ್ಲಾ ರಾಜ್ಯ ಸಚಿವರಿಗೂ ಮತ್ತು ವಿರೋಧಪಕ್ಷದ ನಾಯಕರಿಗೂ ಸರ್ಕಾರವು ಸರಬರಾಜು ಮಾಡುತ್ತಿದೆ. ಆದುದರಿಂದ ಸರ್ಕಾರ ಹೊರಡಿಸುತ್ತಿರುವ ಎಲ್ಲಾ ಆದೇಶ, ಸುತ್ತೋಲೆ, ಹಾಗೂ ಅಧಿಸೂಚನೆಗಳನ್ನು ಪ್ರತ್ಯೇಕವಾಗಿ ವಿರೋಧಪಕ್ಷದ ನಾಯಕರಿಗೆ ಕಳುಹಿಸಿಕೊಡುವ ಆವಶ್ಯಕತೆ ಕಂಡುಬರುವುದಿಲ್ಲ, ಇದು ಸರ್ಕಾರದ ನಿಲುವಾಗಿದೆ. ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ನಾನು ಒಂದು ವಿಚಾರವನ್ನು ತರುತ್ತಿದ್ದೇನೆ. ಮಾನ್ಯ ಚಂದ್ರಶೇಖರ್‌ರವರು ತಂದಿರುವ ಈ ವಿಧೇಯಕದ ಮಹತ್ವವನ್ನು ಹೇಳುವುದಕ್ಕಾಗಿ, ಇದರ ಹಿಂದೆ ಆದಂಥ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ತುಂಬಾ ಚೆನ್ನಾಗಿರುತ್ತದೆ ಎನ್ನುವುದಕ್ಕಾಗಿ, ಕೇವಲ ಸರ್ಕಾರದ ಒಂದು ಸುತ್ತೋಲೆಯನ್ನು ಕಳುಹಿಸಿಕೊಡಿ ಎಂದು ನಮ್ಮ ವಿರೋಧಪಕ್ಷದ ನಾಯಕರು, ಶಾಡೋ ಕ್ಯಾಬಿನೆಟ್‌ನ ಚೀಫ್ ಆಗಿರುವಂಥವರು ಒಂದು ಪತ್ರವನ್ನು ಬರೆದರೆ, 6 ತಿಂಗಳು 11 ದಿವಸಗಳ ನಂತರ ಡಿ.ಪಿ.ಎ.ಆರ್‌ನ ಮುಖ್ಯ ಕಾರ್ಯದರ್ಶಿಗಳು ಬರೆದಿರುವಂಥ ಪತ್ರದ ಕಂಟೆಂಟ್ಸ್

ಏನು ಎನ್ನುವ ಬಹಳ ಮುಖ್ಯವಾದಂಥ ವಿಚಾರವನ್ನು ಹೇಳಿದೆ. ಯಾವುದೇ ಸುತ್ತೋಲೆಯನ್ನು ಕರ್ನಾಟಕದ ಗೆಜೆಟ್‌ನಲ್ಲಿ ಪ್ರಕಟ ಮಾಡುತ್ತೇವೆ, ಆ ಗೆಜೆಟ್ ಅನ್ನು ಎಲ್ಲ ಸಚಿವರುಗಳಿಗೆ ಮತ್ತು ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡುತ್ತೇವೆ; ಆದ್ದರಿಂದ ಇಂಥ ಸುತ್ತೋಲೆಯನ್ನು ನಿಮಗೆ ಕೊಡಬೇಕಾದಂಥ ಅವಶ್ಯಕತೆ ಇಲ್ಲ, ಎನ್ನುವ ಪತ್ರವನ್ನು ಡಿ.ಪಿ.ಎ.ಆರ್.ನ ಪ್ರಿನ್ಸಿಪಲ್ ಸೆಕ್ರೆಟರಿಯವರು ಬರೆಯುತ್ತಾರೆ ಎನ್ನುವುದು ಎಂತ ಆಶ್ಚರ್ಯದ ಸಂಗತಿ! ನಾನು ಈ ವಿಧೇಯಕವನ್ನು ಸ್ವಾಗತ ಮಾಡಲಿಕ್ಕಾಗಿಯೇ ಈ ವಿಚಾರವನ್ನು ಹೇಳುತ್ತಿದ್ದೇನೆ. ಈ ಪತ್ರದ ವಿಚಾರವನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇದು ಹಿಂದಿನ ಸರ್ಕಾರದ್ದು ಇಲ್ಲ. ನಿಮ್ಮದೇ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ, ಪಾರದರ್ಶಕತೆಯನ್ನು ಪ್ರಚುರಪಡಿಸಿದ ನಂತರದಲ್ಲಿ ಸರ್ಕಾರದ ಇಲಾಖೆಗಳಿಂದ ಆಗುತ್ತಿರುವಂಥ ವಿಚಾರವನ್ನು ಹೇಳಿದೆ. ಆದಾದ ನಂತರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರದ ಮುಖ್ಯ-ಕಾರ್ಯದರ್ಶಿಯವರು ಪತ್ರ ಬರೆದು, ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂಥ ಡಾಕ್ಯುಮೆಂಟ್‌ಗಳನ್ನು ಕೇಳುದಂಥವರಿಗೆ ಕೊಡಬೇಕು ಎಂದು ಪತ್ರ ಬರೆದ ನಂತರವೂ, ಇವತ್ತಿಗೂ ಕೂಡ ಆ ಸುತ್ತೋಲೆ ನಮ್ಮ ಕೈಸೇರಿಲ್ಲ ಮತ್ತು ನಮ್ಮ ನಾಯಕರು ಕೇಳಿದಂಥ ಸುತ್ತೋಲೆ ಗೆಜೆಟ್‌ನಲ್ಲಿ ನೋಟಿಫಿಕೇಷನ್ ಆಗಿಲ್ಲ. ಈಗಾಗಲೇ ಒಂದು ವರ್ಷ ನಾಲ್ಕು ತಿಂಗಳಾಗಿದೆ. ಒಂದು ಸುತ್ತೋಲೆ 3 ವರ್ಷ 2 ತಿಂಗಳ ನಂತರ ಗೆಜೆಟ್‌ನಲ್ಲಿ ನೋಟಿಫಿಕೇಷನ್ ಆಗುತ್ತದೆ ಎನ್ನುವುದಾದರೆ, ಅಂಥ ಸುತ್ತೋಲೆಯನ್ನು ನಾವು ತೆಗೆದುಕೊಳ್ಳಬೇಕಾದರೆ ಪರಿಸ್ಥಿತಿ ಎಷ್ಟು ಕಷ್ಟವಾಗಿರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇಂಥ ಸಂದರ್ಭದಲ್ಲಿ ಈ ವಿಧೇಯಕವನ್ನು ತಂದಿರುವುದಕ್ಕೋಸ್ಕರವಾಗಿ ಇದನ್ನು ಸ್ವಾಗತ ಮಾಡುತ್ತಾ, ಎರಡು ವಿಚಾರಗಳಲ್ಲಿ ನನ್ನ ಮನಸ್ಸಿನ ಭಾವನೆಗಳನ್ನು ತಮ್ಮ ಮುಂದೆ ಇಡಲು ಇಚ್ಛೆಪಡುತ್ತೇನೆ. ಸೆಕ್ಷನ್ 2, ಸಬ್-ಸೆಕ್ಷನ್ (ಸಿ-2)ರಲ್ಲಿ ತಾವು ಒಂದು ವಿಚಾರವನ್ನು ಹೇಳಿದ್ದೀರಿ. ಅದರಲ್ಲಿ ತಾವು ಯಾವ ಯಾವ ಮಾಹಿತಿಗಳನ್ನು ಕೊಡಬಹುದು ಎಂದು ಹೇಳಿದ್ದೀರಿ. ರಾಜ್ಯ ಸರ್ಕಾರವು ಹಣ ಒದಗಿಸುವ ಯಾವುದೇ ಸಂಸ್ಥೆಗಳ, ಅದರ ಸ್ವಾಮ್ಯತೆ ಇರುವಂಥ ಸಂಸ್ಥೆಗಳ, ಎಲ್ಲಿ ಸರ್ಕಾರದ ಹಣವನ್ನು ವಿನಿಯೋಗಿಸುತ್ತಿದ್ದೇವೆ ಅಲ್ಲಿ ಅದು ಸರ್ಕಾರಕ್ಕೆ ಅಕೌಂಟಬಲ್ ಆಗಿರುತ್ತದೆ ಅಂಥ ಮಾಹಿತಿಗಳನ್ನು ಕೊಡಬಹುದು ಎಂದು ಹೇಳಿದ್ದೀರಿ. ಅದರ ಜೊತೆಗೆ, ನಾವು ಟ್ಯಾಕ್ಸ್‌ನ್ನು ಕೊಡುತ್ತಿರುವುದರಿಂದ ಕೇಳುವಂಥ ಮಾಹಿತಿಯನ್ನು ಕೊಡಬೇಕು ಎನ್ನುವ ಮಾಹಿತಿ ಇದೆ. ಆದರೆ ನನಗೆ ಒಂದು ವಿಷಯ ಅರ್ಥವಾಗುತ್ತಿಲ್ಲ. ಜ್ಯುಡಿಷಿಯರಿಗೆ ಸಂಬಂಧಿಸಿದಂತೆ, ಅದು ಜಡ್ಜ್‌ಮೆಂಟ್‌ಗೆ ಸಂಬಂಧಪಟ್ಟಂಥಾದ್ದು ಇರಬಹುದು ಅಥವಾ ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟಂಥ ಯಾವುದೇ ಮಾಹಿತಿಯನ್ನು ಜಡ್ಜ್‌ಮೆಂಟ್ ಆದನಂತರದಲ್ಲಿ ತೆಗೆದುಕೊಳ್ಳಬಹುದು, ಹಾಗೆ ತೆಗೆದುಕೊಳ್ಳುವಂಥ ವ್ಯವಸ್ಥೆ ಇದೆ. ಆದರೆ ಕ್ವಾಸಿ-ಜ್ಯುಡಿಷಿಯರಿ ಮತ್ತು ಸಬಾರ್ಡಿನೇಟ್ ಜ್ಯುಡಿಷಿಯರಿಗಳಲ್ಲಿ ಬರುವಂಥಾದ್ದನ್ನೂ ಇದರ ಅಡಿಯಲ್ಲಿ ಸೇರಿಸುವಂಥ ವ್ಯವಸ್ಥೆಯಾದರೆ ಬಹಳ ಒಳ್ಳೆಯದಾಗುತ್ತದೆ ಎನ್ನುವುದು

ನನ್ನ ಅಭಿಪ್ರಾಯ. ತಾವು ಇದರಲ್ಲಿ ಗವರ್ನರ್ ಸೆಕ್ರೆಟೇರಿಯಟ್ ಅನ್ನೂ ಸೇರಿಸಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ಪ್ರಾಮುಖ್ಯತೆಯಾದಂಥ ವಿಚಾರವೆಂದರೆ, ಉಚ್ಚ ನ್ಯಾಯಾಲಯದಲ್ಲಿ, ಅದು ಒಂದು ಕಟ್ಟಡವನ್ನು ಕಟ್ಟುವಂಥಾದ್ದಿರಬಹುದು ಅಥವಾ ನೇಮಕಾತಿಗೆ ಸಂಬಂಧಪಟ್ಟಂಥಾದ್ದು ಇರಬಹುದು, ಅಂಥ ಯಾವುದೇ ಮಾಹಿತಿಗಳನ್ನು, ಅದು ಜ್ಯುಡಿಷಿಯರಿ ಡಿಪಾರ್ಟ್‌ಮೆಂಟಿಗೆ ಸೇರಿದಂಥಾದ್ದು ಎನ್ನುವ ಕಾರಣಕ್ಕಾಗಿ ಅದನ್ನು ಕೊಡಲು ಸಾಧ್ಯವಿಲ್ಲ ಎಂದು ಹೇಳುವುದಾದರೆ, ಜ್ಯುಡಿಶಿಯರಿಯಲ್ಲಿ ಟ್ರಾನ್ಸ್‌ಪರೆನ್ಸಿ ಇಲ್ಲದೇ, ಕೇವಲ ಬೇರೆ ಇಲಾಖೆಗಳಲ್ಲಿ ಮಾತ್ರ ಟ್ರಾನ್ಸ್‌ಪರೆನ್ಸಿ ಇರಬೇಕೇ ಎನ್ನುವ ಪ್ರಶ್ನೆ ನಮ್ಮಲ್ಲಿ ಮೂಡುತ್ತದೆ. ಹಾಗಾಗಿ ಜ್ಯುಡಿಷಿಯರಿ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ವಿಚಾರಗಳನ್ನು ಇದರ ಅಡಿಯಲ್ಲಿ ತರಬೇಕು ಎನ್ನುವುದು ನನ್ನ ವಿಚಾರ. ಮಾನ್ಯ ಶ್ರೀನಿವಾಸಗೌಡರು ಬಹಳ ಪ್ರಾಮುಖ್ಯವಾದಂಥ ಒಂದು ವಿಚಾರವನ್ನು ಹೇಳಿದರು. ಸೆಕ್ಷನ್ 5(1) ರಲ್ಲಿ ತಾವು ಮಾಹಿತಿ ತೆಗೆದುಕೊಳ್ಳುವ ಹಕ್ಕನ್ನು ಕೊಡುತ್ತಿದ್ದೀರಿ. ಅದನ್ನು ಕೊಳ್ಳುವ ಹಕ್ಕನ್ನು ಕೊಟ್ಟಿದ್ದೀರಿ. ಆದರೆ ಕೊಳ್ಳುವವನ ಕೆಪ್ಯಾಸಿಟಿ ಏನಿದೆ ಎನ್ನುವುದು ನಾವು ಸಾಮಾನ್ಯ ವ್ಯಕ್ತಿಯ ದೃಷ್ಟಿಯಲ್ಲಿ ನೋಡಬೇಕಾಗುತ್ತದೆ. ನಮಗೆ ಬೇಕಾಗುವ ಯಾವುದೋ ಒಂದು ಪುಟದ ಪ್ರತಿಯನ್ನು ಕೊಡಿ ಒಂದು ಕೇಳಿದಾಗ ಅದಕ್ಕೆ ಖರ್ಚು ಎಷ್ಟಾಗುತ್ತದೆ ಅದನ್ನು ಕೊಡಬೇಕಾಗುತ್ತದೆ ಎನ್ನುವುದು ಇದರಲ್ಲಿ ಇದೆ. ಆದರೆ ಅದನ್ನು ನಿರ್ಧಾರ ಮಾಡುವಂಥವರು ಯಾರು? ಇದು ಬಹಳ ಪ್ರಮುಖವಾದಂಥ ವಿಚಾರ. ಈ ವಿಚಾರಕ್ಕೆ ಸಂಬಂಧಿಸಿದಂತೆ, ಸರ್ಕಾರದ ಒಂದು ಸುತ್ತೋಲೆಯನ್ನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಸರ್ಕಾರದ ಆದೇಶದ ಸಂಖ್ಯೆ: ನೀಇ: 17 ಎನ್‌ಎಂಎಸ್ 2000 ದಿನಾಂಕ: 11-4-2000. ಇದು ನೀರಾವರಿ ಇಲಾಖೆಯವರು ಹೊರಡಿಸಿರುವಂಥ ಒಂದು ಸುತ್ತೋಲೆ. ಈ ಆದೇಶದಲ್ಲಿ ತಾವು ಬಹಳ ಒಳ್ಳೆಯ ವಿಚಾರವನ್ನು ಹೇಳಿದ್ದೀರಿ. ಮಾಹಿತಿ ಹಕ್ಕನ್ನು ಕೊಡಲು ಈ ಸರ್ಕಾರದ ಆದೇಶ ಎಂದು ನಮೂದಿಸಿದ್ದೀರಿ. ಈ ಆದೇಶದಲ್ಲಿ ತಾವು ಹೇಳಿರುವಂಥಾದ್ದು ಏನೆಂದರೆ, "ಸರ್ಕಾರದ/ಇಲಾಖೆಯ ಪತ್ರ ವ್ಯವಹಾರಗಳನ್ನು ಪಡೆಯಲು ಮೊದಲನೆಯ ಒಂದು ಪುಟಕ್ಕೆ 50 ರೂಪಾಯಿ. ನಂತರದ ಹೆಚ್ಚಿನ ಪುಟಗಳಿಗೆ ಪ್ರತಿ ಪುಟಕ್ಕೆ 20 ರೂಪಾಯಿ" ಎಂದು ಇದೆ. ಇನ್ನೊಂದು ಆಶ್ಚರ್ಯದ ವಿಷಯವೆಂದರೆ, ಒಬ್ಬ ಸಾಮಾನ್ಯ ವ್ಯಕ್ತಿ ಸರ್ಕಾರದ ಒಂದು ಆದೇಶವನ್ನು ತೆಗೆದುಕೊಳ್ಳಬೇಕಾದರೆ ಮೊದಲನೆಯ ಪುಟಕ್ಕೆ 250 ರೂಪಾಯಿಗಳನ್ನು ಕೊಡಬೇಕು. ಆದಾದ ಮೇಲೆ ಎರಡನೆಯ ಪುಟದಿಂದ ಪ್ರತಿ ಪುಟದ ಬೆಲೆ 100 ರೂಪಾಯಿ.

ಅಧ್ಯಕ್ಷರು :— ಇದಕ್ಕೆ ಸಂಬಂಧಪಟ್ಟಂಥ ಸುತ್ತೋಲೆಯೇ ಅದು?

ಶ್ರೀ ಎ. ರಾಮದಾಸ್ :— ಇದಕ್ಕೆ ಸಂಬಂಧಪಟ್ಟಂಥಾದ್ದನ್ನೇ ಹೇಳುತ್ತಿದ್ದೇನೆ. ಹೀಗೆಂದು ಒಂದು ಆದೇಶ ಬಂದಿದೆ.

ಅಧ್ಯಕ್ಷರು :— ಇಲ್ಲಿ ಇನ್ನೂ ಬಿಲ್ ಪಾಸ್ ಆಗಿಲ್ಲ, ರೂಲ್ಸ್ ಆಗಿಲ್ಲ, ಅದು ಹೇಗೆ ಸುತ್ತೋಲೆ ಹೊರಡಿಸುತ್ತಾರೆ?

ಶ್ರೀ ಎ. ರಾಮದಾಸ್ :— ತಮಗೆ ಇದನ್ನು ಕಳುಹಿಸಿಕೊಡುತ್ತಿದ್ದೇನೆ. ಮಾಹಿತಿಯನ್ನು ಪಡೆಯುವಂಥ ಹಕ್ಕನ್ನು ಇದರಲ್ಲಿ ಕೊಟ್ಟಿರುವಂಥದ್ದನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಅಷ್ಟೇ ಅಲ್ಲ, ಒಂದು ಅಂದಾಜು ಪಟ್ಟಿಯ ಪುಟ ಒಂದಕ್ಕೆ 500 ರೂಪಾಯಿಗಳು. ನಂತರದ ಹೆಚ್ಚಿನ ಪುಟಗಳಿಗೆ ಪ್ರತಿಯೊಂದು ಪುಟಕ್ಕೆ ಒಂದು ಸಾವಿರ ರೂಪಾಯಿಗಳು. ಅಂದರೆ ನಾವು ನೀರಾವರಿ ಇಲಾಖೆಯಲ್ಲಿ ಒಂದು ಪುಟ ಮಾಹಿತಿಯನ್ನು ತೆಗೆದುಕೊಳ್ಳಬೇಕಾದರೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ತೆಗೆದುಕೊಳ್ಳಬೇಕು ಎನ್ನುವ ಮಾಹಿತಿ ಇದೆ. ಈ ಸರ್ಕಾರದ ಆದೇಶದಲ್ಲಿ, ಮಾಹಿತಿಯನ್ನು ತೆಗೆದುಕೊಳ್ಳಬಹುದು, ಅದನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದ್ದೀರಿ, ತುಂಬ ಸಂತೋಷ. ಇದನ್ನು ಎಲ್ಲರೂ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದಾರೆ. ಆದರೆ at what cost? ಒಬ್ಬ ಸಾಮಾನ್ಯ ವ್ಯಕ್ತಿ ಒಂದು ಮಾಹಿತಿಯನ್ನು ಒಂದು ಪುಟಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟು ತೆಗೆದುಕೊಳ್ಳಬೇಕು ಎನ್ನುವುದಾದರೆ, ಅವನು ಹೇಗೆ ಇದನ್ನು ತೆಗೆದುಕೊಳ್ಳುತ್ತಾನೆ?

ಪ್ರೊ: ಬಿ.ಕೆ. ಚಂದ್ರಶೇಖರ್ :— ಮಾನ್ಯ ಅಧ್ಯಕ್ಷರೇ, ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ; ಇದರಲ್ಲಿಯೇ ಹೆಚ್ಚು ಸಮಯ ಕಳೆಯುವುದು ಬೇಡ. ಏಕೆಂದರೆ ನೀರಾವರಿ ಇಲಾಖೆಯಲ್ಲಿ ಈಗಾಗಲೇ ಆದೇಶ ಮಾರ್ಪಾಡು ಹೊಂದುತ್ತಿದೆ. ಅದು 500 ರೂಪಾಯಿಗಳಲ್ಲ. ತಾವು ಈಗ ಓದಿದುದೆಲ್ಲಾ ಇನ್ನು ಮುಂದೆ ಅನ್ವಯವಾಗುವುದಿಲ್ಲ. ಆ್ಯಕ್ಚುಯಲ್ ಕಾಸ್ಟ್ ಎನ್ನುವುದು ರೂಲ್ಸ್‌ನಲ್ಲಿ ಡಿಫೈನ್ ಮಾಡುತ್ತೇವೆ. ಅದು ಎಷ್ಟು ಎಂದರೆ ಪೇಪರ್‌ನ ಖರ್ಚು ಮಾತ್ರ. ಅಧಿಕಾರಿ ಕಳೆದ ಸಮಯದ ಖರ್ಚು ಇಲ್ಲ. ಹೇಗಿದ್ದರೂ ಆ ಅಧಿಕಾರಿ ಸರ್ಕಾರದ ಸೇವೆಯಲ್ಲಿದ್ದಾನೆ. ಖಂಡಿತವಾಗಿ ಅದು ತೊಂದರೆಯಾಗುವುದಿಲ್ಲ. ಆ ಬಗ್ಗೆ ನಾನು ಭರವಸೆಯನ್ನು ಕೊಡುತ್ತೇನೆ. ತಾವು ಅದನ್ನು ಬಿಟ್ಟು ಬೇರೆ ಏನಾದರೂ ಹೇಳುವುದು ಇದ್ದರೆ ಹೇಳಿ.

ಶ್ರೀ ಎ. ರಾಮದಾಸ್ :— ಅದು ಆಗಬಾರದು ಎನ್ನುವ ಉದ್ದೇಶಕ್ಕಾಗಿಯೇ ಈ ವಿಚಾರವನ್ನು ತಮ್ಮ ಮುಂದೆ ಇಟ್ಟಿದ್ದೇನೆ.

ಇನ್ನು ಕೊನೆಯದಾಗಿ ಒಂದು ವಿಚಾರವನ್ನು ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಮಾನ್ಯ ಸುರೇಶ್ ಕುಮಾರ್‌ರವರು ವಿಸ್ತಾರವಾಗಿ ಹೇಳಿದ್ದಾರೆ. ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಸೆಕ್ಷನ್ 8 ಮತ್ತು 9ರಲ್ಲಿ, ಮಾಹಿತಿ ಹಕ್ಕನ್ನು ಪಡೆಯಲು ಸಾಧ್ಯವಾಗದೇ ಇದ್ದಂಥ ಸಮಯದಲ್ಲಿ, ಅಧಿಕಾರಿ ಇದನ್ನು ಕೊಡಲು ಆಗದೇ ಇರುವಂಥ ಸಂದರ್ಭದಲ್ಲಿ ಪೆನಾಲ್ಟಿ ವಿಧಿಸುವ ವಿಚಾರವನ್ನು ಹೇಳಿದ್ದೀರಿ. ಆದರೆ ತಾವು ರೈಟ್ ಆಫ್ ಇನ್‌ಫರ್‌ಮೇಷನ್ ಅನ್ನು ನಮಗೆ ಕೊಡುತ್ತಾ, ನಮ್ಮಲ್ಲಿರುವಂಥ ಹಕ್ಕನ್ನು ಕಿತ್ತುಕೊಳ್ಳುವ ವ್ಯವಸ್ಥೆ ಸೆಕ್ಷನ್ 10ರಲ್ಲಿ ಬರುತ್ತಿದೆ. ಈ ಇನ್‌ಫರ್‌ಮೇಷನ್‌ನ್ನು ಪಡೆಯಲಿಕ್ಕೋಸ್ಕರ

ಇರುವಂಥ ಹಕ್ಕಿನಲ್ಲಿ ಏನಾದರೂ ಚ್ಯುತಿಯಾದರೆ ಇನ್‌ಫರ್‌ಮೇಷನ್‌ನ್ನು ಕೇಳಿದಾಗ ಒಬ್ಬ ಅಧಿಕಾರಿ ಕೊಡದಿದ್ದಾಗ ಅದನ್ನು ನಾವು ನ್ಯಾಯಾಲಯದಲ್ಲಿ ಹೋಗಿ ಪ್ರಶ್ನೆ ಮಾಡುವಂಥ ಅಧಿಕಾರ ಇಲ್ಲವೆಂದು ಸೆಕ್ಷನ್ 10ರಲ್ಲಿ ಹೇಳಿದೆ. ಅದನ್ನು ತೆಗೆದುಹಾಕುವ ಮುಖಾಂತರ ನಾವು ಕೇಳಿ ಇನ್‌ಫರ್‌ಮೇಷನ್ ಸಿಗಲಿಲ್ಲ ಎಂದಾಗ ಆ ಪೆನಾಲ್ಟಿ ಕ್ಲಾಜ್‌ನ್ನು ಮೀರಿದಾಗ ನಾವು ನ್ಯಾಯಾಲಯಕ್ಕೆ ಹೋಗಿ ಅದನ್ನು ಪಡೆಯುವಂಥ ಒಂದು ಹೆಚ್ಚಿನ ಅವಕಾಶವನ್ನು ನಮಗೆ ಒದಗಿಸಿಕೊಡಬೇಕೆಂದು ಹೇಳುತ್ತಾ, ತಾವು ತಂದಿರುವಂಥ ಮಸೂದೆಯಲ್ಲಿ ಈ ಒಂದು ಮಾಡಿಫಿಕೇಷನ್ ಮಾಡಿಕೊಟ್ಟು, ಯಾವುದೇ ನ್ಯೂನತೆ ಇಲ್ಲದ ರೀತಿಯಲ್ಲಿ ಈ ಒಂದು ಕಾನೂನು ತರಬೇಕೆಂದು ಮಾಡಿದಂಥ ಪ್ರೊ. ಚಂದ್ರಶೇಖರ್ ಅವರನ್ನು ಶ್ಲಾಘಿಸುತ್ತಾ, ಅದರ ಮುಖಾಂತರದಲ್ಲಿ ಒಂದು ಹೊಸ ಶಾಖೆ ಪ್ರಾರಂಭವಾಗಲಿ ಎಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಪುಟ 10ರಲ್ಲಿ ಸೆಕ್ಷನ್ 12ರ 3ನೇ ಭಾಗದಲ್ಲಿ ಒಂದು ಮಾಡಿಫಿಕೇಷನ್ ಮಾಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ನಮ್ಮ ಸದನ ಇಡೀ ವರ್ಷಕ್ಕೆ 30 ರಿಂದ 40 ದಿವಸಗಳ ಕಾಲ ನಡೆಯುತ್ತಿದೆ. ಸದನಕ್ಕಿಂತ ಜಾಸ್ತಿ ಈ ಸರ್ವಪಕ್ಷಗಳ ಸಭೆ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ 30 ಡೇಸ್ ಎಂದು ಇಟ್ಟರೆ ಎಷ್ಟರಮಟ್ಟಿಗೆ ಸರಿಬರುತ್ತದೆ ಎಂದು ಕೇಳುತ್ತಿದ್ದೇನೆ. ಆದ್ದರಿಂದ 30 ದಿವಸ ಎನ್ನತಕ್ಕಂಥದ್ದನ್ನು ಸ್ವಲ್ಪ ಕೆಳಗಿಳಿಸಿ ಒಂದು ವಾರ ಅಥವಾ 15 ದಿವಸ ಎಂದು ಮಾಡಿಫಿಕೇಷನ್ ಮಾಡಿಕೊಂಡರೆ ಅನುಕೂಲವಾಗಬಹುದು. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಈ ವಿಧೇಯಕವನ್ನು ನಾವು ಮಂಡಿಸಿದ್ದೇವೆ, ಸದನ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂಬ ಮಾತನ್ನು ಮಾನ್ಯ ವಾರ್ತಾ ಇಲಾಖೆಯ ಸಚಿವರು ಹೇಳಿದ್ದಾರೆ. ಅಂಥ ಒಂದು ವಿಧೇಯಕವನ್ನು ತಂದಿರುವುದಕ್ಕೆ ನಾನು ಸರ್ಕಾರವನ್ನು ಮೆಚ್ಚುತ್ತೇನೆ. ಇಂಥ ವಿಧೇಯಕವನ್ನು ತಂದಿರುವುದು ಒಳ್ಳೆಯ ಕೆಲಸವಾದ್ದರಿಂದ ಇದರ ಬಗ್ಗೆ ಯಾರದೂ ಸಹಿತ ತಕರಾರು ಇಲ್ಲ. ಈ ದೃಷ್ಟಿಯಿಂದ ಕೇಂದ್ರ ಸರ್ಕಾರ ಸಹ ವಿಚಾರ ಮಾಡಿ ಅಲ್ಲಿಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಅದನ್ನು ಮಾಡಿದೆ. ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಂಬಂಧಪಟ್ಟ ಇಲಾಖೆಗಳಿಗೆ ರಾಜ್ಯ ಸರ್ಕಾರದವರು ಮಾಡಿದ್ದಾರೆ. ಈ ಮಸೂದೆಯನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ -"ಯಾವುದೇ ರಹಸ್ಯ ಸರ್ಕಾರದಲ್ಲಿ ಇರಬಾರದು, ಸುಪ್ರೀಂ ಕೋರ್ಟ್, ಹೈಕೋರ್ಟ್‌ನಲ್ಲಿ ಇದೇ ತರಹ ತೀರ್ಮಾನಗಳು ಆಗಿವೆ, ರಹಸ್ಯ ಇರುವುದರಿಂದ ಮತ್ತು ನಿಧಾನ ಆಗುವುದರಿಂದ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತದೆ,

ಆದ್ದರಿಂದ ಗುಡ್ ಗವರ್ನೆನ್ಸ್ ದೃಷ್ಟಿಯಿಂದಾಗಿ ಮತ್ತು ಪೀಪಲ್ಸ್ ಪಾರ್ಟಿಸಿಪೇಷನ್ ದೃಷ್ಟಿಯಿಂದಾಗಿ ಇದನ್ನು ತಂದಿದ್ದೇವೆ" ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಮಾನ್ಯ ಬಿ.ಕೆ. ಚಂದ್ರಶೇಖರ್ ಅವರ ಸದಿಚ್ಛೆಯನ್ನು ಒಪ್ಪುತ್ತೇನೆ. ಅದರ ಜೊತೆಗೆ ಅವರ ಅಭಿಮಾನಿಗಳಲ್ಲಿ ನಾನು ಸಹ ಒಬ್ಬನಾಗಿದ್ದೇನೆ. ಅವರು ಇವತ್ತು ಯಾವುದೇ ಪಕ್ಷದಲ್ಲಿ ಇರಲಿ, ಆದರೆ ಈ ವಿಕೇಂದ್ರೀಕರಣದ ಬಗ್ಗೆ, ಆಡಳಿತದ ಬಗ್ಗೆ ಮತ್ತು ಕಾನೂನಿನ ವಿಚಾರದಲ್ಲಿ ರಾಷ್ಟ್ರದ ಒಬ್ಬ ತಜ್ಞರಾಗಿ ನಮ್ಮ ರಾಜ್ಯ ಸರ್ಕಾರಕ್ಕೆ ಅನೇಕ ಸಂದರ್ಭಗಳಲ್ಲಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತು ಸಹ ಈ ಸರ್ಕಾರಕ್ಕೆ ಕೂಡ ಅವರು ಸಲಹೆಗಳನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಇದ್ದಾರೆ. ಅದರ ಬಗ್ಗೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಆದರೆ ಈ ಮಸೂದೆಯ ಬಗ್ಗೆ ಕೆಲವು ಸಂಶಯಗಳಿದ್ದು ಅದನ್ನು ಸರ್ಕಾರ ನಿವಾರಣೆ ಮಾಡಬೇಕು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸುತ್ತದೆ. The best form of Government if that which governs least. ಎಂದು ನಾವೆಲ್ಲ ಹೇಳುತ್ತಿರುತ್ತೇವೆ. ಆದರೆ ವಸ್ತುಸ್ಥಿತಿಯಲ್ಲಿ ಇದು ಕೇವಲ ಬೆದರು ಬೊಂಬೆಯ ರೀತಿಯಲ್ಲಿ ಈ ಮಸೂದೆ ಇದೆಯೇ ಎನ್ನತಕ್ಕಂಥ ಅನುಮಾನ ನನಗಿದೆ. ಮತ್ತು ಭ್ರಷ್ಟಾಚಾರದಂಥ ಎಲ್ಲಾ ರೋಗಗಳು ಇದರಿಂದ ನಿವಾರಣೆ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂಧರ್ಭದಲ್ಲಿ ಹೇಳುತ್ತೇನೆ. ಕಾರಣ, ಮಾನ್ಯ ಮುಖ್ಯಮಂತ್ರಿಗಳು 12 ತಿಂಗಳ ಹಿಂದೆ "ನಮ್ಮ ಸರ್ಕಾರ ಪಾರದರ್ಶಕ ಸರ್ಕಾರವನ್ನು ಕೊಡುತ್ತದೆ" ಎಂದು ಹೇಳಿಕೊಂಡು ಬಂದಿದ್ದಾರೆ. ಆ 12 ತಿಂಗಳು ಈಗ ಕಳೆದಿದೆ. ಈ ಪಾರದರ್ಶಕತೆಯನ್ನು ನಾವು ಎಲ್ಲೂ ಸಹ ನೋಡಿಲ್ಲ. ನಿಮ್ಮ ಸರ್ಕಾರಕ್ಕೆ ಒಂದು ಇಮೇಜ್ ಡೆವಲಪ್ ಆಗಬೇಕಾಗಿದೆ, ಲೀಡರ್‌ಗೆ ಇಮೇಜ್ ಡೆವಲಪ್ ಆಗಬೇಕಾಗಿದೆ. ಆ ಇಮೇಜನ್ನು ಡೆವಲಪ್ ಮಾಡತಕ್ಕಂಥ ಪ್ರೋಗ್ರಾಂ ಇದು ಎಂದು ನಾನು ತಿಳಿದಿದ್ದೇನೆ. "ನಾವು ಬಹಳ ಟ್ರಾನ್ಸ್‌ಪರೆಂಟ್ ಆಗಿದ್ದೇವೆ, ನಮ್ಮ ಸರ್ಕಾರದಿಂದ ಇನ್‌ಫರ್‌ಮೇಷನ್ ಏನು ಬೇಕಾದರೂ ತೆಗೆದುಕೊಳ್ಳಬಹುದು, ನಾವು ಏನೂ ತಪ್ಪು ಮಾಡುವುದಿಲ್ಲ, ಭ್ರಷ್ಟಾಚಾರ ಇಲ್ಲವೇ ಇಲ್ಲ" ಎನ್ನುವ ರೀತಿಯಲ್ಲಿ ತಾವು ಹೇಳಿದ್ದೀರಿ. ಆ ಹೇಳಿಕೆಯನ್ನು ನಾನು ಮೆಚ್ಚುತ್ತೇನೆ. ಆದರೆ ವಸ್ತುಸ್ಥಿತಿಯಲ್ಲಿ ಈ 12 ತಿಂಗಳಲ್ಲಿ ಯಾವ ಯಾವ ಇಲಾಖೆಯಲ್ಲಿ 'ಮಾಮೂಲಿ' ಕಡಿಮೆಯಾಗಿದೆ ಎನ್ನುವುದರ ಬಗ್ಗೆ ನಾವೆಲ್ಲಾ ಶಾಸಕರು ವಿಚಾರ ಮಾಡೋಣ. ಯಾವುದೇ ಇಲಾಖೆಯಲ್ಲಿ 'ಮಾಮೂಲಿ' ವ್ಯವಹಾರ ನಡೆಯತಕ್ಕಂಥದ್ದು ಎಲ್ಲೂ ಕಡಿಮೆಯಾಗಿಲ್ಲ. ಈಗ ಉದಾಹರಣೆಗೊಂದು ವಿಚಾರರನ್ನು ಹೇಳುತ್ತೇನೆ. ಎಲ್ಲಾ ಮಂತ್ರಿಗಳು ಸಹ ಸ್ಮಾರ್ಟ್ ಕಾರ್ಡನ್ನು ಹಾಕಿಕೊಂಡು ಬರುತ್ತಾರೆ. ವಿಧಾನಸೌಧಕ್ಕೆ ಎಂಟರ್ ಆಗುವ ಎಲ್ಲಾ ಎಂಪ್ಲಾಯಿಸ್‌ಗೆ ಸ್ಮಾರ್ಟ್ ಕಾರ್ಡನ್ನು ಹಾಕಬೇಕೆಂದು ಹೇಳಿ, ಮಾನ್ಯ ಮುಖ್ಯಮಂತ್ರಿಗಳ ಕತ್ತಿನಲ್ಲಿ, ಒಂದು ಹಗ್ಗ ಹಾಕಿಕೊಂಡು ಇದರಲ್ಲಿ ಒಂದು ಕಾರ್ಡನ್ನು ಇಟ್ಟುಕೊಂಡು, ಆ ಕಾರ್ಡನ್ನು ಆಗಾಗ ಜೇಬಿಗೆ ತುರುಕಿಕೊಂಡು ಪೇಪರ್‌ನಲ್ಲಿ

ಬಹಳಷ್ಟು ಪ್ರಚಾರರನ್ನು ತೆಗೆದುಕೊಂಡರು. ನಮ್ಮ ಮಾನ್ಯ ರೋಷನ್‌ಬೇಗ್ ಅವರು ಸ್ವಲ್ಪ ಸಿನ್ಸಿಯರ್ ಆಗಿ ಆ ಶಾಲನ್ನು ಹಾಕಿಕೊಂಡು ಬರುತ್ತಿದ್ದರು. ಅದು ಈಗ ಅವರ ಕೊರಳಿನಲ್ಲಿ ಕಾಣುತ್ತಿಲ್ಲ. ಅದರಲ್ಲೂ ಡಾ: ರಾಜ್ ಕುಮಾರ್ ಅವರ ಅಪಹರಣವಾದ ಮೇಲೆ ಈ ಕಾರ್ಡ್‌ಗಳನ್ನೇ ಮರೆತು ಹೋಗಿದ್ದಾರೇನೋ ಎನ್ನುವ ಅನ್ನಿಸಿಕೆ ನಮಗೆ ಪ್ರಾರಂಭವಾಗಿದೆ. ಎಲ್ಲಾ ಕಡೆಗಳಲ್ಲಿ ಸ್ಮಾರ್ಟ್ ಕಾರ್ಡ್ಸ್‌ನ್ನು ತಂದುಬಿಡುತ್ತೇವೆ, ಆಡಳಿತದಲ್ಲಿ ಬಿಗಿ ತಂದುಬಿಡುತ್ತೇವೆ ಎನ್ನುವ ಮಾತನ್ನು ಹೇಳಿದಿರಿ, ಆದರೆ ಅದು ಆಗಲಿಲ್ಲ. ಆ ನಂತರ ನಮ್ಮ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಜನರಲ್ ಟ್ರಾನ್ಸ್‌ಫರ್ಸ್‌ನ್ನು ನಾವು ಮಾಡುವುದೇ ಇಲ್ಲ ಎನ್ನತಕ್ಕಂಥ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರು. ಆದರೆ ಈ ಸರ್ಕಾರ ಬಂದ ತಕ್ಷಣ ಹಿಂದಿನ ಸರ್ಕಾರದ ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ಕಿತ್ತುಹಾಕಿಬಿಟ್ಟಿದ್ದಾರೆ. ಎಷ್ಟು ಲಕ್ಷ ಜನ ಬಡಪಾಯಿಗಳನ್ನು ವರ್ಗಾವಣೆಯನ್ನು ನಿಮ್ಮ ಸಹದ್ಯೋಗಿಗಳು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಿದ್ದೇನೆ. ಈ ಜನರಲ್ ಟ್ರಾನ್ಸ್‌ಫರ್ ಎನ್ನತಕ್ಕಂಥಾದ್ದು, it has become a business without investment ಎನ್ನುವ ಮಾತನ್ನು ನಾನು ಖಂಡಿತವಾಗಿ ಹೇಳಿದ್ದೇನೆ. ಇತ್ತೀಚೆಗೆ ಚಾಮರಾಜನಗರ ಜಿಲ್ಲೆಯಲ್ಲಿ ಅಲ್ಲಿರತಕ್ಕಂಥ ಅಧಿಕಾರಿಯಿಂದ ಅಲ್ಲಿಯ ಶಾಸಕರಿಗೆ ಆಗಿರತಕ್ಕಂಥ ಅವಮಾನದ ವಿಚಾರವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ಮತ್ತು ಸದನದ ಗಮನಕ್ಕೆ ಶ್ರೀ ಸಿ. ಗುರುಸ್ವಾಮಿ ಮತ್ತು ಶ್ರೀ ಕೃಷ್ಣಮೂರ್ತಿ ಅವರುಗಳು ತೆಗೆದುಕೊಂಡು ಬಂದರು. ಆ ಅಧಿಕಾರಿ ಆ ರೀತಿ ನಡೆದುಕೊಳ್ಳಬೇಕಾದರೆ ಯಾರ ಸೂಚನೆ ಮೇಲೆ ಅವರು ಆ ರೀತಿ ನಡೆದುಕೊಂಡರು? ಅಲ್ಲಿ ಯಾವುದೋ ಒಂದು ಶಕ್ತಿ ಕೆಲಸ ಮಾಡಿದೆ. ಹೀಗಾದರೆ ಈ ಜನರಲ್ ಟ್ರಾನ್ಸ್‌ಫರ್ಸ್ ವಿಚಾರದಲ್ಲಿ, ಏನು ಮಾಹಿತಿ ಕೊಡುತ್ತೀರಿ? ನೀವೇನಾದರೂ ಫೈಲ್‌ನಲ್ಲಿ ಬರೆಯುತ್ತೀರಾ? ಏನೂ ಬರೆಯುವುದಿಲ್ಲ. ಆಡಳಿತದಲ್ಲಿ ಪಾರದರ್ಶಕತೆ ತರುವುದಕ್ಕೆ, ಆಡಳಿತದಲ್ಲಿ ಬಿಗಿ ತರಲಿಕ್ಕೆ, ಭ್ರಷ್ಟಾಚಾರ ಕಡಿಮೆ ಮಾಡಲಿಕ್ಕೆ ಈ ಕಾನೂನಿನಿಂದ ಅನುಕೂಲವಾಗುತ್ತದೆ ಎಂದು ಹೇಳುತ್ತೀರಲ್ಲಾ, ಎಲ್ಲಿ ಅನುಕೂಲವಾಗುತ್ತದೆ? ಹೇಳಿ. ಲೋಕಾಯುಕ್ತವನ್ನು ಬಿಗಿಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ, ಇಲ್ಲಿ ತಾವು ಏನು ಹೇಳುತ್ತೀರಿ ಅದನ್ನು ಕಾರ್ಯಾಚರಣೆಗೆ ತರಲಿಕ್ಕೆ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ಈ ಮಸೂದೆ ಅಧಿಕಾರಿಗಳಿಗೆ ಬೆದರು ಬೊಂಬೆಯಾಗಬಾರದು. ಒಂದು ಕಡೆ ಅಧಿಕಾರಿಗಳಿಗೆ ಬೆದರಿಸಿ, ನೀನು ನಾನು ಹೇಳಿದ ಹಾಗೆ ಮಾಡದಿದ್ದರೆ ನಿನ್ನನ್ನು ಗುಲ್ಬರ್ಗಾಕ್ಕೆ ಯಾ ಬೀದರ್, ಕೊಡಗು ಅಥವಾ ಮಂಗಳೂರಿಗೆ ವರ್ಗ ಮಾಡುತ್ತೇನೆ, ನೀರು ಇಲ್ಲದ ಜಾಗವನ್ನು ತೋರಿಸುತ್ತೇನೆ ಎಂದು ಬೆದರಿಸುವಂಥಾದ್ದು ಆಗಬಾರದು. ಒಬ್ಬ ಅಧಿಕಾರಿಯನ್ನು 3-4 ವರ್ಷ ಒಂದೇ ಸ್ಥಳದಲ್ಲಿ ಇರುವ ಹಾಗೆ ಮಾಡಿ ನೀನು ಕೆಲಸ ಮಾಡಬೇಕು ಎನ್ನುವ ವಾತಾವರಣವನ್ನು ಸೃಷ್ಟಿಮಾಡಿದರೆ ಅವನು ಫೈಲ್ ಮೇಲೆ ಬರೆಯುತ್ತಾನೆ. ಇದಕ್ಕೆ ಒಂದು ರಾಜಕೀಯ ಇಚ್ಛಾಶಕ್ತಿ ಬರಬೇಕಾಗುತ್ತದೆ. ಇದರಲ್ಲಿ

ರಾಜಕೀಯ ಇಚ್ಛಾಶಕ್ತಿ ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ರಂಗೋಲಿ ಕೆಳಗಡೆ ನುಗ್ಗತಕ್ಕಂಥ ಜನರಿದ್ದಾರೆ. ಆದರೆ ಸಾಮಾನ್ಯ ಜನ ಏನನ್ನು ಬಯಸುತ್ತಾರೆ ಎನ್ನುವುದನ್ನು ನಾನು ಹೇಳುತ್ತೇನೆ. ಈಗ ಒಂದು ಪೊಲೀಸ್ ಸ್ಟೇಷನ್‌ಗೆ ಒಂದು ಕೇಸ್ ತೆಗೆದುಕೊಂಡು ಹೋದರೆ ಇನ್ನೊಂದು ಕೌಂಟರ್-ಕೇಸ್ ತೆಗೆದುಕೊಂಡು ಬಾಪ್ಪಾ ಎಂದು ಆ ಸಬ್ ಇನ್ಸ್‌ಪೆಕ್ಟರ್ ಹೇಳಿ ಕಳುಹಿಸುತ್ತಾನೆ. ಇದು ಹೀಗೇಕೆ ಎಂದು ಸಾಮಾನ್ಯ ಜನ ಕೇಳುತ್ತಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಷ್ಟು ಔಷಧಿ ಇದೆ, ಡಾಕ್ಟರ್ ಬರುತ್ತಾರೆಯೇ ಅಥವಾ ಇಲ್ಲವೇ, ಶಾಲೆಗೆ ಟೀಚರ್‍ಸ್ ಬರುತ್ತಾರೆಯೇ ಅಥವಾ ಇಲ್ಲವೇ ಎಂದು ಸಾಮಾನ್ಯ ಜನ ಕೇಳುತ್ತಾರೆಯೇ ಹೊರತು ಡೆವಲಪ್‌ಮೆಂಟ್ ವರ್ಕ್, ಕ್ವಾಲಿಟಿ ಬಗ್ಗೆ ಯಾರೂ ಕೇಳುವುದಿಲ್ಲ. ಈ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಕಾನೂನುಗಳು, ಕಾರ್ಯಾಚರಣೆಯಲ್ಲಿ ಜನರು ಎಷ್ಟರಮಟ್ಟಿಗೆ ಭಾಗವಹಿಸುತ್ತಿದ್ದಾರೆ? ನಾನು

6.30 ಪಿ.ಎಂ.

ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ- ರಾಜ್ಯದಲ್ಲಿ, ರಾಷ್ಟ್ರದಲ್ಲಿ ರಾಜಕೀಯ ಪಕ್ಷಗಳು ಇಂಥ ವಿಚಾರದಲ್ಲಿ ಶಿಸ್ತನ್ನು ಹಾಕಿಕೊಂಡು ಸರ್ವಸಮ್ಮತಕ್ಕೆ ಬರದೇ ಹೋದರೆ ಇದನ್ನು ಮಾಡಲಿಕ್ಕೆ ಆಗುವುದಿಲ್ಲ, ಅದಕ್ಕೋಸ್ಕರ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಮಾಹಿತಿ ಪಡೆಯತಕ್ಕಂಥ ಹಕ್ಕಿನ ಬಗ್ಗೆ ಮಾನ್ಯ ಮಂತ್ರಿಗಳು ತಂದಿರುವ ವಿಧೇಯಕವನ್ನು ವಿಶೇಷವಾಗಿ ಮಾನ್ಯ ಸುರೇಶ್ ಕುಮಾರ್ ಅವರು ಕ್ಲಾಜ್ ಬೈ ಕ್ಲಾಜ್ ಅಭ್ಯಾಸ ಮಾಡಿ ಯಾವುದರಲ್ಲಿ ಬದಲಾವಣೆ ಮಾಡಬೇಕು ಎನ್ನುವುದಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆಡಳಿತದಲ್ಲಿ ಬಿಗಿ ಮಾಡಬೇಕು ನಿಜ. ಕೇವಲ ಸರ್ಕಾರಿ ಅಧಿಕಾರಿಗಳನ್ನು ಬಿಗಿ ಮಾಡಿದರೆ ಆಡಳಿತ ಬಿಗಿ ಆಗುತ್ತದೆ, ಆಡಳಿತದಲ್ಲಿ ಪಾರದರ್ಶಕತೆ ಬರುತ್ತದೆಂದು ನಾವು ಯಾರೂ ಭಾವಿಸಿಕೊಳ್ಳುವುದು ಬೇಡ. ಅದಕ್ಕೆ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ನಾವು ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಮಾತ್ರ ಇದು ಉಪಯೋಗಕ್ಕೆ ಬರುತ್ತದೆ ಇಲ್ಲದಿದ್ದರೆ ಇದು ಕೇವಲ ಪ್ರಚಾರದ, ಆಡಂಬರದ ಒಡವೆಯಾಗಿ ಉಳಿಯುತ್ತದೆ ಮತ್ತು ದೇವರಿಗೆ ಪೂಜೆ ಮಾಡಿದ ಮೇಲೆ ಅಲಂಕಾರ ಮಾಡುತ್ತೇವಲ್ಲಾ ಆ ತರಹದ ಒಂದು ಅಲಂಕಾರದ ವಿಧೇಯಕ ಇದು ಆಗುತ್ತದೆಯೇ ಹೊರತು ಇದರಿಂದ ಬೇರೆ ಯಾವುದೇ ರೀತಿಯ ಉಪಯೋಗ ಆಗುವುದಿಲ್ಲ. ಇದಕ್ಕಾಗಿ ರಾಜಕೀಯ ಕಮಿಟ್‌ಮೆಂಟ್ ಎಂದು ಏನು ಹೇಳುತ್ತೇವೆ ಆ ಇಚ್ಛಾಶಕ್ತಿ ಬೇಕಾಗುತ್ತದೆ. ಆ ಕಮಿಟ್‌ಮೆಂಟ್‌ನ್ನು ಕಳೆದ ಒಂದು ವರ್ಷದಲ್ಲಿ ನಿಮ್ಮ ಸರ್ಕಾರ ತೋರಿಸಲಿಲ್ಲ. ಈ ವಿಧೇಯಕಕ್ಕೆ ವಿಧಾನಪರಿಷತ್‌ನಲ್ಲಿ ಮಾನ್ಯ ಸದಸ್ಯರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ರಾಜ್ಯಪಾಲರ ಕಚೇರಿ ಮತ್ತು ಬೇರೆ ಬೇರೆ ಕೆಲವು ಕಚೇರಿಗಳು ಬಿಟ್ಟುಹೋಗಿದ್ದನ್ನು ಈ ವಿಧೇಯಕಕ್ಕೆ ಸೇರಿಸಿಕೊಂಡು ಇಲ್ಲಿ ಮಂಡಿಸಿರುವುದು ಸ್ವಾಗತಾರ್ಹ. ಈ ರೀತಿಯ

ಕಾನೂನುಗಳನ್ನು ಮಾಡುವುದರ ಜೊತೆಗೆ ಇದನ್ನು ಕಾರ್ಯಾಚರಣೆಗೆ ತರುವುದಕ್ಕೆ ಬಹಳ ಮುಖ್ಯವಾಗಿ ಆಡಳಿತ ಪಕ್ಷದಲ್ಲಿ ಒಮ್ಮತವಿರಬೇಕು. ಇದು ನಿಮ್ಮ ಪಕ್ಷದಲ್ಲಿ ಎಷ್ಟರಮಟ್ಟಿಗೆ ಒಮ್ಮತವಿದೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ನಾವು ಕಾದು ನೋಡಬೇಕಾಗಿದೆ. ಆದರೆ ನಮಗಂತೂ ಕಳೆದ 12 ತಿಂಗಳಲ್ಲಿ ಅಂಥ ಪಾರದರ್ಶಕತೆ ಕಾಣಲಿಲ್ಲ. ಎಲ್ಲವೂ ಹಿಂದೆ ಹೇಗೆ ನಡೆಯುತ್ತಿತ್ತು ಹಾಗೆಯೇ ನಡೆಯುತ್ತಿದೆ. ನಮಗೆ ಇದರಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಂಡುಬರುತ್ತಿಲ್ಲ. ಆದರೂ ಸಹಿತ ಈ ವಿಧೇಯಕ ಮುಂದಿನ ದಿನಗಳಲ್ಲಿ ನಮಗೆ ಉಪಯೋಗವಾಗಬಹುದು ಎನ್ನುವ ದೃಷ್ಟಿಯಿಂದ ನೀವು ಮಾಡಿದ್ದೀರಿ ಎಂದು ತಿಳಿದು, ಇದು ಕೇವಲ ಅಧಿಕಾರಿಗಳಿಗೆ ಅಷ್ಟೇ ಅಲ್ಲ, ಆಡಳಿತದಲ್ಲಿ ಇರತಕ್ಕಂಥವರಿಗೂ ಸಹಿತ ಬೆದರುಗೊಂಬೆ ಆಗುತ್ತದೆ. ಬೆದರುಗೊಂಬೆಯಿಂದ ಉಪಯೋಗ ಇದೆ, ಕಾಗೆಗಳು ಪಕ್ಷಿಗಳು ಬೆಳೆ ಮೇಯುವುದಕ್ಕೆ ಬರುವುದನ್ನು ತಡೆಯುತ್ತದೆ ಎಂದು ಶ್ರೀ ಸುರೇಶ್ ಕುಮಾರ್ ಅವರು ಹೇಳಿದರು. ಆದರೆ ಇವರೇ ಪಕ್ಷಿಗಳು, ಕಾಗೆಗಳು, ರಣಹದ್ದುಗಳು ಆಗಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ಡಾ: ರಾಜ್‌ಕುಮಾರ್ ಅವರ ಅಪಹರಣ ಪ್ರಕರಣದ ಚರ್ಚೆಯಲ್ಲಿಯೇ ಈ ಅಧಿವೇಶನದ ಬಹಳಷ್ಟು ಸಮಯ ಕಳೆದುಹೋಯಿತು. ನಾವು ಇಲಾಖಾವಾರು ಚರ್ಚೆ ಮಾಡಲಿಕ್ಕೆ ಆಗಲಿಲ್ಲ. ಇದು ನಿಜವಾಗಿಯೂ ನಮಗೆ ಗೌರವ ತರತಕ್ಕಂಥ ವಿಚಾರವಲ್ಲ. ಇದು ಆ ಕಡೆ ಕುಳಿತಿರುವ ಎಲ್ಲಾ ಶಾಸಕರಿಗೂ ಗೊತ್ತಿದೆ, ಆದರೆ ಅವರು ಹೇಳುವ ಸ್ಥಿತಿಯಲ್ಲಿಲ್ಲ. ಏನೂ ಮಾಡುವುದಕ್ಕೂ ಆಗುವುದಿಲ್ಲ. ವರ್ಗಾವಣೆ ಮಾಡುವುದರಲ್ಲಿ ಸ್ವಲ್ಪ ಬಿಗಿ ತಂದರೆ ಆಡಳಿತದಲ್ಲಿ, ಮಾಹಿತಿ ನೀಡುವುದರಲ್ಲಿ ಬಿಗಿ ತರುವುದಕ್ಕೆ ಸಾಧ್ಯವಾಗುತ್ತದೆ. ನಾನು ಎಂ.ಎಲ್.ಎ. ಆಗಿ 20 ವರ್ಷಗಳಾಯಿತು. ಯಾವ ಅಧಿಕಾರಿ ಕೂಡ ನಾನು ಹೇಳಿದ್ದನ್ನು ಕೇಳುವುದಿಲ್ಲ ಎಂದು ಹೇಳಲಿಲ್ಲ. ಎಲ್ಲದಕ್ಕೂ ಉತ್ತರ ಬರೆಯುತ್ತಾರೆ, ಪರಿಶೀಲನೆ ಭರವಸೆಯನ್ನು ಕೊಡುತ್ತಾರೆ, ಆದರೆ ರೆಕಾರ್ಡ್‌ಫೈಲ್ಸ್ ತೆಗೆದುಕೊಂಡಾಗ ನಿಮಗೆ ಏನೂ ಸಿಕ್ಕಿಹಾಕಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ವರ್ಗಾವಣೆ ಮಾಡುತ್ತಾರೆ ಅಥವಾ ಬೇರೆ ಏನಾದರೂ ತೊಂದರೆ ಕೊಡುತ್ತಾರೆ ಎನ್ನುವ ಭಯ ಅವರಿಗೆ ಇರುತ್ತದೆ. ಆ ಭಯ ಇಲ್ಲದಿರತಕ್ಕಂಥ ವಾತಾವರಣವನ್ನು ನಾವು, ನೀವು ಸೇರಿ ಸೃಷ್ಟಿ ಮಾಡಿದರೆ ಸಂಬಂಧಪಟ್ಟ ಅಧಿಕಾರಿ ಸರಿಯಾಗಿ ರೆಕಾರ್ಡ್ ಮಾಡುತ್ತಾನೆ ಮತ್ತು ಸರಿಯಾಗಿ ಫೈಲ್‌ನಲ್ಲಿ ಬರೆಯುತ್ತಾನೆ. ವರ್ಗಾವಣೆಯನ್ನು ಕೇವಲ ನಿಮ್ಮ ಸರ್ಕಾರ ಮಾತ್ರ ಮಾಡಿದೆ ಎಂದು ನಾನು ಹೇಳುವುದಿಲ್ಲ. ವರ್ಗಾವಣೆ ಒಂದು ದಂಧೆ ಆಗಿರಬಹುದು, ವರ್ಗಾವಣೆಗೆ ನಮ್ಮ ವ್ಯವಸ್ಥೆ ಸಹ ಕಾರಣವಾಗಿದೆ. ಆದ್ದರಿಂದ ಅದರಲ್ಲಿ ಏನಾದರೂ ಬದಲಾವಣೆ ಮಾಡಿದರೆ ಇಂಥ ಕಾನೂನುಗಳ ಉಪಯೋಗವಾಗುತ್ತದೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ಅತ್ಯಂತ ಉತ್ತಮವಾಗಿರತಕ್ಕಂಥ ಈ ವಿಧೇಯಕವನ್ನು ತಂದಿರುವುದಕ್ಕಾಗಿ ಇದನ್ನು ನಾನು

ಸ್ವಾಗತಿಸುತ್ತೇನೆ. ಆದರೆ ಇದು ಕಾರ್ಯಾಂಗಕ್ಕೆ ಮಾತ್ರ ಸೀಮಿತವಾಗಿದೆಯೆಂದು ಕಾಣುತ್ತದೆ. ಇದು ನ್ಯಾಯಾಂಗ ಹಾಗೂ ಶಾಸಕಾಂಗಕ್ಕೂ ಕೂಡ ಅನ್ವಯವಾಗುವ ನಿಟ್ಟಿನಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ನಾನು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛಿಸುತ್ತೇನೆ. ಏಕೆಂದರೆ ಇದು ನ್ಯಾಯಾಂಗ ಮತ್ತು ಶಾಸಕಾಂಗಕ್ಕೆ ವಿಸ್ತರಣೆ ಆಗಬೇಕು. ಶಾಸಕರ ಭವನದ ವಿಸ್ತರಣೆ ಮುಂತಾದವುಗಳು ಬಹಳ ಗುಪ್ತವಾಗಿವೆ. ಅದರ ಬಗ್ಗೆ ನಾವು ಯಾರೂ ಪ್ರಶ್ನಿಸುವ ಹಾಗಿಲ್ಲ. ನನ್ನ ಅನುಭವಕ್ಕೆ ಬಂದಿರತಕ್ಕಂಥಾದ್ದನ್ನು ಸದನದ ಮುಂದೆ ವ್ಯಕ್ತಪಡಿಸುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ಕೋರ್ಟಿಗೆ ಸಂಬಂಧಪಟ್ಟ ಒಬ್ಬ ಸಿಬ್ಬಂದಿಯ ಸಂಬಂಧಿಕರು ನನ್ನ ಹತ್ತಿರ ಬಂದರು. ಆ ಸಂಬಂಧಿಕರು ಬಂದು ಸದರಿ ಸಿಬ್ಬಂದಿಗೆ ಮನೆ ಕಟ್ಟುವುದಕ್ಕೆ ಒಂದು ಲಕ್ಷ ರೂಪಾಯಿ ಮಂಜೂರಾತಿ ಆಗಿದೆ, ಆದರೆ ಹಣ ಬಿಡುಗಡೆ ಆಗಿಲ್ಲ ಎಂದು ಹೇಳಿದರು. ನಾನು ಶಾಸಕನಾಗಿ ನನ್ನ ಕ್ಷೇತ್ರದ ಮತದಾರನೆಂದು ನಾನು ರಿಜಿಸ್ಟ್ರಾರ್‌ಗೆ ಒಂದು ಪತ್ರ ಬರೆದೆ. ಹಾಗೆ ಆ ಪತ್ರ ಬರೆದೆ ಎನ್ನುವ ತಪ್ಪಿಗೋಸ್ಕರ ತನಿಖೆಗೆ ಹಾಕಿ ಸುಮಾರು ಮೂರು ಗಂಟೆ ಕಾಲ ಕಟಕಟೆಯಲ್ಲಿ ನಿಲ್ಲಿಸಿ ಅಲ್ಲಿ ಹೆದರಿಸುವಂಥ ಪರಿಸ್ಥಿತಿ ಕಂಡುಬಂತು. ನಾನು ಅಲ್ಲಿ ಒಬ್ಬ ಶಾಸಕನಾಗಿ ನನಗೆ ಅಧಿಕಾರ ಇದೆಯೆಂದು ಪ್ರತಿಪಾದನೆ ಮಾಡಿ ಹೊರಗಡೆಗೆ ಬಂದೆ. ಅದು ಬೇರೆ ವಿಚಾರ. ನ್ಯಾಯಾಲಯಕ್ಕೆ ಒಂದು ಪ್ರಶ್ನೆ ಕೇಳಿದಕ್ಕಾಗಿ ಇಂಥ ಪರಿಸ್ಥಿತಿಯಾದ್ದರಿಂದ ಈ ವಿಧೇಯಕ ನ್ಯಾಯಾಲಯಕ್ಕೆ ಕೂಡ ಅನ್ವಯವಾಗಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತಿದ್ದೇನೆ. ಇನ್ನು ನನ್ನ ಕ್ಷೇತ್ರದಲ್ಲಿ ಪರಿಸರಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ಹೋರಾಟಗಳು ನಡೆಯುತ್ತಿವೆ. ಮುಖ್ಯವಾಗಿ ಯಾವ ಕಾರಣಕ್ಕೋಸ್ಕರ ಹೋರಾಟ ಮಾಡುತ್ತಿದ್ದೀರಿ ಎಂದು ನಾನು ಅಲ್ಲಿಯ ಪರಿಸರದ ಸಂಘಟಕರನ್ನು ಪ್ರಶ್ನೆ ಮಾಡಿದೆ. ಅನೇಕ ಬೃಹತ್ ಕೈಗಾರಿಕೆಗಳು ಬರುತ್ತಿವೆ, ಅದಕ್ಕೆ ಸಂಬಂಧಪಟ್ಟ ಪ್ರಾಜೆಕ್ಟ್ ರಿಪೋರ್ಟ್ ಆಗಲಿ ಅಥವಾ ಯಾವುದೇ ಮಾಹಿತಿಗಳು ನಮಗೆ ಸಿಗುತ್ತಿಲ್ಲ ಎಂದು ಅಲ್ಲಿಯ ಪರಿಸರ ಸಂಘಟಕರು ಹೇಳಿದರು. ಮಾಹಿತಿ ನಮಗೆ ಸಿಕ್ಕಿದಲ್ಲಿ ಅಧ್ಯಯನ ನಡೆಸಿ ಯಾವರೀತಿ ಇದರಿಂದ ಪರಿಹಾರ ಪಡೆದುಕೊಳ್ಳಬಹುದು, ನಮ್ಮ ಜನರಿಗೆ ತೊಂದರೆ ಆಗುವುದಿಲ್ಲವೆಂದು ಹೇಳುವಂಥ ಮಾಹಿತಿ ನಮ್ಮಲ್ಲಿ ಇದ್ದರೆ ನಾವು ಈ ರೀತಿ ಹೋರಾಟ ಮಾಡುವ ಅವಶ್ಯಕತೆ ಇರಲಿಲ್ಲವೆಂಬ ಅಂಶವನ್ನು ಹೇಳಿದರು. ಆ ದೃಷ್ಟಿಯಿಂದ ಇದು ತುಂಬ ಸ್ವಾಗತಾರ್ಹವಾದ ವಿಧೇಯಕ ಎಂಬ ಮಾತನ್ನು ಹೇಳುತ್ತಿದ್ದೇನೆ. ಹಾಗೆಯೇ ಈ ವಿಧೇಯಕವನ್ನು ಆಡಳಿತಾತ್ಮಕವಾಗಿ ತರುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ಕೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಸುರೇಶ್‌ಪ್ರಭು ಅವರು ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರದಲ್ಲಿ ಪರಿಸರ ಮತ್ತು ಅರಣ್ಯ ಸಚಿವರಾಗಿದ್ದರು. ಅವರು ನಮ್ಮ ಕ್ಷೇತ್ರಕ್ಕೆ ಬಂದಾಗ ಸಹಜವಾಗಿ ಅನೇಕ ಇನ್ಸ್‌ಪೆಕ್ಷನ್ಸ್‌ನ್ನು ಇಟ್ಟುಕೊಂಡಿದ್ದರು. ಆ ಸಂದರ್ಭದಲ್ಲಿ ಭ್ರಷ್ಟಾಚಾರರಹಿತ ಆಡಳಿತವನ್ನು ಕೊಡುವುದಕ್ಕೆ

ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ನಾನು ಅವರಿಗೆ ಪ್ರಶ್ನೆಯನ್ನು ಕೇಳಿದೆ. ಹಿಂದಿನ ಸರ್ಕಾರ ಯಾವುದೇ ಇರಲಿ, ಅಲ್ಲಿರುವಂಥ ಸಂದರ್ಭದಲ್ಲಿ, ಯಾವುದೇ ಮೆಷಾ ಇಂಡಸ್ಟ್ರಿಗೆ ಸಂಬಂಧಪಟ್ಟಿದ್ದು ಪರಿಸರ ಇಲಾಖೆಯಿಂದ ಕ್ಲಿಯರೆನ್ಸ್ ಬರಬೇಕೆಂದು ಫೈಲ್ಸ್ ಬಂದಾಗ, ಅದು ತಡವಾದರೂ ಕೂಡ ಇಲಾಖೆಗೆ ಸಾಕಷ್ಟು ಲಾಭ ಬರುತ್ತದೆ ಅಥವಾ ಬೇರೆ ರೀತಿಯಲ್ಲಿ ಸಂಪಾದನೆ ಆಗುತ್ತದೆ. ಹೀಗೆ ಅದು ಆದಷ್ಟು ಬೇಗ ಸಂಪಾದನೆ ಕೊಡುವಂಥ ವಿಭಾಗವಾಗಿರುತ್ತದೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆಯುವ ಹಾಗೆ ಮಾಡಿದರೆ ಒಬ್ಬ ಅರ್ಜಿದಾರ ಅರ್ಜಿ ಕೊಟ್ಟ ನಂತರ ಇಲಾಖೆಗೆ ಬರುವಂಥ ಅವಶ್ಯಕತೆಯಿಲ್ಲ ಎನ್ನುವ ಉತ್ತರವನ್ನು ಅವರು ಕೊಟ್ಟರು. ಅಂದರೆ ನೇರವಾಗಿ ವೆಬ್‌ಸೈಟ್‌ನಲ್ಲಿ ತಾನು ಮಾಹಿತಿಯನ್ನು ಕೊಟ್ಟು ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿಯನ್ನು ಕುಳಿತಲ್ಲಿಯೇ ಪಡೆದುಕೊಳ್ಳಬಹುದು. ಇಲಾಖೆಯ ಅಧಿಕಾರಿಗಳನ್ನು ಸಂಪರ್ಕ ಮಾಡಬೇಕಾಗಿಲ್ಲ. ಆದ್ದರಿಂದ ಮಾಹಿತಿ ಪಡೆಯುವ ಹಕ್ಕು ಆಡಳಿತಾತ್ಮಕವಾಗಿ ಬರದೇ ಇದ್ದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ವಿಶೇಷವಾದ ಭರವಸೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನು ಅಧಿವೇಶನ ಇಲ್ಲದಿರುವ ಸಂದರ್ಭದಲ್ಲಿ ಶಾಸಕರು ಏನಾದರೂ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಲಿಖಿತ ಮೂಲಕ ಉತ್ತರ ಕೊಡುವ ವ್ಯವಸ್ಥೆಯನ್ನು ಬಿಹಾರದ ಶಾಸಕಾಂಗ ವ್ಯವಸ್ಥೆಯಲ್ಲಿ ಅಳವಡಿಸಿದ್ದಾರೆ. ಈ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಸಹ ಮಾಹಿತಿಯನ್ನು ಕೊಡುವಂಥದ್ದು ಆಗಬೇಕು. ಬಹುಶಃ ಈ ಮಸೂದೆಯಿಂದ ವಿರೋಧ ಪಕ್ಷದ ಸದಸ್ಯರಿಗೆ, ಪತ್ರಿಕಾ ರಂಗದವರಿಗೆ ವಿಶೇಷ ಲಾಭ ಆಗಬಹುದು. ಇದರ ಜೊತೆಯಲ್ಲಿ ಅಧಿವೇಶನ ಇಲ್ಲದಿರುವಾಗ ನಾವು ಕೇಳುವ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರವನ್ನು ಪಡೆಯುವ ವಿಧಾನವನ್ನು ಅಳವಡಿಸಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು :— ಅಧಿವೇಶನ ಇಲ್ಲದಿದ್ದಾಗ ಕೇಳುವ ಪ್ರಶ್ನೆಗೆ ಲಿಖಿತ ಮೂಲಕ ಉತ್ತರವನ್ನು ಪಡೆಯುವ ವಿಚಾರಕ್ಕೆ ಸಂಬಂಧಪಟ್ಟಹಾಗೆ ನಮ್ಮ ರೂಲ್ಸ್‌ನಲ್ಲಿ ಚೇಂಜ್ ಮಾಡಿಕೊಳ್ಳಬೇಕು. ಈ ವಿಧೇಯಕದಲ್ಲಿ ಅಲ್ಲ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಮೇಲೆ ಹೇಳಿದ ವಿಚಾರವನ್ನು ಈ ವಿಧೇಯಕದಲ್ಲಿ ಅಳವಡಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಕೊನೆಯದಾಗಿ, ನೇರವಾಗಿ ಜನಸಂಪರ್ಕವುಳ್ಳ ಯಾವುದೇ ಸರ್ಕಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ತಜ್ಞರು ಹಾಗೂ ನಾಗರೀಕ ಜನಪ್ರತಿನಿಧಿಗಳಿಂದ ಕೂಡಿದ ಒಂದು ಸಲಹಾ ಸಮಿತಿಯನ್ನು ಕಡ್ಡಾಯವಾಗಿ ಮಾಡಿ ಕನಿಷ್ಠ ತಿಂಗಳಿಗೊಂದು ಸಲ ನೇರವಾಗಿ ಇಂಟರ್-ಆಕ್ಷನ್ ಮಾಡುವ ಮೂಲಕ ಮಾಹಿತಿಯನ್ನು ಪಡೆದುಕೊಳ್ಳುವಂಥಾದ್ದು ಮತ್ತು ಲೋಪದೋಷಗಳನ್ನು

ಸರಿಪಡಿಸುವುದನ್ನು ಮಾಡಬೇಕು ಎಂದು ವಿನಂತಿ ಮಾಡಿ ಇನ್ನು ಒಂದು ಸಮಸ್ಯೆಯ ಬಗ್ಗೆ ನಾನು ಹೇಳಬಯಸುತ್ತೇನೆ. ಸೆಕ್ಷನ್ 4(ಡಿ)ಯಲ್ಲಿ ಯಾವ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ಇಲಾಖೆಗಳ ನಡುವಿನ ಬಿಚ್ಚು ಮನಸ್ಸಿನ ಮತ್ತು ನಿಷ್ಕಪಟ ಆಂತರಿಕ ಚರ್ಚೆಗಳಿಗೆ ಹಾಗೂ ಆಂತರಿಕ ನೀತಿಯ ವಿಶ್ಲೇಷಣೆಗೆ ಸಂಬಂಧಪಟ್ಟಂಥ ಸಲಹೆ ಅಥವಾ ಅಭಿಪ್ರಾಯಗಳನ್ನು ಯೋಜನೆಗಳು ಮತ್ತು ಊಹೆಗಳನ್ನು ಒಳಗೊಂಡಂತೆ ಇಲಾಖೆಗಳ ನಡುವಿನ ಅಥವಾ ಅವುಗಳೊಳಗಿನ ಟಿಪ್ಪಣಿಗಳು, ಪತ್ರ ವ್ಯವಹಾರಗಳು ಮತ್ತು ಕಾಗದ ಪತ್ರಗಳಿಗೆ ಬಾಧೆಯುಂಟಾಗುವುದೋ ಆ ಮಾಹಿತಿಯನ್ನು ಇದರ ಬಗ್ಗೆ ದಯಮಾಡಿ ತಾವು ಮಾಹಿತಿಯನ್ನು ನೀಡಬೇಕು. ಏಕೆಂದರೆ, ಮಾಹಿತಿ ನಿರಾಕರಣೆ ಮಾಡಲಿಕ್ಕೆ ಇದೊಂದು ಕಾರಣವಾಗುತ್ತದೆ. ನಂತರ ಇಲಾಖಾ ಮಟ್ಟದಲ್ಲಿ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಹೇಳಿ ಅಧಿಕಾರಿಗಳು ನಿರಾಕರಿಸುವಂಥ ಕಾರಣ ಇದಾಗಬಹುದು ಎನ್ನುವ ಸಂಶಯ ನನಗಿದೆ. ಆದ್ದರಿಂದ, ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು, ನನಗೆ ಈ ವಿಧೇಯಕದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಮಾನ್ಯ ಅಧ್ಯಕ್ಷರೆ, ನನಗೊಂದು ಸಣ್ಣ ವಿವರಣೆ ಮಾನ್ಯ ಸಚಿವರು ಹೇಳಬೇಕಾಗುತ್ತದೆ. ನಾವು ಇಲ್ಲಿ ಕೆಲವೊಂದು ಪ್ರಶ್ನೆಗಳನ್ನು ಹಾಕಿದಾಗ ತಿಂಗಳಾದರೂ ಸಚಿವರು ಉತ್ತರ ಬಂದಿಲ್ಲವೆಂದು ಹೇಳುತ್ತಾರೆ. ಉತ್ತರ ಬಂದಿಲ್ಲವೆಂದು ಹೇಳುವಂಥಾದ್ದು ಈ ಕ್ಲಾಜ್‌ನಲ್ಲಿ ಸೇರುತ್ತದೆಯೇ?

ಅಧ್ಯಕ್ಷರು :— ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನಮ್ಮ ಸಭೆಯ ನಿಯಮ ಹಾಗೂ ಕಾರ್ಯ ವಿಧಾನದ ನಿಯಮಗಳನ್ನು ನಾವು ಬದಲಾವಣೆ ಮಾಡಿಕೊಳ್ಳಬಹುದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಕಳೆದ 12 ವರ್ಷಗಳಿಂದ ನಾವು ನೋಡುತ್ತಿದ್ದೇವೆ, ನಾವು ಪ್ರಶ್ನೆ ಅಥವಾ ಗಮನ ಸೆಳೆಯುವ ಸೂಚನೆಯ ಮೂಲಕ ಸರ್ಕಾರಕ್ಕೆ ಉತ್ತರ ಕೇಳಿದರೆ ಒಂದು ವರ್ಷವಾದರೂ ಉತ್ತರ ಬಾರದಿರುವುದನ್ನು ತಾವು ನೋಡುತ್ತಿದ್ದೀರಿ. ಅದು ಇದರಲ್ಲಿ ಸೇರುತ್ತದೆಯೇ? ಅಥವಾ ನೀವು ಪ್ರತ್ಯೇಕವಾಗಿ ರೂಲ್ ಮಾಡುತ್ತೀರಾ? ನೀವು ರೂಲ್ಸ್ ಮಾಡಿದರೆ ಪೀನಲ್ ಕ್ಲಾಜ್ ಹಾಕುತ್ತೀರಾ?

+ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) :— ಮಾನ್ಯ ಅಧ್ಯಕ್ಷರೆ, ಅತ್ಯಂತ ಉಪಯುಕ್ತ ಹಾಗೂ ಸಮಯೋಚಿತ ವಿಧೇಯಕವನ್ನು ಮಾನ್ಯ ಸಚಿವರು ಇಲ್ಲಿ ತಂದಿದ್ದಾರೆ. ಇದರ ಅವಶ್ಯಕತೆ ಸಾರ್ವಜನಿಕರಿಗೆ ಹಾಗೂ ಜನಪ್ರತಿನಿಧಿಗಳಿಗೆ ಮುಖ್ಯವಾಗಿ ಬೇಕಾಗಿರುತ್ತದೆ. ನಮ್ಮ 15 ವರ್ಷಗಳ ಅನುಭವದಲ್ಲಿ ಹೇಳುವುದಾದರೆ, ಜನಪ್ರತಿನಿಧಿಗಳು ಅರ್ಜಿ ಕೊಟ್ಟು ಸರ್ಕಾರದಿಂದ ಉತ್ತರ ಪಡೆಯುವುದೇ ಒಂದು ದೊಡ್ಡ ಸಾಧನೆಯಂತಾಗಿದೆ; ಕೆಲಸ

ಮಾತ್ರ ಏನೂ ಆಗಿರುವುದಿಲ್ಲ. ನಾನು ಬಹಳ ಶೋಚನೀಯವಾದ ರೀತಿಯಲ್ಲಿ ಈ ಮಾತನ್ನು ಹೇಳಬೇಕಾಗುತ್ತದೆ, ಏಕೆಂದರೆ, ಯಾವುದೇ ಕಾರ್ಯದರ್ಶಿಗಳು ಜನಪ್ರತಿನಿಧಿಗಳು ಕೇಳಿದಂಥ ಮಾಹಿತಿಗೆ ನಿರ್ದಿಷ್ಟ ಸಮಯದಲ್ಲಿ ಮಾಹಿತಿಯನ್ನು ಕೊಡುವಂಥ ಕನಿಷ್ಠ ಸೌಜನ್ಯ ಮತ್ತು ಯಾರು ಉಳಿಸಿಕೊಂಡಿಲ್ಲ. ನಾವು ಏನೇ ಕೇಳಿದರೂ ಕಾರ್ಯದರ್ಶಿ-2, ಉಪ ಕಾರ್ಯದರ್ಶಿ, ಮ್ಯಾನೇಜರ್, ಕೊನೆಗೆ ಕ್ಲರ್ಕ್ ಹತ್ತಿರ ಹೋಗಬೇಕಾಗುತ್ತದೆ. ಇಂಥ ಪರಿಸ್ಥಿತಿ ಇವತ್ತು ಉಂಟಾಗಿದೆ. ಮಾನ್ಯ ಸಿಂಧ್ಯಾರವರು, ವರ್ಗಾವಣೆಯ ವಿಚಾರವಾಗಿ ಹೇಳಿದರು. ಈ ವಿಚಾರ ಬೇರೆ. ಆದರೆ ಅವರ ಕಾಲದಲ್ಲೂ ಕೂಡ ಇದಕ್ಕಿಂತ ಜಾಸ್ತಿಯಾಗಿದೆ, ನಾವು ಈ ಬಗ್ಗೆ ಮಾಹಿತಿಯನ್ನು ನೋಡಿದ್ದೇವೆ. ಆದರೆ, ವರ್ಗಾವಣೆಯನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಯಾವುದೇ ಅಧಿಕಾರಿಯನ್ನು ಸಾಮಾನ್ಯವಾಗಿ ಕೇಳಿದಾಗ, ಏನು ಆಗಿದೆ, ಏನೂ ಇಲ್ಲ, ಎನ್ನತಕ್ಕಂಥ ಯಾವ ಮಾಹಿತಿಯೂ ದೊರೆಯುವುದಿಲ್ಲ. ಅದರ ಬದಲಾಗಿ ಕನಿಷ್ಠ 15 ಅಥವಾ ನಿರ್ದಿಷ್ಟವಾಗಿ ಇಷ್ಟು ದಿವಸದೊಳಗೆ ಮಾಡಿಕೊಡಬೇಕೆಂದು ಕಡ್ಡಾಯ ಮಾಡಿದರೆ ಮಾತ್ರ ಎಲ್ಲರಿಗೂ ಮಾಹಿತಿ ಲಭ್ಯವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಕೊಟ್ಟಿರುವ ಅರ್ಜಿ ಮಾತ್ರ ಹಾಗೆಯೇ ಇರುತ್ತದೆ. ನಾವು ಹೋಗಿ ವಿಚಾರಿಸಿದರೆ ನಾಳೆ ಕಡತವನ್ನು ಕಳುಹಿಸುತ್ತೇವೆ ಎನ್ನುವ ಉತ್ತರ ಬರುತ್ತದೆ. ಒಂದು ಕಡತ ಮತ್ತೊಂದು ಕಡೆಗೆ ಹೋಗಬೇಕೆಂದರೆ ಕನಿಷ್ಟ 15 ದಿವಸಗಳ ಕಾಲ ಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ಬದಲಾಯಿಸಬೇಕು. ನಾನು ಈ ಅಧಿವೇಶನದಲ್ಲಿ ಸುಮಾರು 118 ಪ್ರಶ್ನೆಗಳನ್ನು ಕೇಳಿದ್ದೇನೆ, ಅದರಲ್ಲಿ ಸುಮಾರು 10-15 ಪ್ರಶ್ನೆಗಳಿಗೆ ಉತ್ತರ ಬಂದಿದೆ. ನಾನು ನನ್ನ ಅನುಭವದಲ್ಲಿ ಹೇಳುವುದಾದರೆ, ಬೇರೆ ವಿಧಾನ ಮಂಡಲದಲ್ಲಿ ನಾವು ಕೊಟ್ಟಂಥ ಪ್ರಶ್ನೆಗಳಿಗೆ ಸನ್ಮಾನ್ಯ ಸಭಾಧ್ಯಕ್ಷರು ಉತ್ತರ ತರಿಸುವಂಥ ವ್ಯವಸ್ಥೆಯನ್ನು ಮಾಡಿಕೊಂಡಿರುವುದರಿಂದ ತಾವು ಕೂಡ ಮಾಡಬೇಕಾಗುತ್ತದೆ. ವಿಧಾನಸಭಾ ಸದಸ್ಯರೆಂದರೆ ಸಾಮಾನ್ಯವಾಗಿ ಎಲ್ಲರಿಗೂ ಅರ್ಜಿ ಕೊಡುವಂಥ ಸ್ಥಿತಿ ಇದೆ. ಪ್ರಧಾನಿಯಿಂದ ಹಿಡಿದು ಗ್ರಾಮ ಪಂಚಾಯಿತಿ ಸದಸ್ಯರಿಗೆ ನಾವು ಅರ್ಜಿಯನ್ನು ಕೊಡುತ್ತೇವೆ. ನಾವು ಕೊಟ್ಟಂಥ ಅರ್ಜಿಗೆ ನಿಖರವಾದ ಉತ್ತರ ಸಕಾಲದಲ್ಲಿ ದೊರಕಲಿಲ್ಲವೆಂದರೆ ಹೇಗೆ? 5 ವರ್ಷಗಳು ಕಳೆದಾದ ಮೇಲೆ ಇವನೇನು ಮಾಡಿಲ್ಲ ಎಂದು ಜನ ನಮ್ಮನ್ನು ಮನೆಗೆ ಕಳುಹಿಸುತ್ತಾರೆ. ಆದ್ದರಿಂದ, ತಾವು ಮುತುವರ್ಜಿ ವಹಿಸಿ ಕಾನೂನಿನ ಚೌಕಟ್ಟಿನಲ್ಲಿ ಇಂಥ ಮಾಹಿತಿಯನ್ನು ಇಂಥ ಮಾಹಿತಿಯನ್ನು ಇಂಥ ದಿವಸಗಳೊಳಗೆ ತಲುಪಿಸಿದರೆ ಮಾತ್ರ ಅನುಕೂಲವಾಗುತ್ತದೆ. ಇದರ ಜೊತೆಗೆ ನಾವು ನೇರವಾಗಿ ಕೆಲವು ಪ್ರಶ್ನೆಗಳನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿರುತ್ತೇವೆ, ಅಂಥ ಸಂದರ್ಭದಲ್ಲಿ ತಾವು ಮುತುವರ್ಜಿವಹಿಸಿ ಉತ್ತರವನ್ನು ಆದಷ್ಟು ಬೇಗ ತರಿಸಿ ಕೊಡುವಂಥ ಪರಿಪಾಠವನ್ನು ಹಾಕಿಕೊಂಡರೆ, ಬಹುಶಃ ಇಡೀ ರಾಷ್ಟ್ರದಲ್ಲಿ ತಾವು ಮಾದರಿ ಸರ್ಕಾರವನ್ನು ನಡೆಸುವಂಥ ಸಭಾಧ್ಯಕ್ಷರು ಎಂದು ಹೆಸರು ಬರುತ್ತದೆ. ತಮಗೆ

ಈ ನೀತಿನಲ್ಲಿ ಹೆಚ್ಚಿನ ಅಧಿಕಾರವನ್ನು ಕೂಡ ಕೊಟ್ಟಹಾಗೆ ಆಗುತ್ತದೆ. ಏಕೆಂದರೆ, ಕೆಲವು ಶಾಸಕರು ಮಂತ್ರಿಗಳ ಕಛೇರಿಗೆ ಹೋಗುತ್ತಾರೆ, ಇನ್ನು ಕೆಲವರು ಹೋಗುವುದಿಲ್ಲ. ಇಂಥ ಸಂದರ್ಭದಲ್ಲಿ ತಾವು ಮುತುವರ್ಜಿ ವಹಿಸಿ ಉತ್ತರವನ್ನು ತರಿಸಿಕೊಟ್ಟರೆ ಒಳ್ಳೆಯದಾಗುತ್ತದೆ. ಯಾವ ಶಾಸಕರು ನಿಮಗೆ ಪ್ರಶ್ನೆಯನ್ನು ಕಳುಹಿಸಿಕೊಟ್ಟರೆ ತಾವು ಸರ್ಕಾರದ ಹಾಗೂ ಶಾಸಕರ ಮಧ್ಯವರ್ತಿಯಾಗಿ ಕೆಲಸ ಮಾಡುವುದರ ಮೂಲಕ ಉತ್ತಮವಾದ ಕಾರ್ಯ ನಿರೂಪಣೆ ಮಾಡಿದಂತಾಗುತ್ತದೆ. ಇದಕ್ಕಾಗಿ ತಾವು ಕೂಡ ನಿಯಮಬದ್ಧವಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ವಿಧೇಯಕ ಬಹಳ ಚೆನ್ನಾಗಿದೆ. ಇದಕ್ಕೆ ಇನ್ನು ಕೆಲವು ತಿದ್ದುಪಡಿಗಳನ್ನು ಮಾಡಿಕೊಂಡು, ಶಾಸಕರು ಹಾಗೂ ಸಾರ್ವಜನಿಕರು ಕೊಟ್ಟಂಥ ಅರ್ಜಿಗಳಿಗೆ ನಿರ್ದಿಷ್ಟ ಅವಧಿಯಲ್ಲಿ ಉತ್ತರ ಸಿಗುವ ಹಾಗೆ ಅಂದರೆ ಒಂದು ಗೊತ್ತಾದ ಕಾಲಮಿತಿಯೊಳಗೆ ಬೇಕಾದ ಮಾಹಿತಿ ಸಿಗುವ ಹಾಗೆ ಒಂದು ಉತ್ತಮವಾದ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಧೇಯಕಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಮಾಡಿಕೊಂಡು ನಾನು ಮೇಲ್ಕಾಣಿಸಿದ ಸಲಹೆಗಳನ್ನು ಸೇರಿಸಿಕೊಂಡು ಇದನ್ನು ಉತ್ತಮಪಡಿಸಿ ಮಾಡಬೇಕೆಂದು ತಿಳಿಸುತ್ತಾ, ಇದಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮ ಗೌಡ (ತಿಕೋಟಾ) :— ಮಾನ್ಯ ಅಧ್ಯಕ್ಷರೆ, ನನಗೆ ವಿಧೇಯಕದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಾನು ತಮಗೆ ಮೊದಲು ಧನ್ಯವಾದಗಳನ್ನರ್ಪಿಸುತ್ತೇನೆ. ಅವರು ಕೋಪಿಸಿಕೊಂಡರೂ ಪರವಾಗಿಲ್ಲ, ನಾನು ಈ ಮಾತನ್ನು ಹೇಳಬೇಕಾಗಿದೆ; ಏಕೆಂದರೆ, ಮಾನ್ಯ ಮಲ್ಲಿಕಾರ್ಜುನ್‌ರವರು ಈಗಾಗಲೇ ಹೇಳಿದ್ದು ತಪ್ಪೇನಿಲ್ಲ. ಮಾನ್ಯ ಅಧ್ಯಕ್ಷರೆ, ಸ್ವತಃ ಉತ್ತರ ಕೊಡಿಸುವುದಕ್ಕೆ ಎಂಟು ದಿವಸಗಳ ಕಾಲ ಸಮಯ ತೆಗೆದುಕೊಂಡಿದ್ದಾರೆ, ಆದರೂ ಉತ್ತರ ಬರಲಿಲ್ಲ. ಕೊನೆಗೆ ಅವರೇ ಉತ್ತರ ಕೊಡಲಿಲ್ಲವೆಂದರೆ ನಾನೇನು ಮಾಡಲಿ, ಎಂದು ಹೇಳಿದರು. ಸನ್ಮಾನ್ಯ ಅಧ್ಯಕ್ಷರಲ್ಲಿ ಹಾಗೂ ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಈಗ ತಾನೇ ಮಾತನಾಡಿದ ಮಾನ್ಯ ಮಲ್ಲಿಕಾರ್ಜುನ್ ರವರ ಪ್ರಶ್ನೆಗೆ, ತಾವು ರೂಲ್ಸ್‌ನಲ್ಲಿ ನಾವೇ ಅಮೆಂಡ್‌ಮೆಂಟ್ ಮಾಡಿಕೊಳ್ಳಬೇಕೆಂದು ಹೇಳಿದಿರಿ. ನನಗೂ ಕೂಡ ಒಂದು ಪ್ರಶ್ನೆಗೆ ಉತ್ತರ ಕೊಡಿಸುವುದಕ್ಕೆ ತಾವೇ 10 ದಿವಸ ಪ್ರಯತ್ನಪಟ್ಟರೂ ಕೊನೆಗೆ ತಮ್ಮ ಕೈಯಲ್ಲಿ ಆಗಲಿಲ್ಲ. ನಾನು ಕೇಳಿದ್ದ ಗಮನ ಸೆಳೆಯುವ ಸೂಚನೆ ಲ್ಯಾಪ್ಸ್ ಆಗಿ ಹೋಯಿತು. ಅದರಲ್ಲಿ ಅಂಥದ್ದೇನೂ ಇರಲಿಲ್ಲ. ಕ್ವಾಜಿ ಜುಡಿಷಿಯಲ್ ಅಥಾರಿಟಿ ಕೋ-ಆಪರೇಟಿವ್ ಮಿನಿಷ್ಟ್ರು ಇರುತ್ತಾರೆ. ಇವರು ಒಂದು ಸ್ಟೇ ಇಷ್ಯೂ ಮಾಡುತ್ತಾರೆ, ಇದಾಗಿ ಹತ್ತು ತಿಂಗಳಾದರೂ ಇದಕ್ಕೆ ಉತ್ತರ ಕೊಡುವುದಿಲ್ಲ. ನಾವು ಎಷ್ಟು ಬರೆದರೂ ಇದಕ್ಕೆ ಉತ್ತರ ಬರಲಿಲ್ಲ, ಕೊನೆಗೆ ಇದರ ಬಗ್ಗೆ ಸರ್ಕಾರದ ಗಮನ ಸೆಳೆಯೋಣ ಎಂದು ಗಮನ ಸೆಳೆಯುವ ಸೂಚನೆ ಹಾಕಿದರೂ ಇದರ ಬಗ್ಗೆ ಇನ್ನೂ ಉತ್ತರ ಬರಲಿಲ್ಲ. ನಾನು ತಮ್ಮಲ್ಲಿ ಕೇಳುವುದೇನೆಂದರೆ,

ಮಂತ್ರಿಗಳು ಕೂಡ ಇದರ ವ್ಯಾಪ್ತಿಯಲ್ಲಿ ಬರುತ್ತಾರೆಯೇ? ಏಕೆಂದರೆ, ಅವರು ಉತ್ತರ ಕೊಡಲಿಲ್ಲವೆಂದರೆ ಅವರ ಸಂಬಳ ಕೂಡ ಕಳೆದು ಅವರಿಗೆ ಏನಾದರೂ ಪೆನಾಲ್ಟಿ ಕ್ಲಾಜ್ ಇದರಲ್ಲಿ ಇನ್‌ಕ್ಲೂಡ್ ಮಾಡುತ್ತೀರಾ? ಈ ಬಗ್ಗೆ ತಾವು ದಯಮಾಡಿ ಉತ್ತರ ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ವಿಧಾನ ಮಂಡಲದ ಸಚಿವಾಲಯ ಇದಕ್ಕೆ ಸೇರಿದರೆ ಮಾನ್ಯ ಮಲ್ಲಿಕಾರ್ಜುನ್‌ರವರು ಕೇಳಿದ ಪ್ರಶ್ನೆಗೆ ಉತ್ತರ ಬೇಕು ಹಾಗೆ ಆಗುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ವಿಧಾನ ಮಂಡಲದ ಸಚಿವಾಲಯ ಸೇರಿದರೆ ಬರುವುದಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :— ಇದನ್ನು ತಂದಿರುವುದು ಇಲಾಖೆಯ ಕಾರ್ಯ ಹಾಗೂ ನ್ಯೂನತೆಯ ಬಗ್ಗೆ ಮಾಹಿತಿ ಕೇಳುವುದಕ್ಕೆ. ಇದರಲ್ಲಿ ಅದು ಹೇಗೆ ಬರುತ್ತದೆ?

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮ ಗೌಡ :— ಅದರಲ್ಲಿ ಬರುವುದಿಲ್ಲವೆಂದು ತಾವೇ ಹೇಳಿಬಿಡಿ...

ಶ್ರೀ ಕಾಗೋಡು ತಿಮ್ಮಪ್ಪ :— ಇಲಾಖೆಯ ವಿಚಾರವನ್ನು ಚರ್ಚೆ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ?....

(ಗೊಂದಲ)

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮ ಗೌಡ :— ಹಾಗಾದರೆ ಇದನ್ನು ಏಕೆ ತಂದಿರಿ? ಅದರಲ್ಲಿ ಬರುವುದಿಲ್ಲವೆಂದು ತಾವು ಹೇಳಿಬಿಡಿ...

ಶ್ರೀ ಕಾಗೋಡು ತಿಮ್ಮಪ್ಪ :— ಈ ಮಸೂದೆ ಜಾರಿಗೆ ಬಂದರೆ ತಾವು ಹೇಳುವ ನ್ಯೂನತೆಗಳನ್ನು ಬಗೆಹರಿಸಬಹುದೆನ್ನುವ ಕಾರಣಕ್ಕಾಗಿಯೇ ಈ ಮಸೂದೆಯನ್ನು ತರುತ್ತಿರುವುದು.

(ಗೊಂದಲ)

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ವಿಧಾನ ಮಂಡಲದ ಸಚಿವಾಲಯವನ್ನು ಸೇರಿಸಿದರೆ ಬರುವುದಿಲ್ಲ, ಏಕೆಂದರೆ, ವಿಧಾನಮಂಡಲದ ಸಚಿವಾಲಯದವರು ನಾವು ಏನು ಕೊಟ್ಟಿರುತ್ತೇವೆ ಅದನ್ನು ಇಲಾಖೆಗೆ ಕಳುಹಿಸುತ್ತಾರೆ, ಇಲಾಖೆಯವರು ಉತ್ತರವನ್ನು

15 ದಿವಸಗಳೊಳಗೆ ಕಳುಹಿಸದೇ ಹೋದರೆ, ಆಗ ನಾವು ಏನು ಮಾಡಬೇಕು ಎಂದರೆ, ನಾವು ಮಂತ್ರಿಗಳಿಗೆ ಪ್ರಶ್ನೆಗಳನ್ನು ಕಳುಹಿಸಿರುತ್ತೇವೆ; ಅಂಥ ಸಂದರ್ಭದಲ್ಲಿ ಮಂತ್ರಿಗಳಿಗೆ ಪೆನಾಲ್ಟಿ ಕ್ಲಾಜ್ ಹಾಕಬೇಕಾಗುತ್ತದೆ. ನಾವು ವಿಧಾನಮಂಡಲ ಸಚಿವಾಲಯದ ಬಗ್ಗೆ ಹೇಳುತ್ತಿಲ್ಲ. ಮಂತ್ರಿಗಳು 15 ದಿವಸದೊಳಗೆ ಮಾಹಿತಿ ಕೊಡದೇ ಹೋದರೆ ಅವರಿಗೆ ಪೆನಾಲ್ಟಿ ಕ್ಲಾಜ್ ಹಾಕಬೇಕು, ಎನ್ನುವುದರ ಬಗ್ಗೆ ಸೂಚನೆ ನೀಡುತ್ತಿದ್ದೇವೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮ ಗೌಡ :— ಅಧಿಕಾರಿಗಳಿಗೆ ಇದಗಲ್ಲಿ ಪೆನಾಲ್ಟಿ ಕ್ಲಾಜ್ ಹಾಕಿದ್ದೀರಿ, ಅದೇ ರೀತಿ ಮಂತ್ರಿಗಳಿಗೆ ಹಾಕುವುದರಲ್ಲಿ ಏನು ತಪ್ಪಿದೆ ಎಂದು ನಾವು ತಮ್ಮಲ್ಲಿ ಕೇಳಬಯಸುತ್ತೇನೆ. ತಾವು ಇದು ತಪ್ಪು ಎಂದು ಹೇಳಿಬಿಡಿ, ನಾವು ಸುಮ್ಮನೇ ಕುಳಿತುಬಿಡುತ್ತೇವೆ.

ಅಧ್ಯಕ್ಷರು :— ಇದರ ಬಗ್ಗೆ ನಾನು ಅನೇಕ ಸಲ ಹೇಳಿದ್ದೇನೆ. ಏಕೆಂದರೆ, ನಾನು ಕೂಡ ಮೂರು-ನಾಲ್ಕು ಬಾರಿ ಚುನಾಯಿತ ಸದಸ್ಯನಾಗಿ ನನ್ನ ಅನುಭವದಲ್ಲಿ ಹೇಳುವುದಾದರೆ, ಈ ರೀತಿ ಕೆಲವು ಉತ್ತರಗಳು ಸಕಾಲಕ್ಕೆ ಬರುವುದಿಲ್ಲ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ನಾವು ಕಂಡುಹಿಡಿಯಬೇಕಾಗಿದೆ.

ಶ್ರೀ ಜಗದೀಶ್ ಶೆಟ್ಟರ್ :— ನಾವು ಕೇಳಿದ ಮಾಹಿತಿಯು ಸುಮಾರು ಆರೇಳು ತಿಂಗಳಾದರೂ ಬರುವುದಿಲ್ಲ, ಹೀಗಾದರೆ ಮುಂದೆ ನಾವು ಏನು ಮಾಡಬೇಕು? ಇವತ್ತೇನೋ ಇವರು ಬಿಲ್ ತರುತ್ತಾರೆ, ಆದರೆ, ಶಾಸಕರಿಗೆ ಸಕಾಲಕ್ಕೆ ಯಾವ ಮಾಹಿತಿಯೂ ಸಿಗುವುದಿಲ್ಲ. ಈಗಾಗಲೇ ಮಾನ್ಯ ರಾಮದಾಸ್‌ರವರು ಹೇಳಿದಂತೆ ಆರು ತಿಂಗಳಾದರೂ ಒಂದು ಮಾಹಿತಿ ಸಿಗಲಿಲ್ಲವಂತೆ, ಆ ರೀತಿಯ ಪರಿಸ್ಥಿತಿ ಇವತ್ತು ಇದೆ.

(ಗೊಂದಲ)

ಅಧ್ಯಕ್ಷರು :— ಈ ವಿಷಯದ ಬಗ್ಗೆ ಸಂಸದೀಯ ವ್ಯವಹಾರ ಸಚಿವರ ಜೊತೆ ನಾನು ಸಮಾಲೋಚನೆ ಮಾಡಿ ಇದಕ್ಕೊಂದು ಸೆಲ್ಯೂಶನ್ ಅನ್ನು ಹುಡುಕುತ್ತೇನೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಇತ್ತೀಚೆಗೆ ತಾವು ಏಕೋ ಬಹಳ ಸಿಟ್ಟು ಮಾಡುಕೊಳ್ಳುತ್ತಿದ್ದೀರಿ. ನಿಮ್ಮ ಸಿಟ್ಟನ್ನು ನೋಡಿದರೆ ನಾವು ಹೌಸ್‌ಗೆ ಬರುವುದೇ ಬೇಡ ಎಂದು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್ :— ಎಲ್ಲಾ ಸಂದರ್ಭದಲ್ಲಿಯೂ ಸಹ ನಾವು ನೇರವಾಗಿ ಸಚಿವರಿಂದ ಉತ್ತರವನ್ನು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ಎಲ್ಲಾ ಪ್ರಶ್ನೆಗಳಿಗೆ ತಮ್ಮ ಮೂಲಕವೇ ಉತ್ತರ ಸಿಗಬೇಕು. ಆದರೆ ಇಂಥ ಪರಿಸ್ಥಿತಿ ಬಂದರೆ

ಸಚಿವರಿಂದ ನಾವು ಯಾವ ರೀತಿಯಾಗಿ ಉತ್ತರವನ್ನು ನಿರೀಕ್ಷೆ ಮಾಡಬೇಕು? ಇಂಥ ಪರಿಸ್ಥಿತಿ ಇಲ್ಲಿ ಯಾವತ್ತೂ ಕೂಡ ಬರಬಾರದು.

ಅಧ್ಯಕ್ಷರು :— ಈ ವಿಷಯವನ್ನು ತಾವೆಲ್ಲರೂ ನನ್ನ ಗಮನಕ್ಕೆ ತಂದಿದ್ದೀರಿ. ಆದ್ದರಿಂದ ನಾನು ಸಂಸದೀಯ ವ್ಯವಹಾರಗಳ ಸಚಿವರ ಜೊತೆ ಮಾತನಾಡಿ ಒಂದು ಒಳ್ಳೆಯ ವ್ಯವಸ್ಥೆಯನ್ನು ಮುಂದಿನ ಅಧಿವೇಶನದೊಳಗೆ ತರೋಣ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ಮಾನ್ಯ ಅಧ್ಯಕ್ಷರೆ, ಈಗ 10 ನಿಮಿಷದವರೆಗೆ ಹೌಸ್ ಅನ್ನು ಅಡ್ಜರ್ನ್ ಮಾಡಿ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಜೊತೆ ಮಾತನಾಡಿ, ಈ ವಿಷಯದ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು :— ಈಗ ಮಾಡುವುದಕ್ಕೆ ಆಗುವುದಿಲ್ಲ. ಮುಂದಿನ ಅಧಿವೇಶನದೊಳಗೆ ಮಾಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೆ, ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರಿಸತಕ್ಕಂಥ ಜವಾಬ್ದಾರಿ ತಮಗೆ ಇದೆ. ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗಿಂತ ಉನ್ನತ ಅಧಿಕಾರವನ್ನು ತಾವು ಹೊಂದಿದ್ದೀರಿ. ಆದ್ದರಿಂದ ಸರ್ಕಾರದ ಕಡೆಯಿಂದ ಉತ್ತರ ತರಿಸತಕ್ಕಂಥ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕು.

ಅಧ್ಯಕ್ಷರು :— ನಾನು ಈಗಾಗಲೇ ಹೇಳಿದ ಪ್ರಕಾರ ಸಂಸದೀಯ ವ್ಯವಹಾರಗಳ ಸಚಿವರ ಜೊತೆ ಈ ವಿಷಯದ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ಸೆಲ್ಯೂಶನ್ ಅನ್ನು ಹುಡುಕುತ್ತೇನೆ.

ಶ್ರೀ ವಿ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ 80 ಕೋಟಿ ರೂಪಾಯಿಗಳಷ್ಟು ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇನೆ. ಈ ನನ್ನ ಪ್ರಶ್ನೆಗೆ ಸರ್ಕಾರದ ಕಡೆಯಿಂದ ಇದುವರೆಗೂ ಉತ್ತರ ಬಂದಿಲ್ಲ. ಈ ಸದನದ ಅಧ್ಯಕ್ಷರಾಗಿರುವ ನಿಮ್ಮ ಕಡೆಯಿಂದಲೇ ಉತ್ತರವನ್ನು ತರಿಸುವುದಕ್ಕೆ ಆಗದೇ ಇದ್ದರೆ ಹೇಗೆ?

ಅಧ್ಯಕ್ಷರು :— ಅಧಿವೇಶನ ಮುಗಿದ ಮೇಲೆ ಸರ್ಕಾರದ ಕಡೆಯಿಂದ ಲಿಖಿತ ಮೂಲಕ ಉತ್ತರ ಬರುತ್ತದೆ.

ಪ್ರೊ. ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರಚಾರ ಸಚಿವರು) :— ಮಾನ್ಯ ಅಧ್ಯಕ್ಷರೆ, ಹೆಚ್ಚು ಸಮಯದವರೆಗೆ ಕುಳಿತುಕೊಂಡು ಚರ್ಚೆ ಮಾಡೋಣ ಎಂದು ತಾವು ಏನು ಹೇಳಿದ್ದೀರಿ, ಅದೇ ದಾರಿಯಲ್ಲಿ ನಾವು ಅಕ್ಷರಶಃ ಹೋಗುತ್ತಿದ್ದೇವೆ ಎಂದು

ನನಗನ್ನಿಸುತ್ತದೆ. ಸನ್ಮಾನ್ಯ ಸಿಂಧ್ಯರವರು ಹೇಳಿದಂಥ ಒಂದು ಮಾತನ್ನು ನಾನು ಒಪ್ಪುತ್ತೇನೆ. ಮೂಲತಃ ಈ ದೇಶದಲ್ಲಿ ನಮಗೆ ಇರತಕ್ಕಂಥ ಒಂದು ರಾಜಕೀಯ ಸಂಸ್ಕೃತಿಯಲ್ಲಿ ಯಾವುದೇ ಕಾನೂನು ಆದರೂ ಪರವಾಗಿಲ್ಲ, ಅದರ ಸುತ್ತಮುತ್ತ ಅಡ್ಡಾಡಿ, ಅದರೊಳಗೆ ಇರತಕ್ಕಂಥ ವ್ಯಾಪ್ತಿಗೆ ಸಿಕ್ಕಿಕೊಳ್ಳದೆ, ಇದನ್ನು ಮೋಸ ಮಾಡಿ ನಾವು ಜೀವನ ನಡೆಸುವ ಪರಿಪಾಠವನ್ನು ಬಹಳ ಚೆನ್ನಾಗಿ ಕಲಿತುಕೊಂಡಿದ್ದೇವೆ. ಇದು ಅಕ್ಷರಶಃ ನಿಜವಾದ ಸಂಗತಿ. ಆದ್ದರಿಂದ ನಾವು ಸಂಪೂರ್ಣವಾದಂಥ ನಿಕತನವನ್ನು ಪ್ರದರ್ಶನ ಮಾಡಬಹುದು. ಸನ್ಮಾನ್ಯ ಸಿಂಧ್ಯರವರು ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ಹಾಗೆಯೇ ಈ ಮಸೂದೆ ಬಗ್ಗೆ ಸ್ವಲ್ಪ ಮಾತನಾಡಬೇಕೆಂದು ನಾನು ವೈಯಕ್ತಿಕವಾಗಿ ಅವರನ್ನು ಕೇಳಿಕೊಂಡಿದ್ದೆ. ಇದರ ಬಗ್ಗೆ ಚೆನ್ನಾಗಿ ಮಾತನಾಡುತ್ತಾರೆಂದು ನಾನು ಆಸೆಇಟ್ಟುಕೊಂಡಿದ್ದೆ. ಆದರೆ ಮಾನ್ಯ ಸಿಂಧ್ಯರವರು ಮಾತನಾಡಿದ್ದುದಕ್ಕೆ ಕೇಳುವುದಕ್ಕೆ ಚೆನ್ನಾಗಿತ್ತು. ಏಕೆಂದರೆ, ಇದನ್ನು ನೀವು ಪ್ರಚಾರಕ್ಕೆ ಮಾತ್ರ ಬಳಸಿಕೊಳ್ಳುತ್ತೀರಿ ಅಷ್ಟೆ. ಇದರಲ್ಲಿ ಬೇರೆ ಉದ್ದೇಶ ಏನು ಇಲ್ಲ ಎನ್ನತಕ್ಕಂಥ ರೀತಿಯಲ್ಲಿ ಅವರು ಮಾತನಾಡಿದರು. ಸುಮಾರು 11 ವರ್ಷಗಳ ಹಿಂದೆ ಮೇಲ್ಮನೆಯಲ್ಲಿ ಒಬ್ಬ ಸ್ನೇಹಿತರಿದ್ದರು, ಇವರು ಮಾನ್ಯ ಸಿಂಧ್ಯರವರಿಗೂ ಸಹ ಪರಿಚಯ ಇದ್ದಾರೆ. ಆ ಸಂದರ್ಭದಲ್ಲಿ ಲೋಕಾಯುಕ್ತ ಅಸ್ತಿತ್ವಕ್ಕೆ ಬಂದಿತ್ತು. ಆಗ ಅವರು ಏನು ಹೇಳಿದರು ಎಂದರೆ, This Lokayukta is nothing but a stenographer of the then Chief Minister ಎಂದು ಹೇಳಿದ್ದರು. ಇದು ತಮಗೂ ಕೂಡ ಜ್ಞಾಪಕ ಇರಬಹುದು. ಇದನ್ನು ಕೇಳಿ ನನಗೆ ತುಂಬಾ ದುಃಖ ಆಯಿತು. ಎಷ್ಟು ಲಘುವಾಗಿ ಸಂಸ್ಥೆಗಳನ್ನು ಡಿಸ್‌ಮಿಸ್ ಮಾಡುತ್ತೇವೆ? ಇವ್ಯಾವುದನ್ನು ಮಾಡದೇ ಇದ್ದರೆ ನಾವು ಹೇಗೆ ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಒಬ್ಬ ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲದ ಮೇಲೆ ಎಲ್ಲಾ ಭಾರವನ್ನು ಹೊರಿಸುವುದು ಸರಿಯಲ್ಲ. ಸನ್ಮಾನ್ಯ ಸಿಂಧ್ಯರವರು ಹಿಂದೆ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಾಗೆಯೇ ಈ ಸದನದಲ್ಲಿರತಕ್ಕಂಥ ಬಹಳ ಜನ ಸಚಿವರಾಗಿದ್ದರು. ಬಹಳ over simplistic ಎಂದು ಅನ್ನಿಸುತ್ತದೆ. ಆದರೆ ಅದು ಸರಿಯಲ್ಲ. ನಾವು ಏನಾದರೂ ಮಾಡಿ ಒಟ್ಟಾರೆ ಈಗ ಇರತಕ್ಕಂಥ ವ್ಯವಸ್ಥೆಗೆ ಸ್ವಲ್ಪವಾದರೂ ಸುಧಾರಣೆ ತರಬೇಕಾಗುತ್ತದೆ. ಈಗಾಗಲೇ ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ ಹಾಗೆ, ಇಂಚ್ ಬೈ ಇಂಚ್ ಪ್ರೋಗ್ರೆಸ್ ಆಗಬೇಕು. ಇದನ್ನು ಮಾಡುವುದಕ್ಕೆ ಆಗದೇ ಇದ್ದರೆ ನಾನು ಈಗಾಗಲೇ ಹೇಳಿದ ಪ್ರಕಾರ ಲೋಕಾಯುಕ್ತ ಸ್ಟೆನೋಗ್ರಾಫರ್ ಮತ್ತು ಚೀಫ್ ವಿಜಿಲೆನ್ಸ್ ಕಮೀಷನರ್‌ರವರು ಮೊದಲನೇ ದರ್ಜೆಯ ಗುಮಾಸ್ತ ಎಂದು ಈ ರೀತಿಯಾಗಿ ಮಾತನಾಡಿದರೆ ಸಮಾಜದಲ್ಲಿ ಯಾವ ಸಂಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾವು ಎಲ್ಲರಿಗೂ ವಿಪರೀತ ಹಾಸ್ಯ ಮಾಡುತ್ತೇವೆ. ಪತ್ರಿಕೆಗಳಲ್ಲಿ ಶ್ರೀ ವಿಠಲ್‌ರವರಿಗೆ ಹಾಸ್ಯ ಮಾಡಿ ಬರೆದಿದ್ದಾರೆ. He is one of the most honest officers, the nation has ever produced. ಅಂತ ಆದರೆ ಅಂಥವರ ಬಗ್ಗೆ ಕೂಡ ಇವತ್ತಿನ ದಿವಸ

ಅಪಹಾಸ್ಯ ಮಾಡುತ್ತಾರೆ. ಅಪಹಾಸ್ಯ ಮಾಡುವುದು ಗುಡ್ ಹ್ಯೂಮರ್ ಕೂಡ ಅಲ್ಲ. ನಾನು ಈ ಒಂದು ಮಸೂದೆಯನ್ನು ಬಹಳ ಪ್ರಾಮಾಣಿಕವಾಗಿ ತಂದಿದ್ದೇನೆ. ಇದನ್ನು ನನ್ನ ಪ್ರಚಾರಕ್ಕೋಸ್ಕರ ಮಾಡಿಲ್ಲ. I would not lend myself to that. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಡಿಪಾರ್ಟ್‌ಮೆಂಟ್ ಆಫ್ ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ಎಂದು ನನ್ನ ಇಲಾಖೆ ಇತ್ತು. ನಾನು ಬಂದನಂತರ ಮೊಟ್ಟಮೊದಲ ಕೆಲಸ ಏನೆಂದರೆ,....

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪ್ರಚಾರಕ್ಕೋಸ್ಕರ ಇದನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 15 ದಿವಸಗಳ ಹಿಂದೆ ನಾನು ಮತ್ತು ಶ್ರೀಮಾನ್ ಎಸ್.ಎಸ್. ಪಾಟೀಲ್ ಹಾಗೂ ಶ್ರೀಮಾನ್ ಬೈರೇಗೌಡರು ದೆಹಲಿಗೆ ಹೋಗಿದ್ದೆವು. ಆ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಶ್ರೀಮಾನ್ ನಿತೀಶ್ ಕುಮಾರ್‌ರವರನ್ನು ಭೇಟಿ ಮಾಡಿ, ರೈತರ ಕೃಷಿ ಉತ್ಪನ್ನಗಳ ಬೆಲೆಗಳು ಬಹಳಷ್ಟು ಕುಸಿತವಾಗಿರುವ ಬಗ್ಗೆ ಒಂದು ಮೆಮೋರ್‍ಯಾಂಡಮ್ ಸಬ್‌ಮಿಟ್ ಮಾಡಬೇಕೆಂದು ಕರ್ನಾಟಕ ಭವನದಲ್ಲಿರತಕ್ಕಂಥ ಕಮೀಷನ್‌ರವರಿಗೆ ಹೇಳಿದೆವು. ಅವರು ನಮಗೆ ಯಾವ ರೀತಿ ಟ್ರೀಟ್ ಮಾಡಿದರೆಂದರೆ, ರಾಜ್ಯ ಸರ್ಕಾರದ ಪರವಾಗಿ ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಮತ್ತು ಮಳೆ ಜಾಸ್ತಿಯಾಗಿರುವುದರಿಂದ ಬಹಳಷ್ಟು ಹಾನಿಯಾಗಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕೊಡುವುದಕ್ಕೋಸ್ಕರ ಒಂದು ಮೆಮೋರ್‍ಯಾಂಡಮ್ ತಯಾರು ಮಾಡುವುದಕ್ಕೋಸ್ಕರ ನಾವೆಲ್ಲರೂ ಒಂದು ಕಡೆ ಕುಳಿತುಕೊಳ್ಳುವುದಕ್ಕೆ ಒಂದು ರೂಮ್ ಅನ್ನು ಸಹ ಒದಗಿಸಿಕೊಡಲಿಲ್ಲ. ಇದರಿಂದ ನನಗೆ ತುಂಬಾ ಬೇಸರವಾಯಿತು. ಆ ಸಂದರ್ಭದಲ್ಲಿ ಶ್ರೀಮಾನ್ ಇನಾಂದಾರ್‌ರವರು ನಮ್ಮ ಮೇಲೆ ಕೃಪೆ ಇಟ್ಟು ಒಂದು ರೂಮ್ ಕೊಡಿಸಿದರು. ಆಗ ನಾವು ಒಂದು ಸಣ್ಣ ಲೈಬ್ರರಿಯಲ್ಲಿ ಕುಳಿತುಕೊಂಡು ಕೇಂದ್ರ ಸರ್ಕಾರಕ್ಕೆ ಕೊಡುವುದಕ್ಕೋಸ್ಕರ ಒಂದು ಮೆಮೋರ್‍ಯಾಂಡಮ್ ಅನ್ನು ಡ್ರಾಫ್ಟ್ ಮಾಡಿಕೊಂಡೆವು. ಈ ಸಂದರ್ಭದಲ್ಲಿ ನಾವು ಲೈಬ್ರರಿಯಲ್ಲಿ ನೋಡಿದಂಥ ಒಂದು ಸಂಗತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಈ ಲೈಬ್ರರಿಯಲ್ಲಿ ಸುಮಾರು 20 ರಿಂದ 30 ಪತ್ರಿಕೆಗಳು ಇತ್ತು. ತಮಗೆ ಗೊತ್ತಿರುವ ಹಾಗೆ ನಾನು ಸುಮಾರು 20 ವರ್ಷಗಳಿಂದ ಶಾಸಕನಾಗಿ, ಕರ್ನಾಟಕ ರಾಜ್ಯದಲ್ಲಿ ಮತ್ತು ನಮ್ಮ ರಾಷ್ಟ್ರದಲ್ಲಿ ಓಡಾಡಿದ್ದೇನೆ. ಅಲ್ಲಿ ಇದ್ದಂಥ ಪತ್ರಿಕೆಗಳಲ್ಲಿ ಫುಲ್-ಪೇಜ್ ಸರ್ಕಾರದ ಜಾಹೀರಾತು ಇದೆ. ಈ ಎಲ್ಲಾ ಜಾಹೀರಾತಿನಲ್ಲಿ ಮಾನ್ಯ ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಮಂತ್ರಿಯವರ ಫೋಟೋ ಇತ್ತು. ಕರ್ನಾಟಕ ರಾಜ್ಯದಲ್ಲಿ ಹಾಲಿನ ಹೊಳೆ, ಜೇನಿನ ಹೊಳೆ ಮತ್ತು ತುಪ್ಪದ ಹೊಳೆ ಹರಿಯುತ್ತಿದೆ ಎನ್ನತಕ್ಕಂಥ ರೀತಿಯಲ್ಲಿ ಇವರು ಜಾಹೀರಾತನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ಜಾಹೀರಾತಿಗೆ ಎಷ್ಟು ಕೋಟಿ ರೂಪಾಯಿಗಳನ್ನು

ಖರ್ಚು ಮಾಡಿದ್ದೀರಿ ಎಂದು ಈ ಸದನದಲ್ಲಿ ತಾವು ಸ್ಪಷ್ಟಪಡಿಸಬೇಕು. ಇದನ್ನು ಯಾವ ಪುರುಷಾರ್ಥಕ್ಕೋಸ್ಕರ ಕೊಟ್ಟಿದ್ದೀರಿ? ಇವತ್ತಿನ ದಿವಸ ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮತ್ತು ಕನ್ನಡಪ್ರಭ ಅಥವಾ ಕರ್ನಾಟಕ ರಾಜ್ಯದಲ್ಲಿ ಪ್ರಕಟವಾಗತಕ್ಕಂಥ ಪತ್ರಿಕೆಗಳಲ್ಲಿ ನೀವು ಜಾಹೀರಾತು ಕೊಟ್ಟಿದ್ದರೆ ನಾವು ನಿಜವಾಗಿಯೂ ಸಹ ಮೆಚ್ಚುತ್ತಿದ್ದೆವು. ನಮಗೆ ಪ್ರಚಾರ ಬೇಡ, ನಾವು ಪಾರದರ್ಶಕ ಆಡಳಿತವನ್ನು ನೀಡುತ್ತೇವೆಂದು ಹೇಳುತ್ತಾ ಈ ರೀತಿಯಾದ ಕೆಲಸ ಇವರ ಕಾಲದಲ್ಲಿ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನಷ್ಟೆ. ಈಗ ಕೆಲವು ಕೆಲಸಗಳು ಆಗಿವೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಡಾ: ರಾಜ್‌ಕುಮಾರ್ ಬಿಡುಗಡೆಯಾಗಿರುವುದು ಒಂದು ಸಾಧನೆಯೆಂದು ತಾವು ಜಾಹೀರಾತು ಹಾಕಿಕೊಳ್ಳುವುದರಲ್ಲಿ ನಮ್ಮದೇನು ತಕರಾರು ಇಲ್ಲ. ಮಾನ್ಯ ಸಚಿವರ ಇಲಾಖೆಗೆ ಸಂಬಂಧಪಟ್ಟಂತೆ ಸಚಿವರ ಫೋಟೋ ಸಮೇತ ಜಾಹೀರಾತು ಬಂದಿದೆ. ತಾವು ತೆಗೆದು ನೋಡಬಹುದು. ದೆಹಲಿಯಲ್ಲಿ ಯಾರನ್ನು ಮೆಚ್ಚಿಸುವುದಕ್ಕೋಸ್ಕರ ತಾವು ಜಾಹೀರಾತನ್ನು ಕೊಟ್ಟಿದ್ದೀರಿ? ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಸಂದರ್ಭದಲ್ಲಿ ನೀವು ಖರ್ಚು ಮಾಡಿರತಕ್ಕಂಥ ಹಣದ ಬಗ್ಗೆ ಏನಾದರು ಮಾತನಾಡಲು ಹೋದರೆ, ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಬೇರೆ ರೀತಿಯಲ್ಲಿ ಅರ್ಥ ಕೊಡುತ್ತಾರೆ. ಬಹಳ ಜನ ಬಂಡವಾಳವನ್ನು ಹೂಡಿಕೆ ಮಾಡುವುದಕ್ಕೋಸ್ಕರ ಬರುತ್ತಿದ್ದರು, ಆದರೆ ವಿರೋಧಪಕ್ಷದವರು ಗಲಾಟೆ ಮಾಡಿದರು ಎಂದು ಹೇಳುತ್ತಾರೆ ಎನ್ನತಕ್ಕಂಥ ದೃಷ್ಟಿಯಿಂದ ನಾವು ಏನೂ ಮಾತನಾಡುವುದಕ್ಕೆ ಹೋಗದೆ ಸುಮ್ಮನೆ ಇರತಕ್ಕಂಥ ಸ್ಥಿತಿಯನ್ನು ತಂದು, ನಮಗೆ ಚುಚ್ಚಿ ಹಾಸ್ಯ ಮಾಡುವುದರಲ್ಲಿಯೇ ಅವರು ಉತ್ತರ ಕೊಡತಕ್ಕಂಥಾದ್ದರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಬಹಳ ಪರಿಣಿತರಾಗಿದ್ದಾರೆ. ಆದ್ದರಿಂದ ಜಾಹೀರಾತಿಗೋಸ್ಕರ ಎಷ್ಟು ಖರ್ಚು ಮಾಡಲಾಗಿದೆ ಎಂಬುದನ್ನು ತಾವು ದಯವಿಟ್ಟು ಬಹಿರಂಗಪಡಿಸಬೇಕು. ನಾನು ಈಗಾಗಲೇ ಹೇಳಿದಂತೆ, ನಮ್ಮದು ಪಾರದರ್ಶಕ ಸರ್ಕಾರ, ನಮಗೆ ಪ್ರಚಾರ ಬೇಡವೆಂದು ಹೇಳುತ್ತಿದ್ದೀರಿ. ನಾನು ನಿಮ್ಮ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಸಂಸ್ಥೆಗಳನ್ನು ಡೆಮಾಲಿಷ್ ಮಾಡಬೇಕು ಎನ್ನತಕ್ಕಂಥ ಉದ್ದೇಶವನ್ನು ನಾನು ಇಟ್ಟುಕೊಂಡಿಲ್ಲ. ಇವತ್ತಿನದಿವಸ ಸಂಸ್ಥೆಗಳನ್ನು ಶಕ್ತಿಯುತವಾಗಿ ಮಾಡಬೇಕಾಗಿದೆ. ಆದರೆ ನೀವು ಮಾಡತಕ್ಕಂಥ ರೂಲ್ಸ್ ಅನ್ನು ನೀವು ಪಾಲನೆ ಮಾಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಮಾನ್ಯ ಜಗದೀಶ್ ಶೆಟ್ಟರ್‌ರವರಾಗಲಿ ವಿರೋಧಪಕ್ಷದವರು ನಿಮ್ಮ ಹತ್ತಿರ ಬಂದು ಸಾಮಾನ್ಯ ವರ್ಗಾವಣೆಯನ್ನು ಮಾಡಬೇಡಿ ಎಂದು ಹೇಳಿದ್ದಾರೆಯೇ? ನಿಮ್ಮ ಸರ್ಕಾರ ಬಂದ ತಕ್ಷಣ, ಈ ವರ್ಷ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಿಲ್ಲವೆಂದು ನೀವೇ ಪ್ರಕಟಣೆ ಮಾಡಿದ್ದೀರಿ. ನಿಮ್ಮ ಆಡಳಿತ ಪಕ್ಷದ ಶಾಸಕರು ಕೊಟ್ಟಿರತಕ್ಕಂಥ ಪತ್ರಕ್ಕೆ ಎಷ್ಟೊಂದು ಮನ್ನಣೆ ಸಿಕ್ಕಿದೆ ಎಂಬುದರ ಬಗ್ಗೆ ತಾವು ದಯವಿಟ್ಟು ತಿಳಿಸುತ್ತೀರಾ? ನೀವು ಹೇಳಿದ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನಷ್ಟೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಪ್ರಾಸಂಗಿಕವಾಗಿ ಹೇಳುವುದಾದರೆ, ಯಾವುದೋ ಒಂದು ಜಾಹೀರಾತಿನಲ್ಲಿ ನನ್ನ ಫೋಟೋ ಹಾಕಿದ್ದಾರೆ. ನನ್ನ ಫೋಟೋ ಹಾಕಬೇಡಿ ಎಂದು ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಪ್ರೊ ಬಿ.ಕೆ. ಚಂದ್ರಶೇಖರ್‌ರವರಿಗೆ ಸಂಬಂಧಪಟ್ಟ ವಿವರವನ್ನು ನಾನು ಹೇಳುತ್ತಿಲ್ಲ. ಪ್ರತಿಯೊಂದು ಇಲಾಖೆಯ ಸಚಿವರುಗಳ ಫೋಟೋ ಬಂದಿದೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಒಂದೊಂದು ಇಲಾಖೆಯವರು ಹಾಕಿಕೊಂಡಿದ್ದಾರಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಒಂದು ವರ್ಷದ ಸಾಧನೆಯ ಸಮಾವೇಶ ಮಾಡುವುದಿಲ್ಲ ಎಂದು ಬೆಂಗಳೂರಿನಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಇದನ್ನು ಮಾಡಿ ನಾವೇನು ಬೇಡವೆಂದು ಹೇಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಹಿಂದೆ ಯಾವ ಸರ್ಕಾರವೂ ಕೂಡ ಈ ರೀತಿ ಮಾಡಿಲ್ಲ, ನಾವು ಮಾತ್ರ ಮಾಡಿದ್ದೇವೆ ಎಂದು ಹೇಳಿರುವುದು ಒಂದು ಅಪಾದನೆಯಾಗಿದೆ. ಇನ್ನು ಮುಂದೆ ಇದನ್ನು ಹಾಕಲೇ ಬೇಡವೆಂದು ನಿಮ್ಮ ಆದೇಶ ಇದ್ದರೆ, ಇಲ್ಲಿ ಹೇಳಿ. ಇನ್ನು ಮುಂದೆ ಹಾಕುವುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಚಂದ್ರಶೇಖರ್‌ರವರು ಈಗಾಗಲೇ ಹೇಳಿರತಕ್ಕಂಥ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಆದ್ದರಿಂದ ಅಪಹಾಸ್ಯ ಮಾಡತಕ್ಕಂಥ ಕೆಲಸ ಸರಿಯಲ್ಲ. ಯಾವುದೋ ಒಂದು ಪ್ರೋಗ್ರೆಸಿವ್ ಬಿಲ್ ಅನ್ನು ತಂದಿದ್ದಾರೆ ಎಂದು ಹೇಳುವುದನ್ನು ತಾವು ಯಾರೂ ಮಾಡುತ್ತಿಲ್ಲ. ಸನ್ಮಾನ್ಯ ಸುರೇಶ್ ಕುಮಾರ್‌ರವರು he was good enough to say that there is some beginning of the new era. ಎಂದು ಹೇಳಿದ್ದಾರೆ ಇದಕ್ಕೂ ಕೂಡ ಹಿಂದಿನ ಕತೆಗಳನ್ನು ಹೇಳುತ್ತಿದ್ದೀರಿ. They were not allowed to begin. This is the first of its kind in India.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಕತೆ ಪುರಾಣಗಳನ್ನು ಹೇಳುತ್ತಿಲ್ಲ. ದಯವಿಟ್ಟು ಮಾನ್ಯ ಸಚಿವರು ಕ್ಷಮಿಸಬೇಕು. ನಾಳೆ ಸಾಯಂಕಾಲದೊಳಗೆ ಅಂದರೆ ಅಧಿವೇಶನ ಮುಗಿಯುವುದರೊಳಗೆ, ಈ ವರ್ಷದಲ್ಲಿ ಕಳೆದ ಮೂರು ತಿಂಗಳಲ್ಲಿ ನಿಮ್ಮ ಸರ್ಕಾರದ ಸಾಧನೆಯ ಬಗ್ಗೆ ಕರ್ನಾಟಕ ಮತ್ತು ಬೆಂಗಳೂರು ಬಿಟ್ಟು ಬೇರೆಕಡೆ ಇರತಕ್ಕಂಥ ಇಂಗ್ಲೀಷ್ ಪತ್ರಿಕೆಗಳಿಗೆ ಎಷ್ಟು ಜಾಹೀರಾತನ್ನು ಕೊಟ್ಟಿದ್ದೀರಿ? ಅಮೇರಿಕಾದ ಎಷ್ಟು ಪತ್ರಿಕೆಗಳಿಗೆ ಜಾಹೀರಾತು ಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ವೆಚ್ಚ ಮಾಡಿ

7-00 ಪಿ.ಎಂ.

ದಾವೋಸ್ ಹಾಗೂ ಸಿಂಗಪೂರ್‌ನಲ್ಲಿ ಕೂಡ ಇವರು ಎಷ್ಟೊಂದು ಪತ್ರಿಕೆಗಳಿಗೆ ಜಾಹೀರಾತು ಕೊಟ್ಟಿದ್ದಾರೋ ಗೊತ್ತಿಲ್ಲ. ಅದನ್ನು ತೋರಿಸಿ, ನೀವು ಸದನಕ್ಕೆ ಕೊಡಿ ನೋಡೋಣ.

ಪ್ರೊ: ಬಿ.ಕೆ. ಚಂದ್ರಶೇಖರ್ :— ನನಗೆ ಮಾನ್ಯ ಸಿಂಧ್ಯಾರವರ ಬಗ್ಗೆ ಅನುಮಾನ ಇತ್ತು, ಅವರು 8-10 ದಿವಸಗಳ ಹಿಂದೆ ಹೇಳಿದ್ದರು. ಅದನ್ನು ನಾನು ನನ್ನ ಕಛೇರಿಯಲ್ಲಿ ಬಿಟ್ಟು ಬಂದಿದ್ದೇನೆ, ಅದರ ಬಗ್ಗೆ ನಾಳೆ ನಿಮಗೆ ನಾನು ಅಂಕಿ-ಅಂಶಗಳನ್ನು ಕೊಡುತ್ತೇನೆ. ನಿಮ್ಮ ಸರ್ಕಾರ ಒಂದು ವರ್ಷದಲ್ಲಿ ಎಷ್ಟು ಖರ್ಚು ಮಾಡಿತ್ತು, ನಮ್ಮ ಸರ್ಕಾರ ಎಷ್ಟು ಖರ್ಚು ಮಾಡಿದೆ ಎನ್ನುವುದನ್ನು ನಾನು ತರಿಸಿ ಇಟ್ಟಿದ್ದೇನೆ, ಅದನ್ನು ಕೊಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ನಮ್ಮ ಸರ್ಕಾರ ಮಾಡಿದೆ ಎಂದು ನೀವು ಮಾಡಿದರೆ ಹೇಗೆ? ನೀವಾದರೂ ಪಾರದರ್ಶಕವಾಗಿ ಮಾಡಬೇಕಾಗಿತ್ತಲ್ಲ!

ಪ್ರೊ: ಬಿ.ಕೆ. ಚಂದ್ರಶೇಖರ್ :— ನಾನು ನಿಮಗೆ ಅಂಕಿ-ಅಂಶಗಳನ್ನು ತಂದು ಕೊಡುತ್ತೇನೆಂದು ಅಷ್ಟು ಮಾತ್ರ ಹೇಳಿದ್ದೇನೆ. "ಇದ್ದದ್ದು ಇದ್ದಂತೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದರಂತೆ" ನಾಳೆಯವರೆಗೆ ಸಮಯ ಕಾಯೋಣ, ಅವರು ಹೇಳಿದ್ದಕ್ಕೆ ನಾನು ಹೇಳಿರುತ್ತೇನೆ. ಸಿಂಗಪೂರದಲ್ಲಿ ನಾವು ಜಾಹೀರಾತು ಕೊಟ್ಟಿಲ್ಲ, ನ್ಯೂಯಾರ್ಕ್ ಟೈಮ್ಸ್‌ಗೂ ಕೊಟ್ಟಿಲ್ಲ, ಯೂರೋಪಿನ ಯಾವ ಪತ್ರಿಕೆಗೂ ಜಾಹೀರಾತು ಕೊಟ್ಟಿಲ್ಲ. ಅದರ ಬಗ್ಗೆ ನಾನು ಇಲ್ಲಿಯೇ ಉತ್ತರವನ್ನು ಹೇಳಿಬಿಡುತ್ತೇನೆ. ಇದರಲ್ಲಿ ಊಹಾಪೋಹಗಳು ಇರಬಾರದು. ಮಾನ್ಯ ಅಧ್ಯಕ್ಷರೆ, ನಾಳೆ ನನಗೆ ಒಂದು ನಿಮಿಷ ಸಮಯವನ್ನು ಕೊಡಬೇಕು, ಅದರ ಅಂಕಿ-ಅಂಶಗಳನ್ನು ನಾನು ಕೊಡುತ್ತೇನೆ. ಅವರು ಸದನದಲ್ಲಿ ಹೇಳಿರುವುದರಿಂದ ನಾನು ಅದನ್ನು ಹೇಳಬೇಕಾಗುತ್ತದೆ. ವೈಯಕ್ತಿಕವಾಗಿ ಟೀಕೆ ಮಾಡುವ ಸಲುವಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. ನನಗೆ ಮಾನ್ಯ ಸಿಂಧ್ಯರವರ ಬಗ್ಗೆ ಏಕೆ ಗೌರವ ಇದೆ ಎಂದರೆ, ಅವರು ನಾವು ಕೂಡಿ ಕಳೆದ 15 ವರ್ಷಗಳಿಂದ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿರುವ ಹಿನ್ನೆಲೆ ಇದೆ, ಅವರು ಕೂಡ ಮಾತನಾಡುವಾಗ ಹೇಳಿದರು. ಅವರು ಸ್ವಲ್ಪ ಆಶಾವಾದಿಯಾಗಿರಬೇಕು, ಭಾರತೀಯ ಜನತಾಪಕ್ಷದ ನಾಯಕರುಗಳು ಮೇಲ್ಮನೆಯಲ್ಲಿ, ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ ಕೆಲವು ವಿಚಾರಗಳನ್ನು ಹೇಳಿದರು, ಇದು ಖಂಡಿತವಾಗಿ ಆಗಬೇಕು, ಇದರಲ್ಲಿ ಸ್ವಲ್ಪ ಸಾಧ್ಯತೆ ಇರುವುದರಿಂದ ಇದನ್ನು ಮುಂದೆ ನೋಡಬೇಕು ಎನ್ನುವ ಮಾತನ್ನು ಹೇಳಿದರು. ಇದು ಮುಖಕ್ಕೆ ಮೇಕಪ್ ಮಾಡಿಕೊಂಡಿದ್ದು ಎಂದು ಇದನ್ನು ಡಿಸ್‌ಮಿಸ್ ಮಾಡಿಬಿಟ್ಟರೆ ನಮಗೆ ನಿರುತ್ಸಾಹ ಬಂದು ಬಿಡುತ್ತದೆ. ಆದ್ದರಿಂದ ದಯಮಾಡಿ ತಾವು ಅದನ್ನು ಮಾಡಬೇಡಿ. ಶ್ರೀ ಶಾಂತವೀರ ಗೋಪಾಲಗೌಡರು ಹೇಳುತ್ತಿದ್ದರು, ಎಲ್ಲಾ ಕಡೆ ಸ್ವಲ್ಪ ಜನರು ಇರುತ್ತಾರೆ. ಈ ವಿಧೇಯಕಕ್ಕೆ ಸೀಮಿತವಾಗಿ

ಹೇಳುವುದಾದರೆ, ಅಂತಿಮ ಸ್ವಾಧೀನ ಇದರಲ್ಲಿ ನಾನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ತುಂಬಾ ರ್‍ಯಾಡಿಕಲ್ ಪೊಜಿಷನ್‌ಗೆ ನಾವು ಹೋಗಬಹುದಾಗಿತ್ತು. ಸಾಧನೆಯ ಪೇಪರ್‌ಗಳನ್ನು ಕೊಡಿ, 48 ಗಂಟೆಯೊಳಗೆ ಇನ್ನೊಂದು ಮಾಹಿತಿಯನ್ನು ಕೊಡಿ, ಆದರೆ ಆಗ ನೀವು ಹೇಳಬಹುದು, ನೀವು ಪ್ರಚಾರಕ್ಕಾಗಿ ಮಾಡಿರುತ್ತೀರಿ ಎಂದು. ಏಕೆಂದರೆ ಇಲ್ಲಿ ಇರುವ ವ್ಯವಸ್ಥೆ ಹಾಗೆ ಇದೆ. ಇಲ್ಲಿಯವರೆಗೆ ಮೂರು ನಾಲ್ಕು ಇಲಾಖೆಗಳು ಮಾತ್ರ ಕಂಪ್ಯೂಟರೀಕರಣ ಪೂರ್ಣ ಮಾಡುವುದಕ್ಕೆ ಸಾಧ್ಯವಾಗಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಇಲ್ಲಿ ಡಿಬೇಟ್ ಇರುವುದರಿಂದ ಹೇಳುತ್ತಿದ್ದೇನೆ. ನೀವು ಡೀಸೆಂಟ್ರಲೈಜೇಶನ್ ಬಗ್ಗೆ ಬಹಳ ನಂಬಿಕೆಯನ್ನು ಇಟ್ಟುಕೊಂಡಿರತಕ್ಕಂಥವರು. you really believe in that and we also. ನೀವು ಮಾತನಾಡುವಾಗ ನನಗೆ ಎಲ್ಲಿ ಪ್ರಚೋದನೆ ಬಂತು ಎಂದು ಹೇಳಬೇಕೆಂದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹಾಗೂ ಅವರ ಸಚಿವರ ಸಂಪುಟದಲ್ಲಿ ಮಂತ್ರಿಗಳಾಗಿರತಕ್ಕಂಥ ಮಾನ್ಯ ನಜೀರ್ ಸಾಹೇಬರ ಕಾಲದಲ್ಲಿ ಈ ಗ್ರಾಮೀಣ ಅಭಿವೃದ್ಧಿಯ ವಿಕೇಂದ್ರೀಕರಣ ವಿಚಾರವನ್ನು ಅನೇಕರಿಗೆ ಗೊತ್ತಿಲ್ಲದೇ ಇರುವ ಹಾಗೆ, ಪರಿಣಾಮಗಳು ತಲುಪುವ ಹಾಗೆ ಆಗಲೇ ಕಾನೂನನ್ನು ಮಾಡಿಬಿಟ್ಟಿದ್ದಾರೆಂದು ತಾವು ಹೇಳುತ್ತೀರಿ. ಮಾನ್ಯ ನಜೀರ್ ಸಾಹೇಬರು ಸತ್ತು ಸ್ವರ್ಗದಲ್ಲಿದ್ದಾರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜ್ಯಸಭಾ ಸದಸ್ಯರಾಗಿ ಡೆಲ್ಲಿಯಲ್ಲಿದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ತಾವು ಇದನ್ನು ಮಾಡುತ್ತಿರುವುದು ಬರೀ ಪೇಪರ್‌ನಲ್ಲಿ ಅಷ್ಟೆ, ಮಾನ್ಯ ಅಧ್ಯಕ್ಷರಾದಿಯಾಗಿ ಇಲ್ಲಿರುವ ನಾವೆಲ್ಲ ಸದಸ್ಯರು ಗ್ರಾಮ ಸಭೆಗಳನ್ನು ಮಾಡುವುದಕ್ಕಾಗುತ್ತದೆಯೇ? ಆಶ್ರಯ ಪಟ್ಟಿಯನ್ನು ಮಾಡಿ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು 31ನೇ ತಾರೀಖಿನವರೆಗೆ ಗಡುವು ಕೊಟ್ಟಿದ್ದಾರೆ. ಇದನ್ನು ನಮಗೆ ಮಾಡುವುದಕ್ಕಾಗುತ್ತದೆಯೇ? ನಮ್ಮ ರಾಜಕೀಯ ಸಿಸ್ಟಮ್ ಏನಿದೆ, ಅದರ ಬಗ್ಗೆ ನಾನು ಒಂದು ಕ್ಷ-ಕಿರಣವನ್ನು ಬೀರಿದ್ದೇನೆಯೇ ಹೊರತು, ನಾನು ನಿಮ್ಮ ಉದ್ದೇಶವನ್ನು ಪ್ರಶ್ನೆ ಮಾಡಿರುವುದಿಲ್ಲ. ನಾನು ನಿಮ್ಮನ್ನು ಅಭಿನಂದಿಸುತ್ತೇನೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ನಾವು ರಚನಾತ್ಮಕವಾಗಿ ಏನು ಮಾಡುವುದಕ್ಕೆ ಸಾಧ್ಯವಿದೆ, ಈ ವ್ಯವಸ್ಥೆಯೊಳಗೆ ಮಾಡುವುದಕ್ಕೆ ಆಲೋಚನೆಯನ್ನು ಮಾಡೋಣ. ಡಿಸ್‌ಮಿಸ್ ಮಾಡುವುದು, ಇದನ್ನು ಖಂಡನೆ ಮಾಡುವುದು ಬೇಡ ಎನ್ನುವುದು ನನ್ನ ಪ್ರಾರ್ಥನೆಯಾಗಿದೆ. ಈಗ ನನಗೆ ಒಂದು ವಿಚಾರ ಗೊತ್ತಿದೆ. ಅನುಷ್ಠಾನದ ಸಮಸ್ಯೆಗಳು ಇವತ್ತು ಹಿಮಾಲಯದಷ್ಟು ಎತ್ತರಕ್ಕೆ ಇವೆ, ಈ ವಿಧೇಯಕ ಬಂದ ಮೇಲೆ ಅನುಷ್ಠಾನಕ್ಕೆ ತರುವುದು ಅಷ್ಟು ಸುಲಭವಲ್ಲ. ಇದಕ್ಕೆ ಸಮಂಜಸವಾದ ನಿಯಮಗಳನ್ನು ಮಾಡಬೇಕು. ಒಂದಿಬ್ಬರು ಮಾನ್ಯ ಸದಸ್ಯರು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ, ಡಿಪಾರ್ಟ್‌ಮೆಂಟ್‌ನಲ್ಲಿ ಯಾವ ರೀತಿಯಾದ ಆರ್ಗನೈಜೇಶನ್ ಇದೆ ಮತ್ತು ಪ್ರಾಕ್ಟೀಸ್ ಸರ್ಕಾರದಲ್ಲಿ ಏನಿದೆ

ಅದನ್ನೆಲ್ಲ ಇವತ್ತು ತಿದ್ದಬೇಕಾಗುತ್ತದೆ. ವಿಷಯಸೂಚಿ ಮಾಡದೇ ಹೋದರೆ ಯಾರಿಗೂ ಏನೂ ಮಾಹಿತಿಯನ್ನು ಕೇಳುವುದಕ್ಕಾಗುವುದಿಲ್ಲ. 100ಕ್ಕೆ 40 ಪರ್ಸೆಂಟ್ ಜನ ಇವತ್ತು ನಮ್ಮ ರಾಜ್ಯದಲ್ಲಿ ಕೂಡ ಅನಕ್ಷರಸ್ಥರಿದ್ದಾರೆ. ಅವರು ಕೂಡ ಮಾಹಿತಿಯನ್ನು ಕೇಳುವಂತಾಗಬೇಕು. ನಾನು ಉದ್ದೇಶಪೂರ್ವಕವಾಗಿ ಹೇಳಿದೆ, ರಾಜಸ್ಥಾನದಲ್ಲಿ ಮಾಡಿದ್ದಾರೆ, ಇದನ್ನು ಕೃಷಿ ಕಾರ್ಮಿಕರು ಉಪಯೋಗಿಸುತ್ತಿದ್ದಾರೆ, ರಾಜಸ್ಥಾನದ ದಲಿತ ಕಾಲೋನಿಗಳಲ್ಲಿ ಕೂಡ ಇದನ್ನು ಉಪಯೋಗಿಸುತ್ತಿದ್ದಾರೆ. ಇವತ್ತು ನಾವು ಆ ಕೆಲಸವನ್ನು ಮಾಡಬೇಕಾಗುತ್ತದೆ. ಇದು ಬಹಳ ಕಷ್ಟದ ಕೆಲಸ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ, ನಾವು ಅಂದುಕೊಂಡಷ್ಟು ಸುಲಭವಲ್ಲ. ಈ ವಿಧೇಯಕ ಮಾಡಿದಷ್ಟು ಸುಲಭವಲ್ಲ. ಇಡೀ ರಾಜ್ಯದಲ್ಲಿ ಇದನ್ನು ಹಂತಹಂತವಾಗಿ ಮಾಡಬೇಕು, ಸಾಮಾನ್ಯ ಜನ, ದುರ್ಬಲವರ್ಗ, ದಲಿತವರ್ಗ, ಬಡವರು, ಇದನ್ನು ಉಪಯೋಗಿಸಿಕೊಳ್ಳುವ ರೀತಿಯಾಗಬೇಕು. ಅದು ಬಹಳ ದೊಡ್ಡ ಚ್ಯಾಲೆಂಜ್ ಇದೆ, ಅದನ್ನು ಇಲ್ಲಿ ಹಲವಾರು ಜನ ಸದಸ್ಯರು ಸಜೆಸ್ಟ್ ಮಾಡಿದರು, ಅದಕ್ಕೆ ನಾವು ಯಾವ ರೀತಿಯಾಗಿ ಮಾಡಬೇಕು ಎನ್ನುವುದರ ಬಗ್ಗೆ ಆಗಲೇ ನಾವು ಆಲೋಚನೆಯನ್ನು ಪ್ರಾರಂಭ ಮಾಡಿರುತ್ತೇವೆ. ಅದಕ್ಕೆ ಮಾಹಿತಿ ತಂತ್ರಜ್ಞಾನವನ್ನು ಕೂಡ ಉಪಯೋಗಿಸಿಕೊಳ್ಳಬಹುದು. ಕೆಳಮಟ್ಟದಲ್ಲಿ ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ, ನಾವು ಅದನ್ನು ಮಾಡೋಣ. ಮಾನ್ಯ ವಿರೋಧ ಪಕ್ಷದ ಎಲ್ಲ ಸದಸ್ಯರಲ್ಲಿ, ನಮ್ಮ ಪಕ್ಷದ ವತಿಯಿಂದ ಸಲಹೆಯನ್ನು ಕೊಟ್ಟವರಲ್ಲಿ ನಾನು ಒಂದು ಪ್ರಾರ್ಥನೆಯನ್ನು ಮಾಡಿಕೊಳ್ಳುವುದೇನೆಂದರೆ, ಇದನ್ನು ಕನಿಷ್ಠ ಒಂದು ವರ್ಷ ಅಥವಾ 6 ತಿಂಗಳವರೆಗೆ ಇದನ್ನು ಪ್ರಾಯೋಗಿಕವಾಗಿ ಮಾತ್ರ, ಇಲ್ಲಿ ಇಲ್ಲದೇ ಇರುವ ರ್ಯಾಡಿಕಲ್ ಮೆಸೇಜ್‌ನ್ನು ತಂದು ಯಾವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗದಿದ್ದರೆ ಬಹಳ ಕಷ್ಟವಾಗುತ್ತದೆ. ನಮ್ಮ ಲೈಬ್ರರಿಯಲ್ಲಿ ಒಂದು ದಿವಸಕ್ಕೆ 100 ಪುಸ್ತಕಗಳವರೆಗೆ ಮಿಸ್ ಆಗುತ್ತವೆ. ಆಫೀಸುಗಳಲ್ಲಿ ಇನ್‌ಸ್ಪೆಕ್ಷನ್ ಫೆಸಿಲಿಟೀಸ್ ಕೊಡಬೇಕು. ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದರು, ಇದರ ಬಗ್ಗೆ ನನಗೆ ಖಂಡಿತವಾಗಿ ನಂಬಿಕೆ ಇದೆ, ಅದನ್ನು ತಾತ್ವಿಕವಾಗಿ ವಿರೋಧ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ ನಮಗೆ ಈಗ ಇರುವ ವ್ಯವಸ್ಥೆಯಲ್ಲಿ, ಕ್ಲರ್ಕ್‌ಗೆ, ಸೂಪರಿಂಟೆಂಡೆಂಟ್‌ಗೆ ಹಾಗೂ ಸಾಮಾನ್ಯ ಜನರಿಗೆ ಇದರ ಬಗ್ಗೆ ಮಾಹಿತಿ ಇಲ್ಲ. ಇನ್ಸ್‌ಪೆಕ್ಷನ್ ರೈಟ್ ಕೊಟ್ಟರೆ ಅದು ಕೂಡ ಅಷ್ಟೇ ಸೀಮಿತವಾಗುತ್ತದೆ; ಅದರ ಉಪಯೋಗವಾಗಬೇಕು. ಇದನ್ನು ಪತ್ರಿಕೆಗಳವರು ಉಪಯೋಗಿಸಿಕೊಳುತ್ತಾರೆ ಹಾಗೂ ಎನ್‌ಜಿಓ-ಗಳು ಉಪಯೋಗಿಸಿಕೊಳ್ಳಬೇಕು. ಸ್ವಲ್ಪ ದಿನ ಈ ಕಛೇರಿಗಳು ಮಾಡರ್ನೈಜ್ ಆಗಿ ಇನ್‌ಫರ್ಮೇಶನ್ ಕಂಪ್ಯೂಟರೈಜ್ ಆದಮೇಲೆ ಇದು ವೇಗವಾಗಿ ಆಗುತ್ತದೆ. ಮಾನ್ಯ ಸಿಂಧ್ಯರವರು ಪುನಃ ಅಪನಂಬಿಕೆಯಿಂದ ನಗುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಅಷ್ಟು ಸಿಡುಕುತನ ಬೇಡ, ಮಾನ್ಯ ಸಿಂಧ್ಯಾರವರದ್ದು ಹಾಗೂ ತಮ್ಮದು ಕರೆಕ್ಟಾಗಿದೆ. What

was the difference between an Optimist and a Pessimist? An optimist invented aeroplane. A pessimist invented parachute.

Prof. B.K. Chandrashekhar :— There are certain steps envisaged in the right to information bill. I would like to be optimist and continue whatever little work we can do. ನಾವು ಇಲ್ಲಿ ಭಾಷಣಗಳನ್ನು ಮಾಡುತ್ತೇವೆ, ವೀರಾವೇಶದಿಂದ ಮಾತನಾಡುತ್ತೇವೆ, ನಾವು ಈ ವ್ಯವಸ್ಥೆಯಲ್ಲಿ ಭಾಗಿಗಳಾಗಿದ್ದೇವೆ, ಇಲ್ಲಿ ಇರುವವರಲ್ಲಿ ಯಾರು ಇಲ್ಲ, 50 ವರ್ಷಗಳಾದವು ಎಲ್ಲಾ ಸರ್ಕಾರಗಳು ಬಂದು ಹೋಗಿರುತ್ತವೆ. ಮಾನ್ಯ ಸಿಂಧ್ಯಾರವರ, ತಮ್ಮ ಸರ್ಕಾರದಲ್ಲಿ ಅಡ್ಮಿನಿಸ್ಟ್ರೇಶನ್ ರಿಫಾರ್ಮ್ಸ್ ಕಮೀಷನ್ ಮಾಡಿ ತಮ್ಮ ಸರ್ಕಾರದಲ್ಲಿ ಏಕೆ ಈ ಪ್ರಯತ್ನವನ್ನು ಮಾಡಲಿಲ್ಲ. ನಿಷ್ಪಕ್ಷ ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣೆ ಆಯೋಗ ವರ್ಗಾವಣೆಯಲ್ಲಿ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ಇವರು 10 ವರ್ಷಕ್ಕೆ ಆಗುವಷ್ಟು ವರ್ಗಾವಣೆಗಳನ್ನು ಮಾಡಿಬಿಟ್ಟಿದ್ದಾರೆ. ಈಗ ಆಡಳಿತ ಸುಧಾರಣಾ ಆಯೋಗದವರು ಉತ್ತಮವಾದ ಸಲಹೆಯನ್ನು ಕೊಡುತ್ತಾರೆಂದು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ವರ್ಗಾವಣೆಯ ವಿಷಯವನ್ನು ಬಿಟ್ಟು ಬೇರೆ ಏನು ವಿಷಯವಿಲ್ಲವೇ? 10 ವರ್ಷಗಳಿಗೆ ಆಗುವಷ್ಟು ವರ್ಗಾವಣೆಗಳನ್ನು ಮಾಡಿಟ್ಟಿರುತ್ತಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಈ ಮಾತನ್ನು ನಾನು ಹೇಳಿದ್ದು ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಹೇಳಿದ್ದಾರೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಮಾನ್ಯ ಅಧ್ಯಕ್ಷರೇ, ವರ್ಗಾವಣೆ ಆಗದಿದ್ದರೆ ವಿರೋಧ ಪಕ್ಷಗಳಿಗೆ ಈ ಅಧಿವೇಶನದಲ್ಲಿ ಬೇರೆ ಏನೂ ಮಾತನಾಡಲು ಇರುತ್ತಿರಲಿಲ್ಲ, ಏಕೆಂದರೆ ಈಗ ಡಾ: ರಾಜ್‌ಕುಮಾರ್ ರವರು ಕೂಡ ವಾಪಸ್ಸು ಬಂದಿದ್ದಾರೆ.

ಶ್ರೀ ಜಗದೀಶ ಶೆಟ್ಟರ್ :— ಆಡಳಿತ ಸುಧಾರಣಾ ಆಯೋಗವನ್ನು ಮಾಡಿದ್ದೇವೆ ಎನ್ನುವ ಒಂದು ಮಾತನ್ನು ಅವರು ಹೇಳಿದರು. ಮಾನ್ಯ ಸಿಂಧ್ಯಾರವರ ಆದಿಯಾಗಿ ನಾವೆಲ್ಲರೂ ಹೋಗಿದ್ದೆವು. ವರ್ಗಾವಣೆಯ ಜೊತೆಗೆ ನಾವು ಕೆಲವೊಂದು ವಿಚಾರಗಳನ್ನು ಅವರಿಗೆ ಹೇಳಿದೆವು. ವರ್ಗಾವಣೆಯ ಬಗ್ಗೆ ಒಂದು ಪಾಲಿಸಿ ಆಗಬೇಕು, ನೀವು ಸ್ಟಡಿ ಮಾಡಿ ಒಂದು ವರದಿಯನ್ನು ಕೊಡುತ್ತೀರಿ, ಎಲ್ಲಾ ರಿಪೋರ್ಟ್‌ಗಳು ಬರುವ ಹಾಗೆ ಬಂದು ಯಾವುದೋ ಒಂದು ಮೂಲೆಯಲ್ಲಿ ಆ ವರದಿ ಬೀಳುತ್ತದೆ. ಅದರ ಬಗ್ಗೆ ನಮಗೆ ನಂಬಿಕೆ ಇಲ್ಲವೆನ್ನುವ ಬಗ್ಗೆ ಹಾಗೂ ಅದು ಎಷ್ಟರಮಟ್ಟಿಗೆ ಇಂಪ್ಲಿಮೆಂಟ್ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ :— ನಮಗೆ ನಂಬಿಕೆ ಇರುವುದರಿಂದ ಅದನ್ನು ನಾವು ಮಾಡುವುದಕ್ಕೆ ಹೊರಟಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೆ, ಸದನ ಸಮಿತಿಯ ರಿಪೋರ್ಟ್‌ಗಳು ಬರುತ್ತವೆ, ಅವು ಒಂದಾದರೂ ಅಲ್ಲಿ ಚರ್ಚೆಯಾಗುತ್ತವೆಯೇ? ಅದನ್ನು ಮುಂದಿಡುವುದು ಅಷ್ಟೆ. ಆದಕ್ಕಾಗಿ ಏಕೆ ಹಣ ಖರ್ಚು ಮಾಡುವುದು? ಒಂದಾದರೂ ಕಾರ್ಯಗತವಾಗಿದೆಯೇ? ಕಷ್ಟಪಟ್ಟು ರಿಪೋರ್ಟ್‌ನ್ನು ಕೊಡುತ್ತೇವೆ, ಇದರ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗಿದೆಯೇ? ನಮಗೆ ಮಾತನಾಡುವುದಕ್ಕೆ ಸಮಯವನ್ನೇ ಕೊಡುವುದಿಲ್ಲ. ಇದರ ಬಗ್ಗೆ ಚರ್ಚೆಯೇ ಇಲ್ಲವೆಂದು ಹೇಳುತ್ತೀರಿ? ಇದೇ ಸರ್ಕಾರದಲ್ಲಿ ಆಗಿದೆ ಎಂದು ನಾನು ಹೇಳುತ್ತಿಲ್ಲ, ಹಿಂದಿನ ಸರ್ಕಾರದಲ್ಲೂ ಇದನ್ನು ನಾನು ನೋಡುತ್ತಿದ್ದೇನೆ.

ಅಧ್ಯಕ್ಷರು :— ಮಾನ್ಯ ಪಾಟೀಲ್‌ರವರೆ, ತಾವು ಒಂದು ನೋಟೀಸ್‌ನ್ನು ಕಳುಹಿಸಿಕೊಡಿ, ಅದನ್ನು ನಮ್ಮ ರೂಲ್ಸ್ ಪ್ರಕಾರ ಇದ್ದರೆ ಅಲೋ ಮಾಡೋಣ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಸದನ ಸಮಿತಿಯ ರಿಪೋರ್ಟ್‌ಗಳನ್ನು ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ಬದಲಾವಣೆ ಮಾಡುವಂತಹ ವ್ಯವಸ್ಥೆಗಳು ಇರುವಾಗ, ಸದನ ಸಮಿತಿ ಏಕೆ ಬೇಕು? ಅದರ ರಿಪೋರ್ಟ್ ಏತಕ್ಕಾಗಿ ಬೇಕು? ಒಂದು ಸಾರಿ ಅದನ್ನು ಸದನದಲ್ಲಿ ಇಟ್ಟಮೇಲೆ ಅದು ಸದನದ ಪ್ರಾಪರ್ಟಿಯಾಗುತ್ತದೆ; ಅದನ್ನು ಬದಲಾವಣೆ ಮಾಡಬೇಕಾದರೆ ಈ ಸದನದಲ್ಲಿ ಬದಲಾವಣೆಯನ್ನು ಮಾಡಬೇಕು. ನೀವು ಎಲ್ಲೋ ಕುಳಿತುಕೊಂಡು ಬದಲಾವಣೆಯನ್ನು ಮಾಡುವುದಾದರೆ ಆ ಸಮಿತಿ ಏತಕ್ಕಾಗಿ ಬೇಕು? ಅದರ ರಿಪೋರ್ಟ್ ಏಕೆ ಬೇಕು?

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು) :— ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಕಡೆಯದಾಗಿ ಮಾತನಾಡುವುದಾದರೆ ಕೇಂದ್ರ ಸರ್ಕಾರದವರು ಫ್ರೀಡಂ ಆಫ್ ಇನ್‌ಫರ್ಮೇಷನ್ ಬಿಲ್‌ನ್ನು ತಂದರೆ ಎಲ್ಲರೂ ಹಾಡಿ ಹೊಗಳುತ್ತಾರೆ, ಯಾರೂ ಡಿಮ್ಯಾಂಡ್‌ನ್ನು ಮಾಡದೆ ಈ ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳು ಫ್ರೀಡಂ ಆಫ್ ರೈಟ್ ಟು ಇನ್‌ಫರ್ಮೇಷನ್ ಬಿಲ್‌ನ್ನು ತಂದರೆ ಟೀಕೆಯನ್ನು ಮಾಡುತ್ತೀರಿ; ಅಪಹಾಸ್ಯವನ್ನು ಮಾಡುತ್ತೀರಿ.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ನಿಮ್ಮ ಪಕ್ಷದಲ್ಲಿರುವ ವಿರೋಧಪಕ್ಷದವರು ಮಾತನಾಡಬಹುದಲ್ಲ. ಅವರುಗಳು ಮಾತನಾಡಿದರೆ ನಾವು ಬೇಡವೆಂದು ಹೇಳುತ್ತೇವೆಯೇ?

ಶ್ರೀ ಬಿ.ಕೆ. ಚಂದ್ರಶೇಖರ್ :— ಮಾನ್ಯ ಅರುಣ್ ಜೈಟ್ಲಿಯವರು ಇದನ್ನು ತಂದಾಗ ನಾನು ಮೊಟ್ಟಮೊದಲನೆಯದಾಗಿ ಅದರ ಬಗ್ಗೆ ನ್ಯಾಷನಲ್ ಪೇಪರ್‌ನಲ್ಲಿ ಲೇಖನವನ್ನು

ಬರೆದು ಅದನ್ನು ಸ್ವಾಗತಮಾಡಿದವನು. ಇದನ್ನು ಭಾರತೀಯ ಜನತಾಪಕ್ಷದವರು ಮಾಡಿದ್ದಲ್ಲ, ನಾವು ಆ ಧೋರಣೆಯನ್ನು ಇಟ್ಟುಕೊಳ್ಳದೇ ಹೋದರೆ ನಾವು ಹೀಗೆಯೇ ಆಡುತ್ತಿರಬೇಕಾಗುತ್ತದೆ. ನಾವು ಒಬ್ಬರನ್ನೊಬ್ಬರು ಟೀಕಿಸುತ್ತಾ ಹಂಗಿಸುತ್ತಿರುತ್ತೇವೆ. ಆದ್ದರಿಂದ ನಾನು ವಿರೋಧಪಕ್ಷದ ಶಾಸಕರುಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಹಲವಾರು ನ್ಯೂನ್ಯತೆಗಳು ಇವೆ, ಇಲ್ಲವೆಂದು ನಾನು ಹೇಳುತ್ತಿಲ್ಲ, ಇದನ್ನು ಸಂಪೂರ್ಣವಾದ ಇತಿಮಿತಿಯೊಳಗೆ ಈ ಕಾನೂನನ್ನು ರೂಪಿಸಿದ್ದೇವೆ, ಆದರೊಳಗೆ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ನನಗೆ ಯಾವ ಭ್ರಮೆಯೂ ಇಲ್ಲ, ಮೂಲಭೂತವಾಗಿ ಈ ಸಮಾಜವನ್ನು ರಾಜಕೀಯ ವ್ಯವಸ್ಥೆಯನ್ನು ಬದಲಾವಣೆ ಮಾಡಿಬಿಡುತ್ತೇವೆ ಎಂದು ಹೇಳುವುದಲ್ಲ. Marginal improvement has been made tinkering here and there. ಆದರೂ ಕೂಡ ನನಗೆ ಸಮಾಧಾನವಾಗಿದೆ, ಆ ಉದ್ದೇಶದಿಂದ ಈ ಬಿಲ್ಲನ್ನು ತಂದಿರುವುದಾಗಿದೆ. ಮಾನ್ಯ ಸುರೇಶ್ ಕುಮಾರ್‌ರವರು ಹಲವಾರು ಪ್ರೊವಿಷನ್‌ಗಳು ಲೂಗಳ ಬಗ್ಗೆ ಮಾತನಾಡಿದರು. ಇದರ ಬಗ್ಗೆ ಕೆಲವನ್ನು ನಾವು ಎಲ್ಲರ ಜೊತೆ ಚರ್ಚೆ ಮಾಡಿ ಇದಾದ ಮೇಲೆ ಆರ್ಡಿನೆನ್ಸ್ ಮೂಲಕ ಒಂದು ಅಥವಾ ಎರಡನ್ನು ತರುವ ಸಾಧ್ಯತೆ ಇದೆ. ಇನ್ಸ್‌ಪೆಕ್ಷನ್ ಬಗ್ಗೆ ಸಣ್ಣ ಅಮೆಂಡ್‌ಮೆಂಟ್‌ನ್ನು ತರಬಹುದು. ದಯಮಾಡಿ ತಾವು ನನಗೆ ಸ್ವಲ್ಪ ಸಮಯವನ್ನು ಕೊಡಬೇಕು, ಇದರಲ್ಲಿ ನಮಗೆ ಬೇರಾವ ಉದ್ದೇಶಗಳು ಇಲ್ಲ. ಅದನ್ನು ನಾವು ಮಾಡುವುದಕ್ಕೆ ಅಡ್ಮಿನಿಸ್ಟ್ರೇಟೀವ್ ಫ್ಲೇಸಿಬಿಲಿಟಿ ಆಗುತ್ತದೆಂದರೆ ಖಂಡಿತವಾಗಿ ಅದನ್ನು ಸೇರಿಸೋಣ. ಇನ್ನು ಕೆಲವು ವಿಚಾರಗಳನ್ನು ನಾವು ರೂಲ್ಸ್‌ನಲ್ಲಿ, ಅಂದರೆ ಅಧಿನಿಯಮಗಳಲ್ಲಿ ಸೇರಿಸಿಕೊಳ್ಳಬಹುದು. ಒಂದೆರಡು ವಿಷಯಗಳನ್ನು ಜನರಲ್ ಆಗಿ ಸ್ಪೆಸಿಫಿಕ್ ಕಾಮೆಂಟ್‌ಗಳನ್ನು ಹೇಳಿ ಇದರ ಬಗ್ಗೆ ನನ್ನ ಮಾತನ್ನು ಮುಗಿಸುತ್ತೇನೆ. ಡಿಸ್ಕ್ರಿಷನ್ ಇದೆ ಎಂದು ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದರು, ಅದು ಕ್ಲಾಸ್-4(ಡಿ) ನಲ್ಲಿ ಇಲ್ಲ, ಪ್ರಾವಿಸೋ-4(ಡಿ)ನ್ನು ತಾವು ನೋಡಬಹುದು. ನಾನು ಹೆಚ್ಚು ಸಮಯವನ್ನು ಕಳೆಯುವುದಕ್ಕೆ ಇಷ್ಟಪಡುವುದಿಲ್ಲ. ತಮ್ಮ ಆತಂಕ ಏನಿತ್ತು ಅದಕ್ಕೆ ಸೆಕ್ಷನ್ 4(ಡಿ)ನಲ್ಲಿ ಉತ್ತರವಿದೆ. ಡಿಸಿಷನ್ ಎಲ್ಲಾ ಕೊಡಬೇಕಾಗುತ್ತದೆ. ತಾವು ಇನ್‌ಕ್ಲೂಡಿಂಗ್ ಬಗ್ಗೆ ಮಾತನಾಡಿದ್ದೀರಿ, ಅದು ಇದ್ದರೂ ಕೂಡ the proviso is very good now, ಅದರಲ್ಲಿ ಇದಿಷ್ಟು ಇಂಪ್ರೆಸ್ಸಿವ್ ಆಗಿ ಇನ್‌ಫರ್ಮೇಷನ್‌ಗಳು ಸಿಗುತ್ತದೆ. ತಾವು ಅದನ್ನು ಬೇಕಾದರೆ ನಿಧಾನವಾಗಿ ನೋಡಿಕೊಳ್ಳಬಹುದು. ಮೊನ್ನೆ ಅದನ್ನು ಬದಲಾವಣೆ ಮಾಡಿದುದರಿಂದ ಅದರ ವ್ಯಾಪ್ತಿ ಬಹಳ ಚೆನ್ನಾಗಿದೆ. Then, why not include information to be given within 48 hours on life and liberty? ಏನಾಗುತ್ತದೆಂದರೆ ಹಿಂದೆಯೂ ಈ ಪ್ರೊವಿಷನ್ಸ್ ಇತ್ತು, ಲೈಫ್ ಅಂಡ್ ಲಿಬರ್ಟಿ ಎಕ್ಸ್‌ಪ್ರೆಷನ್ ಬಹಳ ಅಮೂರ್ತವಾಗುತ್ತದೆ, ಅದನ್ನು ಹೇಗೆ ಸ್ಪೆಸಿಫೈ ಮಾಡುವುದು, ಅದನ್ನು ನಿರ್ದಿಷ್ಟವಾಗಿ ಹೇಗೆ ಮಾಡುವುದು ಎಂದು ಅದು ಆಗದೇ ಇರುವುದರಿಂದ ಸುಪ್ರೀಂಕೋರ್ಟಿನವರು ಎಷ್ಟೋ ಡಿಸಿಷನ್‌ಗಳಲ್ಲಿ ರೂಲಿಂಗ್‌ನ್ನು

ಕೊಟ್ಟಿದ್ದಾರೆ. ಅಂದರೆ 48 ಗಂಟೆಗಳ ಒಳಗಡೆ, 24 ಗಂಟೆಗಳೊಳಗೆ ಅರೆಸ್ಟ್ ಮಾಡಿದರೆ, ಬೇರೆ ವಿಚಾರಗಳಿದ್ದರೆ 48 ಗಂಟೆ, ಅಥವಾ 72 ಗಂಟೆಯೊಳಗಾಗಿ ಕಡ್ಡಾಯವಾಗಿ ಕೊಡಬೇಕು, it is very well established. ನಾನು ಒಂದು ಖಾಸಗಿ ಮಸೂದೆಯನ್ನು ತಂದಿದ್ದೆ, ಆದ್ದರಿಂದಲೇ ಯಾವನಾದರೂ ಒಬ್ಬ ಪೊಲೀಸ್ ನವರು ಒಬ್ಬ ಮನುಷ್ಯನನ್ನು ಅರೆಸ್ಟ್ ಮಾಡಿದ್ದರೆ nearest available person, friend or relative of the person arrested should be informed by the police. ಯಾವ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಿದ್ದೇನೆ, ಅವನ ಹೆಸರೇನು ಎಂದು ಹೇಳಿ ಒಂದು ಸಣ್ಣ ಚೀಟಿಯನ್ನು ಅವನು ಕೊಡಬೇಕಾಗುತ್ತದೆ. ಸಿಆರ್‌ಪಿಸಿಗೆ ಅಮೆಂಡ್‌ಮೆಂಟ್‌ನ್ನು ಮಾಡಿದರೆ ಸಾಕು, ಸಿ.ಆರ್.ಪಿ.ಸಿ.ಗೆ ನಾವು ಸ್ಟ್ರೈಟ್ ಆಗಿ ಅಮೆಂಡ್‌ಮೆಂಟ್‌ನ್ನು ಮಾಡಬೇಕೆಂದು ನಾನು ಪ್ರಯತ್ನವನ್ನು ಪಟ್ಟಿದ್ದೇನೆ. ನನಗೆ ವ್ಯಾಪಕವಾಗಿ ಸಪೋರ್ಟ್ ಸಿಕ್ಕಿತು, ಆದರೆ ಆ ಅಮೆಂಡ್‌ಮೆಂಟ್ ಆಗಿಲಿಲ್ಲ. ಇದರಲ್ಲಿ ಆ ರೀತಿಯಾಗಿ ಯಾವ ತೊಂದರೆಯೂ ಬರುವುದಿಲ್ಲ. ಅದನ್ನು ಸೇರಿಸಿದ್ದರೆ ತುಂಬಾ ವೇಗ್ ಆಗುತ್ತಿತ್ತು. ಅದಕ್ಕಾಗಿ ಅದನ್ನು ಸೇರಿಸಲಿಲ್ಲ. ಇದರಲ್ಲಿ ಬೇರೆ ಯಾವ ಉದ್ದೇಶಗಳು ಇಲ್ಲ. ಸಬ್ ಅಥಾರಿಟಿ ಕ್ಲಾಸ್-7ನಲ್ಲಿ ಇದೆ ಎಂದು ತಾವು ಹೇಳಿದ್ದೀರಿ, why not superior authority? ನಾವು ಉದ್ದೇಶಪೂರ್ವಕವಾಗಿ ಸಬ್ ಅಥಾರಿಟಿ ಎಂದು ಬರೆದಿದ್ದೇವೆ, ಮೊದಲು ಸುಪೀರಿಯರ್ ಅಥಾರಿಟಿ ಎಂದು ಇತ್ತು. ಇದು ವಿಧಾನಪರಿಷತ್ತಿಗೆ ಹೋದಮೇಲೆ ಅಲ್ಲಿ ಬದಲಾವಣೆಯಾಯಿತು. ಏಕೆಂದರೆ, it should be referred to a lower authority also. ಯಾವ ಒಬ್ಬ ಅಧಿಕಾರಿಯ ಹತ್ತಿ ಇನ್‌ಫರ್‌ಮೇಷನ್‌ಗಳು ಇಲ್ಲ, ಅವನು ಕೆಳಗಿನ ದರ್ಜೆಯ ಅಧಿಕಾರಿಯ ಹತ್ತಿರ ಮಾಹಿತಿಯನ್ನು ಕೇಳಬಹುದು. ಆದ್ದರಿಂದ "ಸಬ್ ಅಥಾರಿಟಿ" ಎಂದು ಮಾಡಿದ್ದೇವೆ. ಇದು ಮೊದಲು 'ಸುಪೀರಿಯರ್ ಅಥಾರಿಟಿ' ಎಂದು ಇತ್ತು, ಅದನ್ನು ಬದಲಾವಣೆ ಮಾಡಿದ್ದೇವೆ. ತಾವು ಪೆನಾಲ್ಟಿಯ ಬಗ್ಗೆ ಹೇಳಿದ್ದೀರಿ, ನನಗೆ ಬಹುಶ: ಇದು ಸರಿ ಒಂದು ಕಾಣಿಸುತ್ತದೆ; 2000 ರೂಪಾಯಿಗಳು ಕಡಿಮೆ ಎಂದು ಬಹಳ ಜನ ಸದಸ್ಯರುಗಳು ಹೇಳಿದರು, ಇದರ ಬಗ್ಗೆ ಮೇಲ್ಮನೆಯಲ್ಲಿಯೂ ಕೂಡ ವಾದ ಬಂದಿತ್ತು. ನಾನು ಹೇಳಿದ ಹಾಗೆ ಆದರೆ ಇದನ್ನು ಸ್ವಲ್ಪ ದಿವಸ ನಡೆಸಿಕೊಂಡು ನೋಡೋಣ, ಸಿವಿಲ್ ಸರ್ವೀಸ್ ಕಾಂಡಕ್ಟ್ ರೂಲ್ಸ್‌ನ ಪ್ರಕಾರ ಅವನ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೂ ಅದೇ ಸೆಕ್ಷನ್‌ನಲ್ಲಿ ಅವಕಾಶವಿದೆ. ಅಷ್ಟ ದಿನದ ಸಂಬಳವೆಲ್ಲಾ ಒಂದು 6 ತಿಂಗಳು ಅಥವಾ ಒಂದು ವರ್ಷ ಬಿಟ್ಟು ಅದರ ಬಗ್ಗೆ ಆಲೋಚನೆಯನ್ನು ಮಾಡಬೇಕೆಂದು ನಿಮ್ಮಲ್ಲಿ ನಾನು ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಬಿ. ಸೋಮಶೇಖರ್‌ರವರು ಶಾಸಕರಿಗೆ ಸಿಗುವ ಮಾಹಿತಿಗಳೆಲ್ಲವು ಎಲ್ಲರಿಗೂ ಸಿಗಬೇಕೆಂದು ಹೇಳಿದರು; ಅದು ಆಟೋಮ್ಯಾಟಿಕ್ ಆಗಿ ಎಲ್ಲರಿಗೂ ಸಿಗುತ್ತದೆ. ಖಂಡಿತವಾಗಿ ಇದನ್ನು ಯಾರು ಕೂಡ ತಡೆಯುವುದಕ್ಕಾಗುವುದಿಲ್ಲ. It is now constitutional

obligation. It doesn't need to be made explict in the Right to information Bill. It will be made available, except ಶಾಸಕರಿಗೆ ಸಿಗುವುದಿದ್ದ ಪ್ರಿವಿಲೇಜ್ ಇನ್‌ಫರ್‌ಮೇಷನ್ ಕೆಲವು ಇರುತ್ತದೆಯಲ್ಲಾ, ಇಲ್ಲಿ, ಇದಕ್ಕೆ ಸಂಬಂಧಪಟ್ಟಂತೆ ಸದನದ ನಡವಳಿಕೆ, ಸ್ಪೀಕರ್ ಮತ್ತು ಚೇರ್‌ಮನ್‌ರವರು ಇರುತ್ತಾರೆ. ಬೇರೆಯವರಿಗೆ ಸಿಗುವುದಿಲ್ಲ; ಅದು ಸಿಗಲೂಬಾರದು. It should be confined there. It cannot go to other people. ಇನ್ನು ತಾವು ಸೆಕ್ಷನ್ 42(ಸಿ)ಯ ಬಗ್ಗೆ ಹೇಳಿದ್ದೀರಿ, notings also shoulbe be provided, etc., ನಾನು ಪ್ರಾಸ್ತಾವಿಕವಾಗಿ ಮಾತನಾಡುವಾಗ 42(ಸಿ)ಬಗ್ಗೆ ಹೇಳಿದ್ದೇನೆ. ಕ್ಯಾಬಿನೆಟ್ ಪೇಪರ್ಸ್‌ನ್ನು ಕೊಡುವುದು ಬೇಡವೆಂದು ಇತ್ಯರ್ಥವಾಯಿತು. ಗೋವಾ ರಾಜ್ಯ ಒಂದನ್ನು ಬಿಟ್ಟರೆ ಯುನೈಟೆಡ್ ಕಿಂಗ್‌ಡಂನಲ್ಲಿಯೂ ಕೂಡ ಕ್ಯಾಬಿನೆಟ್ ಪೇಪರ್ಸ್‌ನ್ನು ಕೊಡುವುದಿಲ್ಲ. I have see the most recent provisions on freedom of Information Bill ಅದನ್ನು ನಾನು ತರಿಸಿಕೊಂಡಿದ್ದೇನೆ. ಅದು ಅಲ್ಲಿಯೂ ಇಲ್ಲ, ಅಂದರೆ ನಮಗಿಂತ ಹೆಚ್ಚು ಡೆಮೋಕ್ರಾಟಿಕ್ ಪ್ರಾಕ್ಟೀಸ್‌ನಲ್ಲಿ ಅವರಿಗೆ ಒಂದು ಸರ್ಕಾರವಿದೆ, ಒಂದು ಸಂಪ್ರದಾಯವಿದೆ, ಅಲ್ಲಿಯೂ ಕೂಡ ಅದನ್ನು ಕೊಟ್ಟಿರುವುದಿಲ್ಲ. ಆದರೆ ಒಟ್ಟಾರೆಯಾಗಿ ಅದನ್ನು ಕೊಡುವುದು ಬೇಡವೆಂದು ತೀರ್ಮಾನವಾಯಿತು. ಆದರೆ ಅದಕ್ಕೊಂದು ಸಬ್‌ಸ್ಟಿಟ್ಯೂಟ್‌ನ್ನು ಮಾಡಿದೇವೆ, ಪ್ರತಿಯೊಂದು ಸಚಿವಸಂಪುಟದ ನಿರ್ಧಾರಕ್ಕೂ ಕೂಡ ಕಡ್ಡಾಯವಾಗಿ ಒಂದು ಸ್ಟೇಟ್‌ಮೆಂಟ್‌ನ್ನು ಅಟ್ಯಾಚ್ ಮಾಡಬೇಕು. Statement should contain detailed information on the reasons and circumstances leading to the particular decision. It should be accompanied with the government order. It gives a basis for further question and perhaps, even legal action. ಅದು ಬಹಳ ಯೂಸ್‌ಫುಲ್ ಆಗುತ್ತದೆ. ಅದನ್ನು ನಾವು ಮಾಡಿದ್ದೇವೆ. ಅದನ್ನು ಎಲ್ಲೂ ಮಾಡಿಲ್ಲ, ಅದು ಬಹಳ ಉಪಯುಕ್ತವಾದ ಒಂದು ಪ್ರಾವಿಜನ್‌ನ್ನು ನಾವು ಮಾಡಿದ್ದೇವೆ. ಇನ್‌ಸ್ಪೆಕ್ಷನ್ ಬಗ್ಗೆ ನಾನು ಆಗಲೇ ಹೇಳಿದ್ದೇನೆ. Clause-6 ``Not required to be ordinarily collected by public authority" ಮಾನ್ಯ ಸೋಮಶೇಖರ್‌ರವರು ಅದರ ಬಗ್ಗೆ ಹೇಳಿದರು. ಇದರ ಅರ್ಥವೇನೆಂದರೆ, ಒಂದು ಮೈಸೂರ್ ಮಿನರಲ್ಸ್ ಲಿಮಿಟೆಡ್ ಎಂದು ಇದೆ, ಅವರಿಗೆ ಅವರ ಕ್ಷೇತ್ರ ವ್ಯಾಪ್ತಿಗೆ ಸಂಬಂಧಪಟ್ಟಂತೆ ವಿಚಾರವನ್ನು ಅವರು ಮಾಡುತ್ತಾರೆ. ಅವರ ಹತ್ತಿರ ನಾವು ಇನ್ಯಾವುದೋ ವಿಚಾರದ ಬಗ್ಗೆ ಕೇಳಿದಾಗ that public authority is not ordinarly expected to collect information beyond its jurisdiction. ಎಂದು ಈ ಅರ್ಥದಲ್ಲಿ ಮಾತ್ರ ನಾವು ಹೇಳಿದ್ದೇವೆ. ಕ್ಲಾಸ್-6 ನಲ್ಲಿ ಅದನ್ನು ತಾವು ನೋಡಬಹುದು.

ಶ್ರೀ ಬಿ. ಸೋಮಶೇಖರ್ :— ಅದರೆ ಅರ್ಥ ಬರುವುದಿಲ್ಲ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಆ ತರಹ ಇಲ್ಲ ತಾವು ನೋಡಬಹುದು; It is too general in nature and the information sought ಅವನು ಸ್ಪೆಸಿಫೈ ಮಾಡು ಎಂದು ಅಧಿಕಾರಿಯೇ ಹೆಲ್ಪ್ ಮಾಡಬಹುದು. It is not required to be ordinarily collected by public authority. ಆ ಒಂದು ಕಛೇರಿಗೆ ಸಂಬಂಧಪಡದ ಇರುವ ವಿಚಾರವನ್ನು ಅಲ್ಲಿ ಕೇಳಬಾರದು ಎಂಬ ಉದ್ದೇಶದಿಂದ ಮಾತ್ರ ಮಾಡಿರುವುದು; ಬೇರೆ ಏನು ಅಲ್ಲ. ಆದರ ಬಗ್ಗೆ ಕ್ಲಿಯರ್ ಆಗಿ ಇದೆ, ಬೇಕಾಗಿದ್ದರೆ ರೂಲ್‌ನಲ್ಲಿ ಇನ್ನೊಂದು ಅಂಶ್ಲಿಪ್ಪನ್ನು ಸೇರಿಸೋಣ. ತಾವು ಹೇಳಿದ್ದನ್ನು ಒಂದಕ್ಕೆ ಸೇರಿಸಿಬಿಡೋಣ, ಬೇಕಾದರೆ ಅಂಪ್ಲಿಪೈ ಮಾಡೋಣ ಇನ್ನು ಬೇರೆ ಏನೂ ಇಲ್ಲ. State Council for Right to information ಗೋವಾದಲ್ಲಿ ಇದೆ ಎಂದು ಮಾನ್ಯ ಸೋಮಶೇಖರ್‌ರವರು ಹೇಳಿದರು. ಅದನ್ನು ಮಾಡಬಹುದು, ಒಂದೇ ಒಂದು ಕಾರಣಕ್ಕಾಗಿ ನಾನು ಮಾಡಲಿಲ್ಲ, ಮತ್ತೊಂದು ಬ್ಯೂರೋಕ್ರಾಟಿಕ್ ಇನ್‌ಸ್ಟಿಟ್ಯೂಷನ್‌ನ್ನು ನಾವೇ ಕ್ರಿಯೇಟ್ ಮಾಡಿದಂತಾಗುತ್ತದೆಂಬ ಉದ್ದೇಶದಿಂದ ಅದನ್ನು ನಾವು ಮಾಡಲಿಲ್ಲ.

Sri B. Somadhekhar :— To oversee that Act/Provisions there should be an Apex Council headed by the Chief Minister or yourself.

Prof. B.K. Chandrashekar :— It could be done. It is a good idea.

ಶ್ರೀ ಬಿ. ಸೋಮಶೇಖರ್ :— ಜರ್ನಲಿಸ್ಟ್, ಎನ್‌ಜಿಓ ರೆಪ್ರೆಸೆಂಟೆಟಿವ್ಸ್ ಎಂಎಲ್‌ಎಗಳನ್ನು ವಿರೋಧ ಪಕ್ಷದ ನಾಯಕರುಗಳನ್ನು ಸೇರಿಸಬಹುದು, at least once in a year it can review the functioning of the Act. ಅದನ್ನು ಮಾಡಬೇಕಾಗುತ್ತದೆ. ಗೋವಾದಲ್ಲಿ ಇದರ ಬಗ್ಗೆ ಇದೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಸಿವಿಲ್ ರೈಟ್ಸ್‌ಗೆ ನಮ್ಮ ಡೆಮೋಕ್ರಾಟಿಕ್ ರೈಟ್ಸ್‌ನ್ನು ಓವರ್‌ಸೀ ಮಾಡುತ್ತಾರಲ್ಲಾ, ಆ ತರಹ ಮಾಡಬಹುದು, ಅದರಲ್ಲಿ ತಪ್ಪೇನೂ ಇಲ್ಲ. ಒಂದು ರೀತಿಯಾಗಿ ರಾಜಕೀಯವಾಗಿ ಆದರೂ ಅಲ್ಲಿ ಪ್ರಶ್ನೆಗಳನ್ನು ಕೇಳಬಹುದು, ಯಾವ ರೀತಿಯಾಗಿ it is in operation or failure to give information. It is a good idea. ಅದನ್ನು ನಾನು ಅಕ್ಸೆಪ್ಟ್ ಮಾಡುತ್ತೇನೆ. ಪುನ: ಅದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ, ದಯಮಾಡಿ ಅದನ್ನು ಮಾಡುವುದು ಬೇಡ.

ಶ್ರೀ ಬಿ. ಸೋಮಶೇಖರ್ :— ಈ ಬಗ್ಗೆ ರೂಲ್ಸ್‌ನಲ್ಲಿ ಮಾಡುವಂಥದ್ದು ಅಲ್ಲ. It is a supervising body. ಇಂತಹ ಒಂದು ಮುಖ್ಯವಾದ ಬಿಲ್ಲನ್ನು ಈ ಮನೆಯಲ್ಲಿ

ತಾವು ಮಂಡಿಸದೆ (ಆ ಮನೆಯಲ್ಲಿ ಮಂಡಿಸಿದಿರಿ) ನಾನು ಮೊದಲೇ ಹೇಳಿದೆ, ಇದು ಪ್ರಮುಖವಾದ ಬಿಲ್. ನಮ್ಮಲ್ಲಿ ಕೊಡುವ ಸಲಹೆಗಳನ್ನು ತೆಗೆದುಕೊಂಡು ಆ ಮೇಲೆ ಮೇಲ್ಮನೆಗೆ ಕಳುಹಿಸಬೇಕಾಗಿತ್ತು; ಇಲ್ಲಿ ಕೊಟ್ಟ ಎರಡು ಮೂರು ಸಲಹೆಗಳನ್ನು ಒಪ್ಪಿಕೊಂಡ ಮೇಲೆ ಮೇಲ್ಮನೆಗೆ ಕಳುಹಿಸಬೇಕಾಗಿತ್ತು. ಹೇಗೂ ನಾಳೆ ಮೇಲ್ಮನೆ ಸೇರುತ್ತಿತ್ತು. ಈಗ ಏನು ಇಂಪ್ರೆಷನ್ ಬರುತ್ತಿದೆ ಅಂದರೆ ಮೇಲ್ಮನೆಯಲ್ಲಿ ಒಳ್ಳೆಯ ಚರ್ಚೆಯಾಗುತ್ತದೆ, ಅಸೆಂಬ್ಲಿಯಲ್ಲಿ ದಡ್ಡರಿದ್ದಾರೆನ್ನುವ ಅರ್ಥ ಬರುತ್ತದೆ. ಇಂತಹ ಪ್ರಮುಖವಾದ ಬಿಲ್ಲನ್ನು ಇಲ್ಲಿ ಮೊದಲು ತಾರದೆ, ಮೇಲ್ಮನೆಯಲ್ಲಿ ಇದಕ್ಕೆ ಈಗಾಗಲೇ ಒಪ್ಪಿಗೆ ದೊರೆತಿದೆ. ಇಲ್ಲಿ ಪ್ರತಿಯೊಂದಕ್ಕೂ ಎರಡು ತಿಂಗಳು ನೋಡೋಣ, ಮೂರು ತಿಂಗಳು, ಆರು ತಿಂಗಳು ನೋಡೋಣ ಎಂದು ಹೇಳಿ ಅಲ್ಲಿ ಪಾಸ್ ಮಾಡಿಕೊಂಡು ಬಂದು ಈಗ ಆ ಬಿಲ್ಲನ್ನು ಇಲ್ಲಿ ತರುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ಮೇಲ್ಮನೆಯಲ್ಲಿ ಮೆಜಾರಿಟಿ ಇಲ್ಲವೆಂದು ಅದಕ್ಕೋಸ್ಕರ ಅವರ ಸಲಹೆಗಳನ್ನು ತೆಗೆದುಕೊಂಡು, ಈಗ ಇಲ್ಲಿಗೆ ತೆಗೆದುಕೊಂಡು ಬರುತ್ತಿದ್ದೀರಿ.

ಶ್ರೀ ಬಿ. ಸೋಮಶೇಖರ್ :— ಈಗಲಾದರೂ ನಾವು ಕೊಡುವ ಎರಡು ಮೂರು ಸಲಹೆಗಳನ್ನು ಒಪ್ಪಿಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಪಾಸಾದ ಬಿಲ್ಲಿನ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಸಂಪ್ರದಾಯವಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ಮೇಲ್ಮನೆಯಲ್ಲಿರುವವರು ಬುದ್ಧಿವಂತರ, ಕೆಳಮನೆಯಲ್ಲಿರುವವರು ದಡ್ಡರಾ? ಅದಕ್ಕೋಸ್ಕರ ಮೊದಲು ಮೇಲ್ಮನೆಯಲ್ಲಿ ಪಾಸ್ ಮಾಡಿಕೊಂಡು ಬಂದಿರಾ?

ಅಧ್ಯಕ್ಷರು :— ಕೆಳಮನೆಯಲ್ಲಿ ಮೇಲ್ಮನೆ ವಿಷಯದ ಬಗ್ಗೆ ಮಾತನಾಡುವುದು ಬೇಡ.

Sri D.B. Chandregowda :— Other than a Money Bill, any Bill could be introduced in the Council also.

ಅಧ್ಯಕ್ಷರು :— ಹೌದು ಆ ಪ್ರಾವಿಸನ್ ಇದೆ.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ಇದರಿಂದ ಮೆಸೇಜ್ ಏನು ಹೋಗುತ್ತದೆ? ಮೇಲ್ಮನೆಯವರು ಏನೆಲ್ಲಾ ಮಾತನಾಡುತ್ತಾರೆ, ಜನಗಳಿಂದ ಎಲೆಕ್ಟ್ ಆಗಿ ಬಂದಿರುವವರಿಗೆ ಜನ ಏನು ಹೇಳುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:— ಮೇಲ್ಮನೆಯಲ್ಲಿ ಇವರಿಗೆ ಮೆಜಾರಿಟಿ ಇಲ್ಲ, ಕೆಳಮನೆಯಲ್ಲಿ ಮೆಜಾರಿಟಿ ಇದೆಯೆಂದು ಹಾಗೆ ಮಾಡಿದ್ದಾರೆ.

ಅಧ್ಯಕ್ಷರು :— ಈಗ ಅದೆಲ್ಲ ಚರ್ಚೆ ಬೇಡ. ಟೈಮ್ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:— ಟೈಮ್ ಮುಖ್ಯವಲ್ಲ. ಈ ಬಿಲ್ ಬಹಳ ಮುಖ್ಯ. ನನ್ನದು ಒಂದೇ ಆಸೆ ಏನೆಂದರೆ, ಮಾನ್ಯ ಬಿ.ಕೆ. ಚಂದ್ರಶೇಖರ್‌ರವರು ಎಂ.ಎಲ್.ಎ ಆಗಬೇಕಾಗಿತ್ತು. ಆಗ ನಿಮ್ಮ ಅಭಿಪ್ರಾಯಕ್ಕೆ ಸ್ವಲ್ಪ ಮನ್ನಣೆ ಸಿಗುತ್ತಿತ್ತು. ಮೇಲ್ಮನೆಯಲ್ಲಿ ಏನೇನೋ ಸೇರಿಸಬೇಕೆಂದಿದ್ದಕ್ಕೆ ಆಯಿತು ಎಂದು ಹಾಳಿ, ಈಗ ಇಲ್ಲಿ ತಂದು ಈಗ ನಮ್ಮ ಸರದಿ. ನಾವು ಶಾಸಕರಲ್ಲವೆ? ನಮಗೆ ಶಾಸನ ಮಾಡುವುದಕ್ಕೆ ಬರುವುದಿಲ್ಲವೆ? ಇನ್ಸ್‌ಪೆಕ್ಷನ್ ಎಂದು ಸೇರಿಸಬೇಕೆಂದರೆ ಎರಡು ಮೂರು ತಿಂಗಳು ಕಾಯೋಣವೆಂದು ಹೇಳುತ್ತೀರಿ. ನೀವು ಹೇಳುತ್ತಿರುವುದು A Bill to provide for right to access information. ಆಕ್ಸೆಸ್ ಅಂದರೇನು? ಅದು ನನಗೆ ಗೊತ್ತಾಗಬೇಕಾಗಿದೆ. ಆಕ್ಸೆಸ್ ಅಂದರೆ ಎಂಟರಿ ಹಾಕಬೇಕೆನ್ನುವ ಮಾಹಿತಿ ಎಲ್ಲಿದೆ? ಅದಕ್ಕೆ ಇವತ್ತು ಅವಕಾಶ ಕೊಡದೆ ಆಕ್ಸೆಸ್ ಎನ್ನುವ ಪದಕ್ಕೆ ಡಿಕ್ಷನರಿ ಮೀನಿಂಗ್ ನೋಡಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರ ಅನುಭವ ಅವರ ಅನುಭವದಿಂದ ಸ್ವಲ್ಪ XXX

ಶ್ರೀ ಕಾಗೋಡುತಿಮ್ಮಪ್ಪ:— ಇದೇನು ಹೀಗೆಲ್ಲ ಮಾತನಾಡುತ್ತಿದ್ದಾರೆ, XXX ಎನ್ನುವ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು :— ಆ ಪದವನ್ನು ಕಡತದಿಂದ ತೆಗೆದುಹಾಕಿ.

ಶ್ರೀ ಎಸ್. ಸುರೇಶ್ ಕುಮಾರ್:— XXX ಎನ್ನುವ ಪದವನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಅವರಿಗೆ XXX ಇಲ್ಲ. ನನ್ನ ಪ್ರಶ್ನೆ ಏನೆಂದರೆ ಆಕ್ಸೆಸ್ ಎಂದು ಇರುವಾಗ ದಯುವಿಟ್ಟು ಇನ್‌ಪೆಕ್ಷನ್ ಎಂದು ಒಂದು ಪದ ಸೇರಿಸಿ. ರೂಲ್ಸ್‌ನಲ್ಲಿ ಮಾಡಿದರೆ ಏನೂ ಉಪಯೋಗವಿಲ್ಲ. ಹಾಗೆ ಮಾಡಿದರೆ ನಿಮ್ಮ ಮಾತಿಗೆ ನಿಮ್ಮ ಅಧ್ಯಯನಕ್ಕೆ ಸ್ವಲ್ಪ ಬೆಲೆ ಬರುತ್ತದೆ.

ಪ್ರೊ: ಬಿ.ಕೆ. ಚಂದ್ರಶೇಖರ್:— ಮಾನ್ಯ ಸುರೇಶ್ ಕುಮಾರ್‌ರವರಿಗೆ ಒಂದು ವಿಚಾರವನ್ನು ತಿಳಿಸಬೇಕಾಗಿದೆ. ಯಾವುದೋ ಒಂದೆರಡು ಲೇಜಿಸ್‌ಲೇಚರ್‌ನಲ್ಲಿ ಬಿಟ್ಟರೆ ಬೇರೆ ಎಲ್ಲೂ ಇಲ್ಲ. ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಿ. ನೀವು ಹೇಳುವುದನ್ನು ನಾನು ಕೇಳಿದ್ದೇನೆ. 18 ಲೆಜಿಸ್‌ಲೇಷನ್‌ಗಳನ್ನು ನಾನು ನೋಡಿದ್ದೇನೆ.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇನ್ಸ್‌ಪೆಕ್ಷನ್ ಅಂದರೆ there are other difficulties. ಆಕ್ಷನ್‌ಗೂ ಇನ್ಸ್‌ಪೆಕ್ಷನ್‌ಗೂ ಸಂಬಂಧವಿಲ್ಲ.

Sri S. SURESH KUMAR :— How can I know? ಇನ್‌ಫರ್ಮೇಶನ್ ಹೇಗೆ ಗೊತ್ತಾಗುತ್ತದೆ.

Prof. B.K. CHANDRASHEKAR :— I am telling you. There is a infrastructure corridor between Bangalore and Mysore.- ನಿಮ್ಮ ಮನಸ್ಸಿನಲ್ಲಿ ಏನಿದೆಯೆಂದು ನನಗೆ ಗೊತ್ತಿದೆ. You want to know how many acres of government land is being acquired, how many acres of private land is being acquired? ಇದಕ್ಕೆ ಇನ್ಸ್‌ಪೆಕ್ಷನ್ ಬೇಕಾ? ಇನ್‌ಪೆಕ್ಷನ್ ಮಾಡಿದಾಗ ನಿಮಗೆ ಏನು ಸಿಗುತ್ತದೆ? ನೂರರಲ್ಲಿ ತೊಂಬತ್ತೆಂಟು ಕೇಸುಗಳು ರೆವಿನ್ಯೂ ಡಿಪಾರ್ಟ್‌ಮೆಂಟ್‌ನದು. ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಇನ್ಸ್‌ಪೆಕ್ಷನ್ ಮಾಡಿದರೆ. ಯಾರಿಗೆ ಏನೂ ಗೊತ್ತಾಗುವುದಿಲ್ಲ. ನಿಮ್ಮಂತಹವರು ನಮ್ಮಂತಹವರಿಗೆ ಕುಳಿತುಕೊಂಡರೆ ಇನ್ಸ್‌ಪೆಕ್ಷನ್ ಗೊತ್ತಾಗುತ್ತದೆ. I am thinking of the ordinary situation. Let us not get carried away. ನಾನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತೇನೆ. ಇದು ಏನಾಗುತ್ತದೆ ನೋಡೋಣ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಮಂತ್ರಿಗಳು ಪ್ರೊಫೆಸರ್, ವಿದ್ಯಾರ್ಥಿಗಳಿಗೆ ಪಾಠ ಮಾಡಿ ರೂಢಿಯಾಗಿದೆ. ಅದು ನಮಗೆ ಪ್ರಾಬ್ಲಮ್. ಇನ್‌ಫರ್ಮೇಷನ್ ಎಲ್ಲಿಯೆಂದು ನಮಗೆ ಗೊತ್ತಾಗಬೇಕು.

ಪ್ರೊ: ಬಿ.ಕೆ. ಚಂದ್ರಶೇಖರ್ :— ಈ ವಿಧೇಯಕವನ್ನು ಅತ್ಯಂತ ಸುಲಭವಾಗಿ ಇಲ್ಲಿ ತಂದು ನಮಗೆ ಮೆಜಾರಿಟಿ ಇದೆ ಇದನ್ನು ಪಾಸ್ ಮಾಡಿಕೊಡಿಯೆಂದು ಎಂದು ಹೇಳಬಹುದಾಗಿತ್ತು. ಸಂಸದೀಯ ವ್ಯವಹಾರಗಳ ಇಲಾಖೆಯ ಅಧಿಕಾರಿಗಳು ಮೇಲ್ಮನೆಯಲ್ಲಿ ಇದನ್ನು ಮಂಡಿಸಿದೆಯೆಂದು ಹೇಳಿದರು. ಇದರಲ್ಲಿ ನನ್ನ ಕೈವಾಡ ಏನೂ ಇಲ್ಲ. ಅದನ್ನೆ ನೀವು ದೊಡ್ಡ ತಪ್ಪೆಂದು ಮಾಡಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ :— ಮೇಲ್ಮನೆಯಲ್ಲಿ ಸದಸ್ಯರು ಕೊಟ್ಟ ಸಲಹೆಗಳನ್ನು ಒಪ್ಪಿಕೊಳ್ಳುತ್ತೀರಿ. ಇಲ್ಲಿ ಒಂದನ್ನೂ ಒಪ್ಪಿಕೊಳ್ಳುವುದಿಲ್ಲ. ನಮ್ಮ ಹೌಸಿಗೆ ಗೌರವ ಕೊಡಬೇಕಾದರೆ ನಾವು ಕೊಟ್ಟಿರತಕ್ಕ ಸಲಹೆಗಳಲ್ಲಿ ಯಾವ ಯಾವುದನ್ನು ಇನ್‌ಕಾರ್ಪೊರೇಟ್ ಮಾಡುತ್ತೀರೆಂದು ಹೇಳಿ. ಸುಮ್ಮನೆ ನೈಸ್ ಮಾಡಿ ಮುಂದೆ ನೋಡೋಣವೆಂದು ಹೇಳುವುದನ್ನು ನೋಡಿದರೆ, ನೀವು ಹೌಸಿಗೆ ಗೌರವ ಕೊಡುತ್ತಿಲ್ಲ.

ಪ್ರೊ: ಬಿ.ಕೆ. ಚಂದ್ರಶೇಖರ್ :— ತಾವು ಈ ತರಹ ಹೇಳಬಾರದು. ಈ ಮನೆಗೆ ಗೌರವ ಕೊಡದಿರುವುದಕ್ಕಾಗುತ್ತದೆಯೆ?

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ನನ್ನ ಕ್ಷೇತ್ರದ ಜಡೇರಿ ಎನ್ನುವ ಗ್ರಾಮದಲ್ಲಿ ಪಹಣಿ ನೋಡುವುದಕ್ಕೆ ದೊಡ್ಡ ಜಗಳವೇ ಆಯಿತು. ಪಹಣಿ ನೋಡಿ ಅವನಿಗೆ ಯಾವುದೂ ಬೇಡ ಅದನ್ನು ಕಿತ್ತುಕೊಂಡು ಜೇಬಿನಲ್ಲಿಟ್ಟುಕೊಂಡು ಹೊರಟು ಹೋಗಿದ್ದಾರೆ. ಇದು ನನ್ನ ಸ್ವಂತ ಅನುಭವ, ಆ ಊರಿನ ಹೆಸರನ್ನು ಸಹ ಹೇಳಿದ್ದೇನೆ. ಈ ರೀತಿ ಮಾಡುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ :— ರೈಟ್ ಟು ಇನ್‌ಫರ್‌ಮೇಷನ್ ಇಲ್ಲದಿದ್ದರೆ ಹಾಗೆ ಮಾಡುತ್ತಾರೆ. ನನಗೆ ಸರ್ಟಿಫೈಡ್ ಕಾಪಿ ಬೇಡ. I want to know. Knowing is also right to information.

(ಅಡಚಣೆ)

ಶ್ರೀ ಬಿ.ಆರ್. ನೀಲಕಂಠಪ್ಪ :— ಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಕರೆದು ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ.

ಅಧ್ಯಕ್ಷರು :— ಇನ್ನು ಎರಡು ಮೂರು ನಿಮಿಷದಲ್ಲಿ ಮುಗಿಯುತ್ತದೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ಫೀಸ್ ಬಗ್ಗೆ ಹೇಳಿದ್ದಾರೆ. ರೂಲ್ಸ್‌ನಲ್ಲಿ ಅದನ್ನು ಮಾಡುತ್ತೇವೆ. ಇನ್ಸ್‌ಪೆಕ್ಷನ್ ಸೇರಿಸುವುದಕ್ಕೆ ಆಗುವುದಿಲ್ಲ. ದಯಮಾಡಿ ನಾಲ್ಕು ತಿಂಗಳು ಸಮಯ ಕೊಡಬೇಕಾಗುತ್ತದೆ. ದಯವಿಟ್ಟು ಒತ್ತಾಯ ಮಾಡಬೇಡಿಯೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. With the most of the intention I have come before you, and you are running the whole thing down.

ಶ್ರೀ ಎಸ್. ಸುರೇಶ್ ಕುಮಾರ್ :— ತಾವು ಪ್ರತಿಷ್ಠೆಯ ಮೇಲೆ ನಿಲ್ಲಬೇಡಿ. ನಾವೆಲ್ಲ ಹೊಗಳಿದ್ದೇವೆ, ಸ್ವಾಗತಿಸಿದ್ದೇವೆ, ಇರತಕ್ಕ ನ್ಯೂನತೆಗಳನ್ನು ತೋರಿಸಿದ್ದೇವೆ.

ಪ್ರೊ: ಬಿ.ಕೆ. ಚಂದ್ರಶೇಖರ್ :— ನಾವು ಪ್ರತಿಷ್ಠೆಯ ಮೇಲೆ ನಿಂತುಕೊಳ್ಳುತ್ತೇವೆಯೇ? ನಾವು ಜನರ ಪರವಾಗಿದ್ದೇವೆ. ಇಲ್ಲದಿದ್ದರೆ ಈ ಬಿಲ್ ಇಲ್ಲಿ ಬರುವುದಕ್ಕೆ ಸಾಧ್ಯವಾಗುತ್ತಿತ್ತೆ? ತಾವು ದಯವಿಟ್ಟು ಹಠ ಮಾಡಬಾರದು.

ಶ್ರೀ ಬಿ.ಹೆಚ್. ಬನ್ನಿಕೋಡ್ :— ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಇವರು ವಾದ ವಿವಾದಗಳನ್ನು ಮಾಡುತ್ತಿದ್ದರೆ ಸರಿಯಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :— ನಾವು ಹೊಗಳಿದ್ದು ಮಾತ್ರ ಎಲ್ಲಾ ಚೆನ್ನಾಗಿದೆ. ಆದರೆ ನಿಮಗೆ ನಮ್ಮ ಸಲಹೆಗಳು ಬೇಡ.

ಅಧ್ಯಕ್ಷರು :— ನಾನು ಎದ್ದು ನಿಂತ ಮೇಲೆ ನೀವು ಕುಳಿತುಕೊಳ್ಳಬೇಕು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. Please take your seat.

ಶ್ರೀ ಎಸ್. ಸುರೇಶ್ ಕುಮಾರ್ :— ನಾನು ನೋಡುತ್ತಿದ್ದೇನೆ, ಒಬ್ಬ ಸದಸ್ಯರಿಗೆ ತಾವು Don't talk ಎಂದು ಹೇಳಬಹುದಾ?

ಅಧ್ಯಕ್ಷರು :— ನಾನೆಲ್ಲಿ ಹೇಳಿದೆ?

ಶ್ರೀ ಎಸ್. ಸುರೇಶ್ ಕುಮಾರ್ :— Don't talk ಅಂದರೆ ಕನ್ನಡದಲ್ಲಿ ಬಾಯಿಮುಚ್ಚಿಕೊಂಡು ಕುಳಿತುಕೋ ಅಂತ

ಅಧ್ಯಕ್ಷರು :— Take your seat ಎಂದು ಹೇಳಿದ್ದು. ತಾವು ಕುಳಿತುಕೊಳ್ಳಿ ಮೇಲ್ಮನೆಗೆ ಇರುವ ಗೌರವ ಇದ್ದೇ ಇರುತ್ತದೆ. ಈ ಮನೆಗೆ ಇರುವ ಗೌರವ ಇದ್ದೇ ಇರುತ್ತದೆ. ಸುಮ್ಮನೆ ಏಕೆ ಅದನ್ನು ಜಾಸ್ತಿ ಮಾಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಇದನ್ನು ಇನ್ಸಿಸ್ಟ್ ಮಾಡುತ್ತಿರಲಿಲ್ಲ. ಆಗಸ್ಟ್‌ನಲ್ಲಿ ಆರ್ಡಿನೆನ್ಸ್ ಮಾಡಿಕೊಂಡು ಮಾಡಿದ್ದೀರಿ. ಅದರಿಂದಾಗಿ ಇವರು ಸಜೆಶನ್ಸ್ ಮಾಡಿರತಕ್ಕಂಥಾದ್ದು

7.30 ಪಿ.ಎಂ.

This is an Ordinance replacement bill ಅವರು ಅದರ ಬಗ್ಗೆ ಏಕೆ ಅಷ್ಟೊಂದು ಪ್ರತಿಷ್ಠೆಯಾಗಿ ಮಾಡಿಕೊಂಡಿದ್ದಾರೋ ನಮಗಂತೂ ಅರ್ಥವಾಗುತ್ತಿಲ್ಲ.

ಪ್ರೊ: ಬಿ.ಕೆ. ಚಂದ್ರಶೇಖರ್ :— ``Bar of jurisdiction " ಬಗ್ಗೆ ಮಾತನಾಡಿದ್ದಾರೆ. ನಾನು ಇಷ್ಟು ಹೇಳುತ್ತೇನೆ. ಇದರ ಅರ್ಥ ಇಷ್ಟೇನೆ. It is a legislation including Central draft on ``Right to Information" ಮೊದಲು ಈ ಕಾನೂನು ಅಥವಾ ಮಸೂದೆಯಲ್ಲಿ ಇಂಟರ್‌ನಲ್ ಪ್ರೊಸೀಜರ್ ಏನು ಕೊಟ್ಟಿರುತ್ತಾರೆ ಅಪೀಲು, ಅದನ್ನು ಎಕ್ಸಾಸ್ಟ್ ಮಾಡಿ ಆಮೇಲೆ ಕೋರ್ಟಿಗೆ ಹೋಗಬೇಕು ಎಂದಿದೆ. ನಾವು ರಿಟ್ ಜ್ಯೂರಿಸ್ಡಿಕ್‌ಶನ್‌ನಲ್ಲಿ ಆರ್ಟಿಕಲ್ 226 ಅಥವಾ 32 ರಲ್ಲಿ ಹೋಗುವುದನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಇದು ಒಂದು -general provision. It does't not prevent anybody from going to court of law. ನಾನು ಇಟು ಹೇಳುತ್ತೇನೆ. ಹಲವಾರು ಸಲಹೆಗಳನ್ನು ಬಹಳ ಎಚ್ಚರಿಕೆಯಿಂದ ಕೇಳಿ ನಾನು ಬರೆದುಕೊಂಡಿದ್ದೇನೆ. ದಯಮಾಡಿ

ನಮಗೆ ಇದನ್ನು ಅನುಮೋದನೆ ಮಾಡಿಕೊಡಿ. ತಮ್ಮ ಜೊತೆಯಲ್ಲಿ ನಾನು ಬೇಕಾದರೆ ಕುಳಿತುಕೊಂಡು, ಒಂದು ಸಣ್ಣ ಗ್ರೂಪ್ ಮಾಡೋಣ. ಮೂರು-ನಾಲ್ಕು ತಿಂಗಳಾದ ಮೇಲೆ ನೋಡೋಣ. ಸಾಮಾನ್ಯವಾಗಿ ಎಲ್ಲರೂ ಅನುಮೋದಿಸಿದ್ದೀರಿ. ಇಲ್ಲಿ ಅಡಿಷನಲ್ ಆಗಿ ಏನು ಬೇಕು ಎಂದು ಒಂದೆರಡು ಪಾಯಿಂಟ್‌ಗಳನ್ನು ಸಜೆಸ್ಟ್ ಮಾಡಿದ್ದೀರಿ. ನಾಲ್ಕು ತಿಂಗಳು ಐದು ತಿಂಗಳು ಆದಮೇಲೆ, ಸ್ವಲ್ಪ ಅನುಭವ ನೋಡಿ ನಿಮಗೆ ಸಮಾಧಾನವಾಗಬಹುದು. ಅಗತ್ಯ ಬಿದ್ದರೆ ಆರ್ಡಿನೆನ್ಸ್ ಮೂಲಕ ಬೇಕಾದರೆ ನಾವು ತರೋಣ. ದಯವಿಟ್ಟು ತಾವು ಇದನ್ನು ಒಪ್ಪಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ಈಗ ತಾವು ಹೇಳಿದಿರಿ ಏನೆಂದರೆ, ಗೋವಾಕ್ಕಿಂತಲೂ ನಮ್ಮದು ಸ್ವಲ್ಪ ಪ್ರೋಗ್ರೆಸ್ಸಿವ್ ಆಗಿದೆಯೆಂದು. ಗೋವಾ ರಾಜ್ಯದಲ್ಲಿ ಇವೆರಡಕ್ಕೂ ಪ್ರಾವಿಜನ್ ಮಾಡಿದ್ದಾರೆ. ಒಂದು -``Right to information" means right to access to information and include inspection of works, documents, records, taking notes and extracts and obtaining certified copis of dccuments. ಇನ್ನೊಂದು -``State Council for Right to Information" ಈ ಎರಡೂ ಪ್ರಾವಿಜನ್‌ಗಳನ್ನು ತಾವು ಒಪ್ಪಿಕೊಂಡರೆ ನಾವು ಎಲ್ಲರೂ ತುಂಬುಹೃದಯದಿಂದ ಸಹಕಾರ ಕೊಡುತ್ತೇವೆ.

ಶ್ರೀ ಎ. ರಾಮದಾಸ್:— ಇದು ಇನ್ನೂ ಪ್ರೋಗ್ರೆಸ್ಸಿವ್ ಆಗಲಿ ಎಂದು ಅಷ್ಟೇ ಹೊರತು ಬೇರೆ ಇನ್ನೇನೂ ಭಾವನೆಯಿಂದ ಅಲ್ಲ. ಜೊತೆಗೆ 10ನೇಯದ್ದನ್ನು ತಾವು ಹೇಳಿದಿರಿ. ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಈ ತರಹ ಏನಾದರೂ ಮಾಹಿತಿಯನ್ನು ಕೊಡದೇ ಇದ್ದಂಥ ಸಂಬಂಧದಲ್ಲಿ ನಾವು ನ್ಯಾಯಾಲಯಕ್ಕೆ ಹೋಗಿ ಕೇಳುವಂಥ ಪ್ರಾವಿಜನ್ ಕೂಡ ಸೆಕ್ಷನ್ 10ರಲ್ಲಿ ತೆಗೆದುಬಿಟ್ಟಿದ್ದೀರಿ. ದಯವಿಟ್ಟು ಇದನ್ನು ಇಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ತಾವು ಲಾ ಮಿನಿಸ್ಟರ್ ಆಗಿದ್ದಿರಿ. ಈಗ ಮೊದಲು ಅಲ್ಲಿ ಇಂಟ್ರೊಡ್ಯೂಸ್ ಮಾಡಿ ಅನೇಕ ಸಜೆಶನ್ಸ್ ಒಪ್ಪಿಕೊಂಡಿರಿ. ಇಲ್ಲಿ ಬರೇ post-facto approval ತರಹ, ಇಲ್ಲಿ ಪೋಸ್ಟ್ ಮಾರ್ಟಮ್ ತರಹ ತಂದಿದ್ದೀರಿ. ಈ ಸದನ ಜನಪ್ರತಿನಿಧಿಗಳಿಂದ ಕೂಡಿರತಕ್ಕಂಥಾದ್ದು. ತಾವು ಇದನ್ನು ಗೌರವದಿಂದ ಕಾಣುತ್ತಿಲ್ಲ ಅಂತ ಅಲ್ಲ. ಸದನದ ಬಗ್ಗೆ ನಮಗೆ ಗೌರವ ಇದೆ. ಆದರೆ ಇಂತಹ ಪ್ರಮುಖವಾದಂಥ ಬಿಲ್‌ನ್ನು ನಾವು ಚರ್ಚೆ ಮಾಡಿದ್ದೇವೆ, ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ನಾವು ಕೊಟ್ಟಿರತಕ್ಕಂಥ ಸಲಹೆಗಳು ಬಹಳ ಉಪಯುಕ್ತವಾಗಿವೆ, ಅವರು ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಆದರೆ ಅವರು ಒಂದೆರಡನ್ನು ಒಪ್ಪಿಕೊಳ್ಳದಿದ್ದರೆ ಏನಾಗುತ್ತದೆ? ಈಗ

ಏನಾಗಿದೆ ಎಂದರೆ ದರೋಡೆಕೋರರು ಎಲ್ಲ ದೋಚಿಕೊಂಡು ಹೋದಮೇಲೆ ಕೋಟೆ ಬಾಗಿಲು ಹಾಕಿದ ಹಾಗೆ ಆಯಿತು. ಈಗ ನಿಮ್ಮ ನಾಯಕರೇ ಹೇಳುತ್ತಿದ್ದರು, ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಟಿ ಮಾಡಿದ್ದೇವೆ ಎಂದು. ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್ ಅಂತ ಮಾಡಿ ಟ್ರಾನ್ಸ್‌ಫರ್ಸ್ ನಾವೇನೂ ತೆಗೆದುಕೊಳ್ಳುವುದಿಲ್ಲ. Transfers will be left to the establishment board, ಅಂತ ಮಾಡಿ ಸಾಕು. ಮುಖ್ಯಮಂತ್ರಿಗಳೇ ನಮ್ಮ ನಮ್ಮ ಕ್ಷೇತ್ರದಲ್ಲಿ ಎಂಟೆಂಟು ಜನರಿಗೆ ಮೂರು ಮೂರು ಟ್ರಾನ್ಸ್‌ಫರ್ಸ್ ಮಾಡಿದ್ದಾರೆ. ಹೀಗಿರುವಾಗ ಇಂಥಾದ್ದರಲ್ಲೂ ನಾವು ಸಹಕಾರ ಕೊಡುತ್ತಿದ್ದೇವೆ. ಹತ್ತು ವರ್ಷದಿಂದ ಆದಗೇ ಇರತಕ್ಕಂಥ ಟ್ರಾನ್ಸ್‌ಫರ್‌ನ್ನು ಒಂದು ವರ್ಷದಲ್ಲಿ ಮಾಡಿದ್ದೀರಿ. ಇದು ಟ್ರಾನ್ಸ್‌ಪರೆನ್ಸಿಯನ್ನು ತೋರಿಸುತ್ತದೆಯೇ? ಯಾವ ಖುಷಿಗೆ ಇದನ್ನು ಮಾಡುತ್ತಿದ್ದೀರಿ? ಕೊನೆಪಕ್ಷ ಈ ಎರಡನ್ನು ಒಪ್ಪಿಕೊಳ್ಳುವದಕ್ಕೆ ಆಗುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು :— ಮಿ. ಚಂದ್ರಶೇಖರ್, ತಾವು ಮೊದಲು ವಿಧೇಯಕವನ್ನು ಈ ಮನೆಯಲ್ಲಿ ಇಂಟ್ರೊಡ್ಯೂಸ್ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ.

ಶ್ರೀ ಬಿ. ಸೋಮಶೇಖರ್ :— ಮೊದಲು ಇಲ್ಲಿ ಇಂಟ್ರೊಡ್ಯೂಸ್ ಮಾಡಬೇಕಿತ್ತು. ನಾನು ಅದನ್ನೇ ಹೇಳಿದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :— ತಾವು ಹೇಳಿದ್ದು ಸರಿ. Unfortuantely, Legislative Assembly has become a `rubber stamp' to approve whatever the other House has approved.

ಅಧ್ಯಕ್ಷರು :— ಆಯಿತು ಬಿಡಿ. In future, you see that all the Bills are introduced here.

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ಅಲ್ಲಿ ಕುಳಿತು ಹೀಗೆ ಹೇಳಿಬಿಟ್ಟರೆ ಹೇಗೆ? ಮಾನ್ಯ ಸಭಾಧ್ಯಕ್ಷರೇ, ಸಂಸದೀಯ ನಡವಳಿಕೆಯಲ್ಲಿ..... ಇವತ್ತು ಗ್ರಾಮೀಣ ಕೃಪಾಂಕ ಬಿಲ್‌ನ್ನು ಇಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೇವೆ. ಇಲ್ಲ ಅಂತ ಅಲ್ಲ. ಇದು ಏನಾಗಿದೆ ಎಂದರೆ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು ಅಂತ ಆಗಿದೆ. ಅವರು ಹಾಗೆ ಅಂದರೆ ತಾವು ಅದಕ್ಕೆ ಧ್ವನಿ ಕೂಡಿಸಿದರೆ ಕಷ್ಟವಾಗುತ್ತದೆ.

ಅಧ್ಯಕ್ಷರು :— ಪ್ರಾವಿಜನ್ ಇದ್ದರೂ ಸಹ ಇಲ್ಲಿ ಮಂಡಿಸ ಬಹುದಾಗಿತ್ತಲ್ಲ? ಇದು ಧ್ವನಿಕೂಡಿಸುವ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ :— ಅಲ್ಲಿ ಮೆಜಾರಿಟಿ ಇಲ್ಲವೆಂದು ಹೇಳಿ ಬೇಕಾದಹಾಗೆ ಮಾಡಿಕೊಂಡು ಇಲ್ಲಿ ಮೆಜಾರಿಟಿ ಇದೆ ಎಂದು ಹೀಗೆ ತರುವುದಾದರೆ.......

(ಗೊಂದಲ, ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು :— ದಯವಿಟ್ಟು ಒಬ್ಬೊಬ್ಬರೇ ಮಾತನಾಡಿ. ಮಾನ್ಯ ಬಚ್ಚೇಗೌಡರೇ, ನಿಮ್ಮ ನಾಯಕರು ಮಾತನಾಡುವಾಗ ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ನಾನು ಪ್ರಾಮಾಣಿಕವಾಗಿ ಮಾನ್ಯ ಸಚಿವರಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಈಗ ತಮ್ಮ ಕಾಳಜಿ ಬಗ್ಗೆ, ಕಮಿಟ್‌ಮೆಂಟ್ ಬಗ್ಗೆ ನಾವು ಯಾರೂ ಪ್ರಶ್ನೆ ಮಾಡಿಲ್ಲ. ತಾವು ಇದನ್ನೆಲ್ಲ ಅರ್ಥಮಾಡಿಕೊಂಡು ಅನಾವಶ್ಯಕವಾಗಿ provocation ಮಾಡುತ್ತಿದ್ದೀರಿ. ಇದೇ ಗ್ರಾಮೀಣ ಕೃಪಾಂಕದ ಬಗ್ಗೆ ಮಾತನಾಡುವಾಗ ನಮ್ಮನ್ನು ನೀವು ಕನ್ಸಲ್ಟ್ ಮಾಡಿದ್ದೀರಾ? ಅದು ಸುಪ್ರೀಂಕೋರ್ಟ್, ಹೈಕೋರ್ಟಿನಲ್ಲಿ ಆಗಲಿಲ್ಲ, ಸದುದ್ದೇಶದಿಂದ ಮಾಡಿದ್ದೀರಿ ಎಂದು ಸಹಕಾರ ಕೊಟ್ಟೆವು. ಎಲ್ಲ ಸಭೆಗಳಿಗೆ ಬಂದು ನಮ್ಮ ಸಲಹೆಗಳನ್ನು ಕೂಡ ಕೊಟ್ಟಿದ್ದೇವೆ. ಬೆಳಿಗ್ಗೆ ನಾವು ಏನು ಹೇಳಿದ್ದೇವೆ? ನೀವು ಒಂದು ಸದುದ್ದೇಶದಿಂದ ಇಲ್ಲಿ ಮಸೂದೆಯನ್ನು ಮಂಡನೆ ಮಾಡಿದ್ದೀರಿ. ಇದರ ಬಗ್ಗೆ ನಿಮಗೂ ಸಂಶಯ ಇದೆ. ನಿಮ್ಮ ಆತ್ಮ ವಿಮರ್ಶೆ ಮಾಡಿಕೊಂಡು ನೀವು ಉತ್ತರ ಕೊಡಿ. ಈ ಕಾನೂನು ನಿಲ್ಲುವುದಿಲ್ಲ ಎಂದು ನಿಮಗೆ ಸಂಶಯ ಇದೆ. ನಾವು ಒಂದು ದಿವಸ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಈ ಕಾನೂನು ನಿಲ್ಲುವುದಿಲ್ಲ ಎನ್ನುವುದು ಸಹಿತ ನಿಮಗೆ ಗೊತ್ತಿದೆ. ಆದರೂ ಸಹಿತ ಮಾಡಿದ್ದೇವೆ. ನಾವು ಯಾಕೆ ಇದರಲ್ಲಿ ಪಾರ್ಟಿಯಾಗಲಿಲ್ಲ? because we have some difference of opinion. ಆದಕ್ಕೋಸ್ಕರವಾಗಿ ಮಾನ್ಯ ಸೋಮಶೇಖರ್‌ರವರು ಮಾನ್ಯ ಬಿ.ಕೆ. ಚಂದ್ರಶೇಖರ್ ಅವರಿಗೆ ನಾವು ಇದನ್ನು ಓದಿ ಇಲ್ಲಿ ಏನು ಸ್ಕ್ರೂಟಿನಿ ಆಗಿದ್ದರ ಮೇಲೆ ನಾವು ಎರಡು ಸಲಹೆಗಳನ್ನು ಕೊಟ್ಟಿದ್ದೇವೆ ಎಂದರೆ ಅದನ್ನು ಪರಿಶೀಲನೆ ಮಾಡತಕ್ಕಂಥ ಭರವಸೆಯೂ ಇಲ್ಲ. ಅದು ನೋಡೋಣ, ನಾಲ್ಕು ತಿಂಗಳು ಆದಮೇಲೆ ಕುಳಿತುಕೊಳ್ಳೋಣ ಎಂದರೆ ಈ ಸದನಕ್ಕೆ ನಮಗೆಲ್ಲರಿಗೂ ಕೂಡ ಎಷ್ಟು ಗೌರವ ಸಿಗುತ್ತದೆ ಎನ್ನುವುದನ್ನು ಮಾನ್ಯ ಚಂದ್ರಶೇಖರ್ ಅವರು ಯೋಚನೆ ಮಾಡಲಿ ಎಂದಷ್ಟೇ ನನ್ನ ಪ್ರಶ್ನೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಇವತ್ತು ಇದು ಪ್ರೋಗ್ರೆಸ್ಸಿವ್ ಬಿಲ್ ಇದೆ ಎಂದು ಹೇಳಿ ನಾವು ಒಪ್ಪಿಕೊಳ್ಳುತ್ತಿದ್ದೇವೆ. ಮತ್ತು ಇದನ್ನು ಸ್ವಾಗತ ಕೂಡ ಮಾಡಿದ್ದೇವೆ. ಇದಕ್ಕೆ ಕೆಲವೊಂದು ಚಿಕ್ಕ ತಿದ್ದುಪಡಿಗಳು ಆಗಬೇಕು. 'ಇನ್ಸ್‌ಪೆಕ್ಷನ್'

ಶಬ್ದವನ್ನು ಸೇರಿಸಿದರೆ ಒಳ್ಳೆಯದು. ಸೋಮಶೇಖರ್ ಅವರು ಕೆಲವೊಂದು ಬದಲಾವಣೆ ಮಾಡಬೇಕೆಂದು ಹೇಳಿದರು. ಅಂದರೆ ಈ ಆಕ್ಟನ್ನು ಇನ್ನೂ ಸ್ವಲ್ಪ ಶಕ್ತಿಯುತವಾಗಿ ಮಾಡುವುದಕ್ಕೆ ನಾವು ಸಲಹೆಗಳನ್ನು ಮಾಡಿದ್ದು, ಅವರ ಸಲುವಾಗಿ ಮಾನ್ಯ ಚಂದ್ರಶೇಖರ್ ಅವರು ಇದನ್ನು ಅರ್ಥಮಾಡಿಕೊಂಡಿದ್ದಾರೆ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. 'ಇನ್ಸ್‌ಪೆಕ್ಷನ್'ಎನ್ನುವುದು ಸೇರಿಸುವ ಬಗ್ಗೆಯಾಗಲೀ, ಸೋಮಶೇಖರ್ ಅವರು ಹೇಳಿದ ಶಬ್ದವನ್ನು ಸೇರಿಸುವ ಬಗ್ಗೆಯಾಗಲಿ ಅವರು ಅದನ್ನು ನಿರಾಕರಿಸಿಲ್ಲ. ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೀರಿ. ಆದರೆ ಇವತ್ತು ತಿದ್ದುಪಡಿ ಮಾಡಿದರೆ ಏನೂ ತಪ್ಪಾಗುವುದಿಲ್ಲ. ನಾಳೆ ಅಲ್ಲಿ ಕೌನ್ಸಿಲ್‌ಗೆ ಹೋಗಿ ತೆಗೆದುಕೊಳ್ಳಿ. ಇದನ್ನು ತಾವು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದು ಬೇಡ; ಈ ಸೂಚನೆಗಳನ್ನು ನಾವು ಈ ಕಾನೂನನ್ನು ಮತ್ತಷ್ಟು ಶಕ್ತಿಯುತವಾಗಿ ಮಾಡುವ ಸಲುವಾಗಿ ಮಾಡಿರುವಂಥಾದ್ದು. ಅದರ ಸಲುವಾಗಿ ಇದನ್ನು ಕನ್ಸಿಡರ್ ಮಾಡಿ, ಇವುಗಳು ಉಪಯುಕ್ತ ಸಲಹೆಗಳನ್ನು ಪರಿಗಣಿಸಿ ಅವುಗಳನ್ನು ಸೇರಿಸಿಕೊಂಡು ತಿದ್ದುಪಡಿ ಮಾಡಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು :— ನಿಮ್ಮ ಉತ್ತರ ಮುಗಿಯಿತು ತಾನೆ?

ಪ್ರೊ: ಬಿ.ಕೆ. ಚಂದ್ರಶೇಖರ್ :— ನಾನು ಅತ್ಯಂತ ವಿನಮ್ರತೆಯಿಂದ ತಾವು ಹೇಳಿರುವ ವಿಚಾರಗಳನ್ನು ಪರಿಶೀಲನೆ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ. ಅಷ್ಟೇ ಅಲ್ಲ ತಾತ್ವಿಕವಾಗಿ ಈ ವಿಚಾರವನ್ನು ನಾನು ಒಪ್ಪಿಕೊಂಡಿದ್ದೇನೆ. ಆದರೆ ಸಮಯ ಕೊಡಿ ಎಂದು ಹೇಳಿದ್ದು ತಪ್ಪಿಸಬೇಕು ಅಂತಲ್ಲ. ಅವರು ಅನುಭವ ಏನಾಗುತ್ತದೆ ಎಂದು ಸ್ವಲ್ಪ ನೋಡೋಣ, ನಂತರ ಮಾಡೋಣ ಎಂದು ಹೇಳಿದ್ದೇನೆ. ಬೇರೆ ಯಾವ ಉದ್ದೇಶವೂ ನನಗೆ ಇಲ್ಲ. ಆ ಒಂದು ಹಿನ್ನಲೆಯಲ್ಲಿ ಇದನ್ನು ದಯಮಾಡಿ ಅಂಗೀಕಾರ ಮಾಡಬೇಕೆಂದು ತಮ್ಮ ಮೂಲಕ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ - "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

<u>ಖಂಡ 2 ರಿಂದ 13 ರವರೆಗೆ</u>

ಅಧ್ಯಕ್ಷರು :— "ಖಂಡ 2 ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 13ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1_ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ-

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೊ: ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರಚಾರ ಇಲಾಖೆ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

8. (ii) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ, 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಶಿವಣ್ಣ (ಹಣಕಾಸಿನ ರಾಜ್ಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೇ "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಎಂ. ಶಿವಣ್ಣ (ಹಣಕಾಸಿನ ರಾಜ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭದಲ್ಲೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದು ಸೂಕ್ತವೆಂದು ಭಾವನೆ ಮಾಡಿದ್ದೇನೆ. 1999ರಲ್ಲೇ ಈ ಮಸೂದೆಯನ್ನು ಹಿಂದಿನ ಸರ್ಕಾರದಲ್ಲಿ ವಿಧಾನ